ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಆರ್ಥಿಕ ನೆರವು ಹೆಚ್ಚಿಸದಿದ್ದರೆ 'ಎಲ್ಲರಿಗೂ ಸೂರು' ಕನಸಾದೀತು
ಬಾಹ್ಯಾಕಾಶದಲ್ಲಿ ಬೆಳೆ; ಇಸ್ರೊ ಪ್ರಯೋಗ 11
ಕ್ರೆಡಿಟ್ ಸ್ಕೋರ್: ಹೆಚ್ಚಿಸುವುದು ಹೇಗೆ? 10
'ರವಿ ಬಯ್ಯುಳದ ಆಡಿಯೊ, ವಿಡಿಯೊ ಇವೆ' 5
ಮೋದಿ- ಕುವೈತ್ ರಾಜ ಮಾತುಕತೆ 11

ನುಡಿ ಜಾತ್ರೆ: ದಲಿತ, ಲೈಂಗಿಕ ಅಲ್ಪಸಂಖ್ಯಾತ, ಮಹಿಳೆ ಪರ ಧ್ವನಿ ● ವಿವಿಧ ವಿಚಾರ ಕುರಿತು ಅತೃಪ್ತಿ ವ್ಯಕ್ತ

ಸಮ್ಮಾನ, ಪ್ರತಿಭಟನೆ ಜಂಟಿಯಾನ

● ಕೆ.ನರಸಿಂಹಮೂರ್ತಿ

ಮಂಡ್ಯ: ಲೈಂಗಿಕ ಅಲ್ಪಸಂಖ್ಯಾತರು, ದಲಿತರು, ಮಹಿಳೆಯರು ಮತ್ತು ಮಕ್ಕಳ ಪರವಾದ ವೈವಿಧ್ಯಮಯ ಧ್ವನಿ-ಆಗ್ರಹಗಳಿಗೆ ಗಟ್ಟಿ ವೇದಿಕೆಗಳನ್ನು ಕಲ್ಪಿಸಿದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಸಮ್ಮಾನ, ಪ್ರತಿಭಟನೆಗಳ ಜಂಟಿಯಾನದಲ್ಲೇ ಭಾನುವಾರ ಸಮಾರೋಪಗೊಂಡಿತು.

ಜಾಗತಿಕ ನೆಲೆಯಲ್ಲಿ ಮತ್ತು ಗಡಿನಾಡಿನಲ್ಲಿ ಕನ್ನಡ ಕಟ್ಟುವ ಬಗೆ, ಕನ್ನಡ ಶಾಲೆಗಳ ಸಬಲೀಕರಣಕ್ಕೆ ದಾರಿಗಳ ಹುಡುಕಾಟದ ನಡುವೆಯೇ ಆಂಧ್ರ ಗಡಿನಾಡ ಕನ್ನಡಿಗರ ಪ್ರತಿಭಟನೆಗೂ ನುಡಿ ಜಾತ್ರೆ ಸಾಕ್ಷಿಯಾಯಿತು. ಬಾಡೂಟ ಬಳಗದ ಸದಸ್ಯರು ಮತ್ತು ಪ್ರಗತಿಪರ ಸಂಘಟನೆಗಳ ಮುಖಂಡರ ಒತ್ತಾಯಕ್ಕೆ ಮಣಿದ ಜಿಲ್ಲಾಡಳಿತವು ಕಡೆಯ ದಿನವಾದ ಭಾನುವಾರ ರಾತ್ರಿ ಊಟದೊಂದಿಗೆ ಬೇಯಿಸಿದ ಕೋಳಿಮೊಟ್ಟೆಗಳನ್ನು ವಿತರಿಸುವ ಮೂಲಕ, ಸಮ್ಮೇಳನದ ಇತಿಹಾಸದಲ್ಲಿ ಮಾಂಸಾಹಾರಕ್ಕೆ ಮುನ್ನುಡಿ ಬರೆಯಿತು.

7ನೇ ಪುಟ ನೋಡಿ

ಮಂಡ್ಯದಲ್ಲಿ ಭಾನುವಾರ ಮೈಸೂರಿನ 'ಕರ್ನಾಟಕ ಪೊಲೀಸ್ ಬ್ಯಾಂಡ್' ಕಾರ್ಯಕ್ರಮದೊಂದಿಗೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತೆರೆಬಿತ್ತು. ಸಾಹಿತ್ಯ ಸಮ್ಮೇಳನದಲ್ಲಿ ಇದೇ ಮೊದಲ ಬಾರಿಗೆ 'ಪೊಲೀಸ್ ಬ್ಯಾಂಡ್' ಬಳಕೆಯಾಯಿತು ಚಿತ್ರ: ಅನೂಪ್ ರಾಘ್ ಟಿ.

ಮಾಂಸಾಹಾರಕ್ಕೆ ಮಂಡ್ಯ ಸಮ್ಮೇಳನ ಮುನ್ನುಡಿ

ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಮಾಂಸಾಹಾರ ನಿಷೇಧ ಎಂದು ನಿಬಂಧನೆ ಹಾಕಿದ್ದರಿಂದ, ಪ್ರಗತಿಪರ ಸಂಘಟನೆಗಳ ಮುಖಂಡರು ತೀವ್ರ ಆಕ್ರೋಶ ವ್ಯಕ್ತಪಡಿಸಿ, ಆಹಾರ ಸಮಾನತೆ ಕಾಪಾಡುವಂತೆ ಆಗ್ರಹಿಸಿದ್ದರು. 'ಉಸ್ತುವಾರಿ ಸಚಿವರು ಪ್ರತಿಭಟನಕಾರರೊಂದಿಗೆ ಮಾತುಕತೆ ನಡೆಸಿ ಕೊನೆ ದಿನ ಬೇಯಿಸಿದ ಮೊಟ್ಟೆ ವಿತರಿಸುವುದಾಗಿ ಭರವಸೆ ನೀಡಿದ್ದರು. ಅದರಂತೆ ಅವರು ನುಡಿದಂತೆ ನಡೆದಿದ್ದಾರೆ. ನಮ್ಮ ಹೋರಾಟಕ್ಕೆ ಜಯ ಸಿಕ್ಕಿದೆ' ಎಂದು ಬಾಡೂಟ ಬಳಗದ ಸದಸ್ಯರು ಸಂತಸ ವ್ಯಕ್ತಪಡಿಸಿದರು. ಬಳಗದ ಸದಸ್ಯರು ಇದಕ್ಕೂ ಮುನ್ನ ಮಧ್ಯಾಹ್ನ ತಾವು ತಂದಿದ್ದ ಚಿಕನ್ ಸಾಂಬಾರ್, ರಾಗಿ ಮುದ್ದೆ, ಕಬಾಬ್ ಮತ್ತು ಕೋಳಿಮೊಟ್ಟೆಯನ್ನು ಆಹಾರ ಕೌಂಟರ್‌ನಲ್ಲಿ ವಿತರಿಸಿದ್ದರು.

2.76 ಲಕ್ಷ ಹುದ್ದೆಗಳು ಖಾಲಿ

1.45 ಲಕ್ಷ ನಿರುದ್ಯೋಗಿಗಳಿಗೆ ₹172.78 ಕೋಟಿ ಖರ್ಚು

● ಹರಿಶಂಕರ ಆರ್.

ಬಳ್ಳಾರಿ: ರಾಜ್ಯದ 43 ಇಲಾಖೆಗಳಲ್ಲಿ ಒಟ್ಟಾರೆ 2.76 ಲಕ್ಷ (2,76,386) ಹುದ್ದೆಗಳು ಖಾಲಿ ಉಳಿದಿರುವುದಾಗಿ ಸರ್ಕಾರದ ಅಧಿಕೃತ ಮಾಹಿತಿಯಿಂದ ಗೊತ್ತಾಗಿದೆ.

'ಇದರಲ್ಲಿ 'ಎ' ದರ್ಜೆಯ 16,017 ಹುದ್ದೆಗಳು ಖಾಲಿ ಇದ್ದರೆ, 'ಬಿ' ದರ್ಜೆಯ 16,734, 'ಸಿ' ದರ್ಜೆಯ 1,66,021, 'ಡಿ' ದರ್ಜೆಯ 77,614 ಹುದ್ದೆಗಳು ಖಾಲಿಯಾಗಿವೆ' ಎಂದು ಸರ್ಕಾರ ತಿಳಿಸಿದೆ.

'ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯೊಂದರಲ್ಲೇ 70,727 ಹುದ್ದೆಗಳು ಖಾಲಿ ಉಳಿದಿವೆ. ನಂತರದ ಸ್ಥಾನದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಇದೆ. ಇಲ್ಲಿ 37,069 ಹುದ್ದೆಗಳು ಭರ್ತಿಯಾಗಬೇಕಿವೆ. ಆ ಬಳಿಕ, ಒಳಾಡಳಿತ ಇಲಾಖೆಯಲ್ಲಿ 26,168 ಹುದ್ದೆಗಳು, ಕಂದಾಯ ಇಲಾಖೆಯಲ್ಲಿ 11,145, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ 10,898 ಹುದ್ದೆಗಳು ಭರ್ತಿಯಾಗಲು ಕಾಯುತ್ತಿವೆ' ಎಂಬುದು ವಿಧಾನಸಭೆಯಲ್ಲಿ ಸರ್ಕಾರ ನೀಡಿರುವ ಲಿಖಿತ ಉತ್ತರದಿಂದ ಗೊತ್ತಾಗಿದೆ. ಮುಖ್ಯಮಂತ್ರಿಯವರೇ ಈ ಮಾಹಿತಿ ನೀಡಿದ್ದಾರೆ.

ಹುದ್ದೆಗಳು ಖಾಲಿ ಇರುವುದರಿಂದ ಆಡಳಿತದ ಮೇಲೆ ಉಂಟಾಗಿರುವ ಒತ್ತಡ, ಸಮಸ್ಯೆ ನಿವಾರಣೆಗೆ ಕೈಗೊಂಡಿರುವ ಕ್ರಮಗಳ ಬಗ್ಗೆ ಸರ್ಕಾರ ಸಮಜಾಯಿಷಿ ನೀಡಿದೆ. 'ರಾಜ್ಯದಲ್ಲಿ ಆರ್ಥಿಕ ಮಿತವ್ಯಯ ಜಾರಿಯಲ್ಲಿದೆ. ಆದರೂ, ಖಾಲಿ ಹುದ್ದೆಗಳ ಭರ್ತಿಗೆ ಇಲಾಖೆಗಳಿಂದ ಆರ್ಥಿಕ ಇಲಾಖೆಗೆ ಪ್ರಸ್ತಾವಗಳು ಸಲ್ಲಿಕೆಯಾಗಿವೆ. ಅವುಗಳನ್ನು ಪರಿಶೀಲಿಸಿ, ಅಗತ್ಯಕ್ಕೆ ಅನುಗುಣವಾಗಿ ಹುದ್ದೆಗಳ ಭರ್ತಿಗೆ ಸಮ್ಮತಿ ನೀಡಲಾಗುತ್ತಿದೆ. ಮಂಜೂರಾಗಿ ಖಾಲಿಯಿರುವ ಹುದ್ದೆಗಳಿಗೆ ಪ್ರತಿಯಾಗಿ, ಅರ್ಹ ಸಿಬ್ಬಂದಿ, ಅಧಿಕಾರಿಗಳಿಗೆ ಹೆಚ್ಚುವರಿ ಹೊಣೆಗಾರಿಕೆ, ಭತ್ಯೆ ನೀಡಲಾಗುತ್ತಿದೆ' ಎಂದು ಸರ್ಕಾರ ಹೇಳಿದೆ.

ಗ್ರೂಪ್-ಸಿ ವೃಂದದ 96,844 ಹುದ್ದೆಗಳನ್ನು (ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ವಾಹನ ಚಾಲಕರು ಮತ್ತು ಗ್ರೂಪ್-ಡಿ ಸಮನಾಂತರ) ಮತ್ತು ತಾಂತ್ರಿಕ ಹುದ್ದೆಗಳನ್ನು ಗುತ್ತಿಗೆ, ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುತ್ತಿರುವುದಾಗಿಯೂ ತಿಳಿಸಿದೆ.

5ನೇ ಪುಟ ನೋಡಿ

4,673 ಹುದ್ದೆಗಳ ನೇಮಕಕ್ಕೆ ಪ್ರಸ್ತಾವ

ರಾಜ್ಯದಲ್ಲಿ ವಿವಿಧ ಇಲಾಖೆಗಳ, ವಿವಿಧ ವೃಂದಗಳ ಒಟ್ಟಾರೆ 4,673 ಹುದ್ದೆಗಳ ಭರ್ತಿಗೆ ಸರ್ಕಾರದಿಂದ ಪ್ರಸ್ತಾವ ಹೋಗಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸದನಕ್ಕೆ ತಿಳಿಸಿದ್ದಾರೆ.

ಈ ಕುರಿತು ಶಾಸಕರೊಬ್ಬರು ಕೇಳಿದ ಪ್ರಶ್ನೆಗೆ ಅವರು ಉತ್ತರ ನೀಡಿದ್ದಾರೆ. ಈ ಹುದ್ದೆಗಳ ಪೈಕಿ ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಕ್ಕೆ ಪ್ರಸ್ತಾವ ಸಲ್ಲಿಸಿದ ಬಳಿಕ ಒಂದು ವರ್ಷ ಕಾಲಮಿತಿ ಇರುತ್ತದೆ ಎಂದೂ, ಇತರ ವೃಂದದ ಹುದ್ದೆಗಳಿಗೆ ಸಂಬಂಧಿಸಿದ ಇಲಾಖೆಗಳು ಕಾಲಮಿತಿ ವಿಧಿಸಿಲ್ಲ ಎಂಬುದಾಗಿಯೂ ಅವರು ಹೇಳಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಕಲಬುರಗಿಯಲ್ಲಿ ನಿಮ್ಹಾನ್ಸ್ ಶಾಖೆ

ಮಲ್ಲಿಕಾರ್ಜುನ ಖರ್ಗೆ ಬೇಡಿಕೆಗೆ ಸ್ಪಂದಿಸಿದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಕಲಬುರಗಿ: ಎಐಸಿಸಿ ಅಧ್ಯಕ್ಷ, ರಾಜ್ಯಸಭೆ ವಿರೋಧ ಪಕ್ಷದ ನಾಯಕರೂ ಆದ ಮಲ್ಲಿಕಾರ್ಜುನ ಖರ್ಗೆ ಅವರ ಬೇಡಿಕೆಯ ಮೇರೆಗೆ ಕಲಬುರಗಿಯಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಶಾಖೆ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಜೊತೆಗೆ ಕಲ್ಯಾಣ ಕರ್ನಾಟಕದಲ್ಲಿನ ಖಾಲಿ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಕಲಬುರಗಿ ಶಾಖೆಯ ನೂತನ ಕಟ್ಟಡವನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದ ಅವರು, 'ಕಲಬುರಗಿಯಲ್ಲಿ ನೂತನ ಡಯಾಬಿಟಾಲಜಿ ಘಟಕ ಸ್ಥಾಪನೆ ಮಾಡ ಲಾಗುವುದು. ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ದಶಕಗಳಿಂದ ಖಾಲಿ ಉಳಿದಿರುವ ಬೋಧಕ- ಬೋಧಕೇತರ ಸಿಬ್ಬಂದಿ ನೇಮಕ ಮಾಡಲಾಗುವುದು' ಎಂದರು.

ನಿಮ್ಹಾನ್ಸ್ ಶಾಖೆ ಕಲಬುರಗಿಯಲ್ಲಿ ಆರಂಭಿಸುವ ಬಗ್ಗೆ ಬೇಗ ತೀರ್ಮಾನ ತೆಗೆದುಕೊಳ್ಳುವಂತೆ ವೇದಿಕೆಯಲ್ಲಿದ್ದ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಅವರಿಗೆ ಸೂಚಿಸಿದ ಮುಖ್ಯಮಂತ್ರಿ, 'ಮೈಸೂರಿಗೂ ನಿಮ್ಹಾನ್ಸ್ ಘಟಕದ ಅಗತ್ಯವಿದ್ದು ಅದನ್ನು ಮರೆಯಬೇಡ' ಎಂದು ಹೇಳಿದರು. ಆ ಮೂಲಕ ಮೈಸೂರಿನಲ್ಲೂ ಒಂದು ಶಾಖೆ ಆರಂಭಿಸುವ ಇಂಗಿತ ವ್ಯಕ್ತಪಡಿಸಿದರು.

'ನಮ್ಮ ಸರ್ಕಾರ ಹಳೆ ಮೈಸೂರು, ಕಲ್ಯಾಣ ಕರ್ನಾಟಕ, ಮುಂಬೈ ಕರ್ನಾಟಕ, ಕರಾವಳಿ ಕರ್ನಾಟಕದ ಮಧ್ಯೆ ಯಾವುದೇ ಭೇದ ಭಾವ ಮಾಡುವುದಿಲ್ಲ. ಪ್ರಾದೇಶಿಕ ಅಸಮಾನತೆ ನಿವಾರಿಸಲು ನಾವು ಬದ್ಧರಾಗಿದ್ದೇವೆ. ಅದಕ್ಕಂದೇ ಮಲ್ಲಿಕಾರ್ಜುನ ಖರ್ಗೆ, ದಿ. ಧರ್ಮಸಿಂಗ್ ಅವರ ಪ್ರಯತ್ನದ ಫಲವಾಗಿ 371 (ಜೆ) ಕಲಂ ಜಾರಿಗೆ ಬಂದಿದೆ. ಅದಾದ ಬಳಿಕ ಇದುವರೆಗೆ 80 ಸಾವಿರ ಹುದ್ದೆಗಳನ್ನು ಈ ಭಾಗದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ' ಎಂದರು.

'ಬಸವಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಿಸುವ ಕಾರ್ಯ ಅರ್ಧ ಪೂರ್ಣಗೊಂಡಿದೆ. ಉಳಿದ ಕೆಲಸಕ್ಕೆ ಅಗತ್ಯವಿರುವ ಹಣವನ್ನೂ ಒದಗಿಸಿ ಶೀಘ್ರ ಪೂರ್ಣಗೊಳಿಸಲಾಗುವುದು' ಎಂದು ಸಿದ್ದರಾಮಯ್ಯ ಅವರು ಭರವಸೆ ನೀಡಿದರು.

ಕಲ್ಯಾಣ ಕರ್ನಾಟಕ ಭಾಗದ ಸಚಿವರು ಅಭಿವೃದ್ಧಿ ಕೆಲಸಗಳಿಗಾಗಿ ಸದಾ ಸಿ.ಎಂ ಬೆನ್ನು ಹತ್ತಬೇಕು. ಅವರು ಸಿಟ್ಟು ಮಾಡಿಕೊಂಡರೂ ಬೇಸರಿಸಿಕೊಳ್ಳದೇ ವಿವಿಧ ಕೆಲಸಗಳನ್ನು ಹೇಳುತ್ತಿರಬೇಕು

ಮಲ್ಲಿಕಾರ್ಜುನ ಖರ್ಗೆ
ರಾಜ್ಯಸಭೆ ವಿರೋಧ ಪಕ್ಷದ ನಾಯಕ

ತೊಗರಿ ಬೆಳೆ ಹಾನಿಯಾಗಿದ್ದಕ್ಕೆ ಪರಿಹಾರಕ್ಕೆ ಸಚಿವರು, ಶಾಸಕರು ಬೇಡಿಕೆ ಇಟ್ಟಿದ್ದಾರೆ. ಅಧಿಕಾರಿಗಳಿಂದ ವರದಿ ಬಂದ ಕೂಡಲೇ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು

ಸಿದ್ದರಾಮಯ್ಯ
ಮುಖ್ಯಮಂತ್ರಿ

ಐಎಎಸ್, ಐಪಿಎಸ್

ಸಾಮಾನ್ಯ ವರ್ಗಕ್ಕೆ ಸಿಂಹಪಾಲು

ದೇಶದ ಆಡಳಿತ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುವುದು ಭಾರತೀಯ ಆಡಳಿತ ಸೇವೆ (ಐಎಎಸ್), ಭಾರತೀಯ ಪೊಲೀಸ್ ಸೇವೆ (ಐಪಿಎಸ್) ಹಾಗೂ ಭಾರತೀಯ ವಿದೇಶಾಂಗ ಸೇವೆ (ಐಎಫ್‌ಎಸ್). ಈ ಪೈಕಿ ಐಎಎಸ್ ಹಾಗೂ ಐಪಿಎಸ್ ಹುದ್ದೆಗಳಿಗೆ ಮುಖ್ಯ ಭೂಮಿಕೆ ಇದೆ. 2018ರಿಂದ 2022ರವರೆಗಿನ ನೇಮಕಾತಿ ಮಾಹಿತಿಯ ಪ್ರಕಾರ ಈ ಎರಡು ಹುದ್ದೆಗಳಲ್ಲಿ ಸಾಮಾನ್ಯ ವರ್ಗದವರೇ ಪಾಬಲ್ಯ ಸಾಧಿಸಿದ್ದಾರೆ. ಈ ವರ್ಗದವರೇ ಈ ಹುದ್ದೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ, ಅಂದರೆ ಶೇ 46.15ರಷ್ಟು ನೇಮಕವಾಗುತ್ತಿದ್ದಾರೆ. ನಂತರದ ಸ್ಥಾನದಲ್ಲಿ ಇತರೆ ಹಿಂದುಳಿದ ವರ್ಗದವರಿದ್ದಾರೆ. ಈ ಸಮುದಾಯದವರ ಸಂಖ್ಯೆಯು ಶೇ 29.40ರಷ್ಟಿದೆ. ಈ ಬಗ್ಗೆ ಡಿಎಂಕೆ ಸಂಸದ ಪಿ. ವಿಲ್ಸನ್ ಅವರು ರಾಜ್ಯಸಭೆಯಲ್ಲಿ ಪ್ರಶ್ನೆ ಕೇಳಿದ್ದರು. ಇದಕ್ಕೆ ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆ ಹಾಗೂ ಪಿಂಚಣಿ ಸಚಿವಾಲಯವು ಲಿಖಿತ ರೂಪದಲ್ಲಿ ಉತ್ತರ ನೀಡಿದೆ.





Toyota i-CONNECT | Toyota Mobility Service Conversion | Fleet | Leasing | TOYOTA U TRUST Buy | Sell | Exchange - Used car | TOYOTA FINANCIAL SERVICES

Nandi Toyota
Bangalore: [Banashankari, Banaswadi, Bannerghatta, Bommanahalli, Whitefield]: 7022340713
Hosur Road: 9945255800
Kanakapura Road: 9740409858
Queens Road: 9741310066

Ravindu Toyota
Bangalore: [K R Puram, Magadi Road, Marathahalli, Rajajinagar, Victoria Road, Yeshwantpur]: 8058245555
Kolar: 9606090040
Tumkur: 9379189796

Viva Toyota
Bangalore: [Hebbal, Vidyaranyapura]: 9900027736
[Airport Road, Kogilu]: 9900030617
Mysore Road: 9900030620

BJS Toyota
Bellary, Hospet: 7829927943

Palace Toyota
Hunsur: 9663709743
Kodagu, Madikeri: 7022671919
Mandya: 9538874907
Mysore: Hootagalli: 9538874906
Krishnamurthy Puram: 9538874936

Shodha Toyota
Bagalkot: 8147599463
Belgaum - Shahapur: 8147599461
Poona-Bangalore Road: 7899305505, 7760963774
Bijapur: 9606484983; **Davangere:** 9008952277
Hubli: 7204818810, 8123047553

United Toyota
Mangalore:
[Bunt's Hostel, Padil]: 9686687581
Udupi: 9686687581

Karuna Toyota
Gulbarga: 7829990010
Raichur: 7829990021

Shakti Toyota
Chikkamagaluru, Hassan, Kadur, Shivamogga: 9686652728
Sagara: 08183200402

dentsu/pv blr/14/24

‘ಅಸ್ತ್ರಂ’ ಯೋಜನೆ ಮೂರು ಪ್ರಶಸ್ತಿ

ಬೆಂಗಳೂರು: ನಗರದಲ್ಲಿ ವಾಹನ ದಟ್ಟಣೆ ಸುಧಾರಣೆಗಾಗಿ ನಗರ ಸಂಚಾರ ಪೊಲೀಸರು ಜಾರಿಗೆ ತಂದಿದ್ದ ‘ಅಸ್ತ್ರಂ’ ಯೋಜನೆಗೆ ಮೂರು ಪ್ರಶಸ್ತಿಗಳು ಲಭಿಸಿವೆ.

ಕಳೆದ ಜನವರಿಯಲ್ಲಿ ನಡೆದ ‘ರಾಷ್ಟ್ರೀಯ ರಸ್ತೆ ಸುರಕ್ಷತಾ ತಿಂಗಳು’ ಕಾರ್ಯಕ್ರಮದ ವೇಳೆ ಈ ಯೋಜನೆಗೆ ಚಾಲನೆ ನೀಡಲಾಗಿತ್ತು. ಎಂಜಿನಿಯರಿಂಗ್ ಎಕ್ಸಲೆನ್ಸ್ ಅವಾರ್ಡ್, ಇನ್‌ಫ್ರಾ ಲೀಡರ್‌ಶಿಪ್ ಪ್ರಶಸ್ತಿ–2024 ಹಾಗೂ ಉತ್ತಮ ಸಾರಿಗೆ ಉಪಕ್ರಮ ಪ್ರಶಸ್ತಿಗಳು ಲಭಿಸಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

RENTAL PROPERTIES

Accommodation Available

Commercial

KORAMANGALA GROUND Floor 1600 Sqft, 1st Floor 200 to 2200 Sqft Available For Rent Call Owner Rajesh 9845167755.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

YEAR END OFFER
50% OFF* ON SECOND HEARING AID
FREE HEARING TEST & TRIAL
Home Visit with Boothless Audiometer at ₹500
EMI Available
Clear & Crisp Hearing aids at economical prices available
T&C Apply
HEARING HEALTH CARE CLINIC[as]
99456 11100 www.hearingc.com
Services Available Across Bengaluru & Karnataka
HHCC

EDUCATION
To Place your Classified Ads Contact:
9845114560

REAL ESTATE SELLING

Sites

Kanakapura Road

SALE: JAYANAGAR Co-operative Society 2nd stage 30x40 East facing Rs.14000 Nego., Near 80ft 'MAHARAJA PALACE' (Kanakapura Road) Contact: 8197276607

BUSINESS

Business to Business

Finance

WE ARRANGE
Mortgage, Purchase, Construction & Completion of Construction, Takeover Loans from Banks.
Contact: 9353705002

PERSONAL

Change of Name

I, KRISHNE Gowda have changed my daughter's name from B.K. BINDU to B.K. VARSHA Vide affidavit dated 12/12/2024 before Notary G. Dakshahini, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036

‘ಸಂವಿಧಾನದ ಆಶಯದಂತೆ ನಡೆಯಿರಿ’

ನ್ಯಾ. ಇ.ಎಸ್.ವೆಂಕಟರಾಮಯ್ಯ ಶತಮಾನೋತ್ಸವದ ಸ್ಮರಣಾರ್ಥ ದತ್ತಿ ಉಪನ್ಯಾಸ

ನ್ಯಾಯಮೂರ್ತಿ ಇ.ಎಸ್.ವೆಂಕಟರಾಮಯ್ಯ ಶತಮಾನೋತ್ಸವದ ಸ್ಮರಣಾರ್ಥ ಎನ್‌ಎಲ್‌ಎಸ್‌ಐಯು ಭಾನುವಾರ ಆಯೋಜಿಸಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರನ್ನು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ವಿ.ನಾಗರತ್ನಾ ಸ್ವಾಗತಿಸಿದರು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮುಕುಲ್ ಮುದ್ಗಲ್ ಉಪಸ್ಥಿತರಿದ್ದರು
—ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸತ್ತು, ಕಾರ್ಯಾಂಗ, ಚುನಾವಣಾ ಆಯೋಗ, ಸಿಎಜಿ ಸಹಿತ ಎಲ್ಲ ಸಾಂವಿಧಾನಿಕ ಸಂಸ್ಥೆಗಳು ಸಂವಿಧಾನಕ್ಕೆ ಬದ್ಧವಾಗಿ ಕಾರ್ಯ ನಿರ್ವಹಿಸಿದರೆ ಅದಕ್ಕಿಂತ ಪರಿಣಾಮಕಾರಿಯಾದುದು ಇನ್ನೊಂದಿಲ್ಲ ಎಂದು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಪಿ.ಎಸ್. ನರಸಿಂಹ ತಿಳಿಸಿದರು.

ನ್ಯಾಯಮೂರ್ತಿ ಇ.ಎಸ್. ವೆಂಕಟರಾಮಯ್ಯ ಶತಮಾನೋತ್ಸವದ ಸ್ಮರಣಾರ್ಥ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (ಎನ್‌ಎಲ್‌ಎಸ್‌ಐಯು) ಆಯೋಜಿಸಿದ್ದ ದತ್ತಿ ಉಪನ್ಯಾಸ ‘ಸಾಂವಿಧಾನಿಕ ಸಂಸ್ಥೆಗಳನ್ನು ಮರುರೂಪಿಸುವುದು– ಸಮಗ್ರತೆ, ದಕ್ಷತೆ ಮತ್ತು ಹೊಣೆಗಾರಿಕೆ’ ವಿಷಯದ ಕುರಿತು ಅವರು ಮಾತನಾಡಿದರು.

ಸಾಂವಿಧಾನಿಕ ಸಂಸ್ಥೆಗಳಲ್ಲಿರುವವರು, ಇತರೆಡೆ ಕೆಲಸ ಮಾಡುವವರು, ಸಾಮಾನ್ಯ ಪ್ರಜೆಗಳು ಸೇರಿದಂತೆ ಎಲ್ಲರಲ್ಲೂ ಚಾರಿತ್ರ್ಯವನ್ನು ರೂಪಿಸುವ ಅಂಶ ಸಂವಿಧಾನದಲ್ಲಿ ಒಳಗೊಳ್ಳಬೇಕು ಎಂದು ಆಶಿಸಿದರು.

ದೇಶವನ್ನು ಸಮಗ್ರವಾಗಿ, ದಕ್ಷತೆಯಿಂದ ಕಟ್ಟುವ ಹೊಣೆಗಾರಿಕೆ ಸಾಂವಿಧಾನಿಕ ಸಂಸ್ಥೆಗಳದ್ದಾಗಿದೆ. ಈ ಸಂಸ್ಥೆಗಳು ಕೆಲವೊಂದು ಬದಲಾವಣೆಯನ್ನು ಮಾಡಿಕೊಳ್ಳಬೇಕಿದೆ. ಏಕವ್ಯಕ್ತಿ ನಿರ್ಧಾರ ಕೈಗೊಳ್ಳುವ ಬದಲು ಸಾಮೂಹಿಕ ನಿರ್ಧಾರಗಳಾಗಬೇಕು. ವಿವೇಚನೆ ಹೊಣೆಗಾರಿಕೆಯಾಗಬೇಕು. ಗೋಪ್ಯದ ಬದಲು ಪಾರದರ್ಶಕವಾಗಬೇಕು. ಅಧಿಕಾರವು ಜವಾಬ್ದಾರಿಯಾಗಿ ಬದಲಾಗಬೇಕು ಎಂದು ಸಲಹೆ ನೀಡಿದರು.

ಎಂಗಳಗುಪ್ಪೆ ಸೀತಾರಾಮಯ್ಯ ವೆಂಕಟರಾಮಯ್ಯ ಅವರು ಮೈಸೂರಿನಲ್ಲಿ ಪದವಿ ಮುಗಿಸಿ, ಬೆಳಗಾವಿಯಲ್ಲಿ ಎಲ್‌ಎಲ್‌ಬಿ ಮಾಡಿದ್ದರು. ಹೈಕೋರ್ಟ್ ವಕೀಲರಾಗಿ, ಆನಂತರ ವಿಶೇಷ ಸರ್ಕಾರಿ ಪ್ಲೀಡರ್ ಆಗಿ, ಮೈಸೂರಿನ ಅಡ್ವೊಕೇಟ್ ಜನರಲ್ ಆಗಿ ಕಾರ್ಯ ನಿರ್ವಹಿಸಿದ್ದರು. ಹೈಕೋರ್ಟ್ ಹೆಚ್ಚುವರಿ ನ್ಯಾಯಮೂರ್ತಿಯಾಗಿ, ಕಾಯಂ ನ್ಯಾಯಮೂರ್ತಿಯಾಗಿ, ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ, ಮುಖ್ಯನ್ಯಾಯಮೂರ್ತಿಯಾಗಿ ಕೆಲಸ ಮಾಡಿ 1989ರಲ್ಲಿ ನಿವೃತ್ತರಾದರು. ಬಳಿಕ ಎನ್‌ಎಲ್‌ಎಸ್‌ಐಯುನಲ್ಲಿ ಕಾನೂನು ಪಾಠ ಮಾಡಿದ್ದರು ಎಂದು ಇ.ಎಸ್. ವೆಂಕಟರಾಮಯ್ಯರ ಮಗಳೂ ಆಗಿರುವ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಅವರು ನೆನಪು ಮಾಡಿಕೊಂಡರು.

ವೆಂಕಟರಾಮಯ್ಯ ಅವರು ಸುಪ್ರೀಂ ಕೋರ್ಟ್‌ನಲ್ಲಿ 720 ತೀರ್ಪುಗಳನ್ನು ಪ್ರಕಟಿಸಿದ ಪೀಠಗಳ ಭಾಗವಾಗಿದ್ದರು. ಇವುಗಳಲ್ಲಿ ಅವರ ಅವಧಿಯಲ್ಲೇ 256 ತೀರ್ಪುಗಳನ್ನು ಬರೆದಿದ್ದರು ಎಂದು ತಿಳಿಸಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮುಕುಲ್ ಮುದ್ಗಲ್, ಎನ್‌ಎಲ್‌ಎಸ್‌ಐಯು ಕುಲಪತಿ ಸುಧೀರ್ ಕೃಷ್ಣಸ್ವಾಮಿ, ಕುಲಸಚಿವ ನಿಗಮ್ ನುಗ್ಗೇಹಳ್ಳಿ ಭಾಗವಹಿಸಿದ್ದರು.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560004

ಟೆಂಡರ್ ಸೂಚನೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಎಸ್/ಪಿ1/0010/2024–25 ದಿನಾಂಕ: 19.12.2024

ಭಾರತದ ರಾಷ್ಟ್ರಪತಿಯವರ ಪರವಾಗಿ ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು ಭಾರತೀಯ ರೈಲ್ವೇ ಇ–ಪೋರ್ಟಲ್ – www.ireps.gov.in ನಲ್ಲಿ ಈ ಕೆಳಗಿನ ವಸ್ತುಗಳ ಪೂರೈಕೆಗಾಗಿ ಆಸಕ್ತ ಮಾರಾಟಗಾರರಿಂದ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ. ಟೆಂಡರ್ ದಾಖಲೆಗಳು ಮತ್ತು ಟೆಂಡರ್‌ಗಳಿಗೆ ತಿದ್ದುಪಡಿ, ಯಾವುದಾದರೂ ಇದ್ದರೆ, ಪೋರ್ಟಲ್‌ನಲ್ಲಿ ಮಾತ್ರ ಲಭ್ಯವಿರುತ್ತದೆ.

ಕ್ರ	ಟೆಂಡರ್ ಸಂ.	ಕೊನೆಯ ದಿನಾಂಕ	ಸಂಕ್ಷಿಪ್ತ ವಿವರಣೆ	ಪ್ರಮಾಣ
1	ಪಿ1241612ಬಿ	03-01-25	ಸಿಎನ್‌ಸಿ ಡ್ರಿಲ್ಲಿಂಗ್ ಯಂತ್ರಕ್ಕಾಗಿ ಟೂಲ್ ಹೋಲ್ಡರ್‌ನ ರೀಸೆಂಟರಿಂಗ್	242 ಸೆಟ್ಸ್
2	ಪಿ1232347ಇ	06-01-25	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಗ್ರ್ಯಾಫೈಟ್ ಎಲೆಕ್ಟ್ರೋಡ್ (ಅಭಿವೃದ್ಧಿ ಟೆಂಡರ್)	15 ಮೆ.ಟ.
3	ಪಿ1241910	13-01-25	ಐಎಸ್:1239/2004 ಭಾಗ I ಗೆ ಟ್ಯೂಬ್ ಎಂ.ಎಸ್ ಬ್ಲಾಕ್ ನಾಮಿನಲ್ ಬೋರ್ 20 ಮಿ.ಮೀ (ಇತ್ತೀಚಿನ ಪರಿಷ್ಕರಣೆ)	103056 ಮೀಟರ್
4	ಪಿ1241902ಎ	13-01-25	ಐಎಸ್ 4306/1987 ಗೆ ಹೆಕ್ಸಾಮೆಥಿಲೀನೆಟೆಟ್ರಾಮೈನ್ (ಹೆಕ್ಸಾಮೈನ್)	21600 ಕೆಜಿ
5	ಪಿ1242449	29-01-25	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಪೋರಿಂಗ್ ಟ್ಯೂಬ್ ಸೆರಾಮಿಕ್	1322 ಸಂ
ಜಾಗತಿಕ ಟೆಂಡರ್:				
6	ಪಿ1241915	09-01-25	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಪೋರಿಂಗ್ ಟ್ಯೂಬ್ ಸೆರಾಮಿಕ್	3758 ಸಂ
7	ಪಿ1242428	16-01-25	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ಏರ್ ಸೆಟ್ಟಿಂಗ್ ಮಾರ್ಟರ್ (ಸೂಪರ್ 3000)	37472 ಕೆಜಿ
8	ಪಿ1241851	17-01-25	ಆರ್‌ಡಬ್ಲ್ಯೂಎಫ್ ನಿರ್ದಿಷ್ಟತೆಯ ಪ್ರಕಾರ ವೀಗಮ್ ಗ್ರ್ಯಾನ್ಯೂಲ್ಸ್	2864 ಕೆಜಿ

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ
TRAI
ವರ್ಲ್ಡ್ ಟ್ರೇಡ್ ಸೆಂಟರ್, 6ನೇ ಮಹಡಿ, ಟವರ್–ಎಫ್, ನೌರೋಜಿ ನಗರ, ನವದೆಹಲಿ
ಖಾಲಿಹುದ್ದೆ ಸುತ್ತೋಲೆ ಸಂ. 1–07/2024–ಎ&ಪಿ

ವಿಷಯ: ಬೆಂಗಳೂರಿನಲ್ಲಿರುವ ಭಾದೂನಿಪ್ರಾ ಪ್ರಾದೇಶಿಕ ಕಚೇರಿಯಲ್ಲಿ ಸಹಾಯಕ ಹುದ್ದೆಯನ್ನು ಫಾರಿನ್ ಸರ್ವೀಸ್ ಟರ್ಮ್ಸ್ ಡೆಪ್ಯೂಟೇಶನ್ ಆಧಾರದಲ್ಲಿ ಭರ್ತಿ ಮಾಡಿಕೊಳ್ಳುವುದು.

ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು ಬೆಂಗಳೂರಿನಲ್ಲಿರುವ ತನ್ನ ಪ್ರಾದೇಶಿಕ ಕಚೇರಿಯಲ್ಲಿನ ಕೆಳಕಂಡ ಹುದ್ದೆಯನ್ನು ಫಾರಿನ್ ಸರ್ವೀಸ್ ಟರ್ಮ್ಸ್ ಆನ್ ಡೆಪ್ಯೂಟೇಶನ್ ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲು ಉದ್ದೇಶಿಸಿರುತ್ತದೆ:

ಹುದ್ದೆಯ ಹೆಸರು	ವೇತನ ಶ್ರೇಣಿ ಮತ್ತು ವೇತನ ದರ್ಜೆ
ಸಹಾಯಕ	7ನೇ ಸಿಪಿಸಿ ಪ್ರಕಾರ ವೇತನ ಶ್ರೇಡಿಯಲ್ಲಿನ ವೇತನ ಹಂತ–6 ರೂ. 35400–112400 (ಪೂರ್ವ ಪರಿಷ್ಕೃತ ಪಿಬಿ–2, ರೂ. 9300– 34800 + ಜಿಪಿ ರೂ. 4200)

2. ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 24 ಜನವರಿ, 2025.
3. ಹೆಚ್ಚಿನ ವಿವರಗಳನ್ನು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ www.trai.gov.in ವೆಬ್‌ಸೈಟ್‌ನಿಂದ ಪಡೆದುಕೊಳ್ಳಬಹುದು.

CBC 06202/12/0073/2425

ನಗರದಲ್ಲಿ ಇಂದು

‘ನೆನಪಿನಂಗಳಲ್ಲಿ ಜಿ.ಎಸ್.ಎಸ್.’ ಡಾ.ಜಿ.ಎಸ್. ಶಿವರುದ್ರಪ್ಪನವರ ಕವಿತೆಗಳ ಗಾಯನ ಮತ್ತು ವ್ಯಾಖ್ಯಾನ: ಅಧ್ಯಕ್ಷತೆ: ಡಿ. ಡೊಮಿನಿಕ್, ಕವಿತೆಗಳ ಕುರಿತು: ಕಾ.ವೆಂ. ಶ್ರೀನಿವಾಸಮೂರ್ತಿ, ಗೀತೆಗಳ ಗಾಯನ: ಮೃತ್ಯುಂಜಯ ದೊಡ್ಡವಾಡ, ಆಯೋಜನೆ: ಸಂಗೀತಧಾಮ, ಸ್ಥಳ: ಜಿ.ಎಸ್.ಎಸ್. ಸಭಾಂಗಣ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 11.30

ನಾಡೋಜ ಬರಗೂರು ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಪ್ರಶಸ್ತಿ ಪುರಸ್ಕೃತರು: ರಾಜೇಂದ್ರಸಿಂಗ್ ಬಾಬು, ಬಸವರಾಜ ಕಲ್ಗುಡಿ, ಸುಧಾರಾಣಿ, ಕರೀಗೌಡ ಬೀಚನಹಳ್ಳಿ, ಆಯೋಜನೆ: ನಾಡೋಜ ಡಾ. ಬರಗೂರು ಪ್ರತಿಷ್ಠಾನ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, (ಸೆಂಟ್ರಲ್ ಕಾಲೇಜು ಎದುರು), ಸಂಜೆ 5

ಹಂಪನಾ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ADVERTORIAL

ಎಲ್ಲಾ ರೈತ ಬಾಂಧವರಿಗೆ ರೈತ ದಿನಾಚರಣೆಯ ಶುಭಾಶಯಗಳು

ಅಮೃತ್ ಆರ್ಗ್ಯಾನಿಕ್ಸ್ ಫರ್ಟಿಲೈಸರ್ಸ್, ಮಲ್ಲಾಡಿಹಳ್ಳಿ.
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

Amruth Innovation for Agriculture



ಮಲ್ಲಾಡಿಹಳ್ಳಿಯಲ್ಲಿರುವ ಅಮೃತ್ ಆರ್ಗ್ಯಾನಿಕ್ಸ್ ಫರ್ಟಿಲೈಸರ್ಸ್ ಕಾರ್ಖಾನೆಯ ನೋಟ.

ಉತ್ತಮ ಇಳುವರಿ ಪಡೆಯಲು ಮಣ್ಣು ಪರೀಕ್ಷೆ ಮಾಡಿಸಿ ನಂತರ ಗೊಬ್ಬರ ನೀಡಿ

ರೈತರು ತಮ್ಮ ಜಮೀನಿನಲ್ಲಿ ಯಾವುದೇ ಬೆಳೆಗಳನ್ನು ಬೆಳೆಯಲು ಹಾಗೂ ಹೆಚ್ಚಿನ ಇಳುವರಿಯನ್ನು ಪಡೆಯಲು ತಮ್ಮ ಜಮೀನುಗಳ ಮಣ್ಣನ್ನು ಪರೀಕ್ಷಿಸಿ ಅದರ ಫಲಿತಾಂಶದ ಆಧಾರದ ಮೇಲೆ ಗೊಬ್ಬರಗಳು ಮತ್ತು ಸೂಕ್ಷ್ಮ ಪೋಷಕಾಂಶಗಳನ್ನು ನೀಡುವುದರಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯಬಹುದಾಗಿದೆ.

ಮಣ್ಣು ಪರೀಕ್ಷೆ ಮಾಡಿಸದೆ ಗೊಬ್ಬರಗಳನ್ನು ನೀಡುವುದರಿಂದ ಕೆಲವು ಪೋಷಕಾಂಶಗಳ ಕೊರತೆಯಿಂದ ಬೆಳೆಗಳು ಕುಂಟಿತಗೊಳ್ಳುತ್ತವೆ.

ನಮ್ಮ ರೈತರು ಈಗಲೂ ಸಹ ತೋಟಗಳಿಗೆ ನೂರಾರು ಲೋಡ್ ಮಣ್ಣನ್ನು ಹಾಕಿಸುತ್ತಾರೆ. ಕೆರೆಮಣ್ಣು ಮತ್ತು ಗೋಡು ಮಣ್ಣಿನಲ್ಲಿ ನಮ್ಮ ತೋಟದಲ್ಲಿ ಇರುವ ಮಣ್ಣಿನಲ್ಲಿ ಪೋಷಕಾಂಶಗಳ ಕೊರತೆ ಇದ್ದು ಕೆರೆಮಣ್ಣು ಅಥವಾ ಗೋಡುಮಣ್ಣಿನಲ್ಲಿ ಆ ಪೋಷಕಾಂಶಗಳು ಇದ್ದರೆ ಮಾತ್ರ ಅದು ಉಪಯೋಗವಾಗುತ್ತದೆ. ಮಣ್ಣು ಪರೀಕ್ಷಿಸದೆ ಕೆರೆಮಣ್ಣು ಮತ್ತು ಗೋಡುಮಣ್ಣನ್ನು ತೋಟಗಳಿಗೆ ಹಾಕಿಸಿದರೆ ಬೆಳೆಗಳ ಮೇಲೆ ತುಂಬಾ ದುಷ್ಪರಿಣಾಮ ಆಗುತ್ತದೆ ಮತ್ತು ಅನ್ಯತಹ ಲಕ್ಷಗಟ್ಟಲೆ ಹಣ ಖರ್ಚು ಮಾಡುತ್ತಾರೆ.

ಹಾಗೂ ರೈತರು ಲೋಡುಗಟ್ಟಲೆ ಕುರಿಗೊಬ್ಬರ, ಸಗಣಿಗೊಬ್ಬರ, ಕೋಳಿಗೊಬ್ಬರ ಇತರ ಯಾವುದೇ ಗೊಬ್ಬರಗಳನ್ನು ಬಳಸುವಾಗ ಸರಿಯಾದ ರೀತಿಯಲ್ಲಿ ಚೆನ್ನಾಗಿ ಕಳಿತ ಗೊಬ್ಬರಗಳನ್ನು ಮಾತ್ರ ಹಾಕಬಹುದು. ಸರಿಯಾಗಿ ಕಳಿಯದೆ ಗೊಬ್ಬರಗಳನ್ನು ಉಪಯೋಗಿಸಿದಲ್ಲಿ ಬೆಳೆಗಳ ಇಳುವರಿ ಮೇಲೆ ಬಹಳ ದುಷ್ಪರಿಣಾಮ ಬೀರುವುದಲ್ಲದೆ ರೋಗಗಳಿಗೆ ಕಾರಣವಾಗುತ್ತದೆ. ಆದ್ದರಿಂದ ರೈತರು ಸರಿಯಾಗಿ ಕಳಿತ ಗೊಬ್ಬರಗಳು ಅಥವಾ ಒಳ್ಳೆಯ ಸಾವಯವ ಗೊಬ್ಬರಗಳನ್ನು ಮತ್ತು ಸೂಕ್ಷ್ಮ ಪೋಷಕಾಂಶಗಳೊಂದಿಗೆ ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ಕೊಡುವುದರಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯಬಹುದು.

ನಂತರ ಕೇವಲ ರಾಸಾಯನಿಕ ಗೊಬ್ಬರ ಬಳಕೆ, ಹೆಚ್ಚಿನ ಕಳೆನಾಶಕ ಹಾಗೂ ಕೀಟನಾಶಕಗಳ ಬಳಕೆ ಮಾಡುವುದರಿಂದ ಬೆಳೆಗಳ ಇಳುವರಿ ಮೇಲೆ ಬಹಳ ದುಷ್ಪರಿಣಾಮ ಬೀರುತ್ತದೆ. ಅಲ್ಲದೆ ಮಣ್ಣಿನ ಗುಣಮಟ್ಟ ಹಾಳಾಗುವುದಲ್ಲದೆ ಮಣ್ಣಿನಲ್ಲಿರುವ ಸೂಕ್ಷ್ಮಾಣು ಜೀವಿಗಳ ನಾಶಕ್ಕೆ ನಾಂದಿಯಾಗುತ್ತದೆ.

ಆದ್ದರಿಂದ ರೈತಬಾಂಧವರು ಹೆಚ್ಚಿನದಾಗಿ ಉತ್ತಮ ಸಾವಯವ ಗೊಬ್ಬರಗಳನ್ನು ಬಳಸಿದಲ್ಲಿ ಮಾತ್ರ ಮಣ್ಣಿನ ಗುಣಮಟ್ಟ ಕಾಪಾಡಿಕೊಳ್ಳಬಹುದಾಗಿದೆ. ಹಾಗೂ ಸಾವಯವ ಇಂಗಾಲ ಮಣ್ಣಿನಲ್ಲಿ ಹೆಚ್ಚಿಸಲು ಸಹಕಾರಿಯಾಗಿದೆ.

ನಿತ್ಯವೂ ಇಲ್ಲಿ ರೈತ ತರಬೇತಿ ಶಿಬಿರಗಳು ನಡೆಯುತ್ತವೆ. ಸಾವಯವಗೊಬ್ಬರ ಕಾರ್ಖಾನೆ ನೋಡುವುದರೊಂದಿಗೆ ಕೃಷಿವಿಜ್ಞಾನಿಗಳ ಮಾಹಿತಿ ಸಹ ಉಚಿತವಾಗಿ ನೀಡಲಾಗುತ್ತದೆ. ಈ ಸಂಸ್ಥೆಗೆ ಬರುವ ರೈತರ ಜಮೀನುಗಳಿಗೆ ಸಂಸ್ಥೆಯ ನೌಕರರು ಉಚಿತವಾಗಿ ರೈತರ ಜಮೀನಿಗೆ ಹೋಗಿ ಮಣ್ಣನ್ನು ಪರೀಕ್ಷೆಗೆ ತಂದು ರಿಯಾಯಿತಿ ದರದಲ್ಲಿ ಮಣ್ಣನ್ನು ಪರೀಕ್ಷಿಸಿ ಅದರಲ್ಲಿ ಇರುವ ಎಲ್ಲಾ ಪೋಷಕಾಂಶಗಳ ಕೊರತೆಯನ್ನು ನುರಿತ ವಿಜ್ಞಾನಿಗಳಿಂದ ಮಾಹಿತಿಯನ್ನು ನೀಡುತ್ತಿರುವುದರಿಂದ ರೈತರಿಗೆ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಇಳುವರಿಯನ್ನು ಪಡೆಯಲು ಸಹಕಾರಿಯಾಗಿದೆ.

ಈ ಸಂಸ್ಥೆಯು ಮಲ್ಲಾಡಿಹಳ್ಳಿಯ ಪರಮಪೂಜ್ಯ ಶ್ರೀ ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳ ಧ್ಯೇಯೋದ್ದೇಶಗಳೊಂದಿಗೆ ಸ್ಥಾಪಿತವಾದ ಸಂಸ್ಥೆಯಾಗಿದ್ದು ಪ್ರತಿಯೊಬ್ಬ ರೈತರಿಗೆ ಈ ಸಂಸ್ಥೆಯಲ್ಲಿ ತಾಂತ್ರಿಕವಾಗಿ ಮಾರ್ಗದರ್ಶನ ನೀಡುವುದರೊಂದಿಗೆ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಲಾಭ ಪಡೆಯಲು ಸಹಕಾರಿಯಾಗಿದೆ. ಗ್ರಾಮಾಂತರ ಮಟ್ಟದಲ್ಲಿ ಸುಮಾರು 450 ಜನಕ್ಕೆ ಉದ್ಯೋಗ ನೀಡುವುದಲ್ಲದೆ ಈ ಸಂಸ್ಥೆಗೆ ಬಂದಂತಹ ಎಲ್ಲರಿಗೂ ಉಚಿತವಾಗಿ ಊಟವನ್ನು ನೀಡುತ್ತಿರುತ್ತಾರೆ.

ನಾಗರಾಜ್‌ಗೆ ರಾಷ್ಟ್ರೀಯ ಕೃಷಿರತ್ನ ಪ್ರಶಸ್ತಿ

ಅಮೃತ್ ಆರ್ಗ್ಯಾನಿಕ್ ಕಾರ್ಖಾನೆಯ ಮಾಲೀಕ ಕೆ.ನಾಗರಾಜ್ ಕೃಷಿಯಲ್ಲಿ ಮಾಡಿದ ಸಾಧನೆಗಳಿಂದ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಡಿಸೆಂಬರ್ 11 ರಂದು ಕೇಂದ್ರ ಪರಿಸರ ಇಲಾಖೆ ದೆಹಲಿಯಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವ ರಾಮದಾಸ ಅಠಾವಳೆ ನಾಗರಾಜ್ ಅವರಿಗೆ ‘ರಾಷ್ಟ್ರೀಯ ಕೃಷಿರತ್ನ ಪ್ರಶಸ್ತಿ’ ನೀಡಿ ಗೌರವಿಸಿದ್ದಾರೆ. ಇದರಿಂದ ಪ್ರೇರಿತರಾದ ನಾಗರಾಜ್ ಪರಿಸರ ರಕ್ಷಣೆಗೂ ಕೈಜೋಡಿಸುತ್ತಿದ್ದಾರೆ. ಅನಾಥ ಸೇವಾಶ್ರಮ ಕಟ್ಟಿ ಬೆಳೆಸಿದ ರಾಘವೇಂದ್ರ ಸ್ವಾಮೀಜಿಯ ಪ್ರೇರಣೆಯಿಂದ ಬೆಳೆದ ನಾಗರಾಜ್ ಮಲ್ಲಾಡಿಯಳ್ಳಿಯಲ್ಲಿ ಸಸಿ ಬೆಳೆಸಿ ಹಸಿರಾಗಿಸುವ ಚಿಂತನೆ ನಡೆಸಿದ್ದಾರೆ. ನಾಗರಾಜ್ ಅವರ ಮಗ ಅಭಿಲಾಷ್ ತಂದೆಯ ಕನಸುಗಳ ಸಾಕಾರಕ್ಕೆ ಸಾಥ್ ನೀಡುತ್ತಿದ್ದಾರೆ.



ಕೆ. ನಾಗರಾಜ್
ವ್ಯವಸ್ಥಾಪಕ ನಿರ್ದೇಶಕರು

ಸಾವಯುವ ಗೊಬ್ಬರಗಳಿಗೆ ಸಂಪರ್ಕಿಸಿ: 9900066307, 9353754012
ಕಾರ್ಖಾನೆಯ ಸಂಪರ್ಕಕ್ಕಾಗಿ
Contact No.: 7338178082, 8971272236, 9900066307 | YouTube: Amruth organic fertilizers
Email: amruth.organic@gmail.com, Info@amruthgroup.net | Website : www.amruthgroup.net

ವಿಶೇಷ ವಾರ್ಡ್‌ನಲ್ಲಿ 5ರಿಂದ 7 ಹಾಸಿಗೆಗಳು ಮೀಸಲು • ವಿಮಾ ಕಂಪನಿಗಳ ಜತೆಗೆ ಮಾತುಕತೆ

ಖಾಸಗಿ ವಿಮೆ: ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ಖಾಸಗಿ ಕಂಪನಿಗಳ ವಿಮೆ ಯೋಜನೆಗಳಡಿಯೂ ವೈದ್ಯಕೀಯ ಚಿಕಿತ್ಸೆ ಸೇವೆ ಒದಗಿಸಲು ನಗರದ ಸರ್ಕಾರಿ ವೈದ್ಯಕೀಯ ಸಂಸ್ಥೆಗಳು ಮುಂದಾಗಿವೆ. ವಿಶೇಷ ವಾರ್ಡ್‌ಗಳಲ್ಲಿ 5 ರಿಂದ 7 ಹಾಸಿಗೆಗಳನ್ನು ಮೀಸಲಿಡಲು ನಿರ್ಧರಿಸಿವೆ.

‘ಆಯುಷ್ಮಾನ್ ಭಾರತ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ’, ‘ಯಶಸ್ವಿನಿ’ ಸೇರಿ ವಿವಿಧ ಯೋಜನೆಗಳಡಿ ಉಚಿತ, ರಿಯಾಯಿತಿ ದರದಲ್ಲಿ ಈ ಆಸ್ಪತ್ರೆಗಳು ಚಿಕಿತ್ಸೆ ಒದಗಿಸುತ್ತಿವೆ. ಖಾಸಗಿಗೆ ಹೋಲಿಸಿದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ದರಗಳು ಮೂರನೇ ಒಂದರಷ್ಟು ಇರಲಿವೆ.

ಬಿಪಿಎಲ್ ಕಾರ್ಡ್ ಹೊಂದಿರದ ಹಾಗೂ ಸರ್ಕಾರಿ ವಿಮೆ ಯೋಜನೆಗಳಿಂದ ಹೊರಗಿರುವವರು ಆರೋಗ್ಯ ರಕ್ಷಣೆಗೆ ದುಬಾರಿ ಪ್ರೀಮಿಯಂ ಪಾವತಿಸಿ, ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಮೊರೆ ಹೋಗುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ದಟ್ಟಣೆ ಇರುವುದೂ ಇದಕ್ಕೆ ಕಾರಣ. ಈಗ ಸರ್ಕಾರಿ ಆಸ್ಪತ್ರೆಗಳೂ ಖಾಸಗಿ ಕಂಪನಿಗಳ ವಿಮೆ ಯೋಜನೆಗಳ ಅಳವಡಿಕೆಗೆ ಆಸಕ್ತಿ ತೋರಿದ್ದು, ವಿಮೆ ಕಂಪನಿಗಳೂ ಸರ್ಕಾರಿ ಆಸ್ಪತ್ರೆಗಳನ್ನು ಸಂಪರ್ಕಿಸಲಾರಂಭಿಸಿವೆ.

ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಪ್ಯಾಕೇಜ್ ದರ ಹೆಚ್ಚಿದ್ದು, ₹ 5 ಲಕ್ಷ ಹಾಗೂ ಅದಕ್ಕಿಂತ ಹೆಚ್ಚಿನ ಮೌಲ್ಯದ ವಿಮೆ ಯೋಜನೆ ಖರೀದಿಸಬೇಕಾಗಿದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಪ್ಯಾಕೇಜ್‌ಗಳ ದರ ಕಡಿಮೆ ಇದೆ. ಕಡಿಮೆ ಪ್ರೀಮಿಯಂನ ವಿಮೆ ಖರೀದಿಸಿಯೂ, ಚಿಕಿತ್ಸೆ ಪಡೆಯಬಹುದಾಗಿದೆ. ಈಗ ಇರುವ ವಿಶೇಷ ವಾರ್ಡ್‌ಗಳನ್ನೇ ಚಿಕಿತ್ಸೆಗೆ ಬಳಸಲಾಗುತ್ತದೆ.

ಆಸ್ಪತ್ರೆ ಅಭಿವೃದ್ಧಿಗೆ ಬಳಕೆ: ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯ ವಿಕ್ಟೋರಿಯಾ ಆಸ್ಪತ್ರೆ, ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಸಂಜಯ ಗಾಂಧಿ ಟ್ರಾಮಾ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಸೇರಿ ವಿವಿಧ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಖಾಸಗಿ ವಿಮೆ ಅಳವಡಿಕೆಗೆ ಮುಂದಾಗಿವೆ.

ವಿಮಾ ಕಂಪನಿಗಳು ಪಾವತಿಸಿದ ಹಣವನ್ನು ಸೌಲಭ್ಯಗಳ ಬಲವರ್ಧನೆಗೆ ಬಳಸಲು ನಿರ್ಧರಿಸಿವೆ. ಈ ಕ್ರಮದಿಂದ ಸಂಸ್ಥೆಯ ಆರ್ಥಿಕ ಸಂಪನ್ಮೂಲವೂ ಹೆಚ್ಚಲಿದೆ.

‘ಖಾಸಗಿ ವಿಮೆಯಡಿ ಚಿಕಿತ್ಸೆ ಒದಗಿಸುವುದರಿಂದ ಆಸ್ಪತ್ರೆಯ ಆರ್ಥಿಕ ಸಂಪನ್ಮೂಲ ವೃದ್ಧಿಯಾಗಿ, ಇನ್ನಷ್ಟು ಸೌಕರ್ಯ ಒದಗಿಸಬಹುದು. ಸದ್ಯ, 5 ಹಾಸಿಗೆ ಮೀಸಲಿಡಲು ನಿರ್ಧರಿಸಿದ್ದೇವೆ’ ಎಂದು ಪಿಎಂಎಸ್‌ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ವಿಶೇಷಾಧಿಕಾರಿ ಡಾ. ದಿವ್ಯಪ್ರಕಾಶ್ ಎಂ. ತಿಳಿಸಿದರು.

ಜಾರಿಗೆ ಉತ್ತಮ ಸ್ಪಂದನೆ



ಜಯದೇವ ಹೃದ್ರೋಗ ಸಂಸ್ಥೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಗ್ಯಾಸ್ಟ್ರೋ ಎಂಟರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಯಲ್ಲಿ (ಐಗಾಟ್) ಖಾಸಗಿ ವಿಮೆಯಡಿ ಚಿಕಿತ್ಸೆ ನೀಡಲಾಗುತ್ತಿದೆ. ಉತ್ತಮ ಸ್ಪಂದನೆ ಸಿಕ್ಕಿರುವ ಕಾರಣ ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಗಳು ಉಳಿದ ಆಸ್ಪತ್ರೆಗಳ ಪ್ರತಿನಿಧಿಗಳ ಜತೆಗೆ ಸಭೆ ನಡೆಸಿ, ಖಾಸಗಿ ವಿಮೆಯಡಿಯೂ ಚಿಕಿತ್ಸೆ ಒದಗಿಸುವಂತೆ ಸೂಚಿಸಿದ್ದಾರೆ.

‘ವಿಮೆ ಮೌಲ್ಯ ಕಡಿಮೆಯಿದ್ದರೂ ಚಿಕಿತ್ಸೆ’

‘ಈಗ ಒಂದು ಖಾಸಗಿ ವಿಮೆ ಕಂಪನಿ ಜತೆಗೆ ಚರ್ಚಿಸಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ₹ 3 ಲಕ್ಷ ತಗಲುವ ಶಸ್ತ್ರಚಿಕಿತ್ಸೆಗಳನ್ನು ₹ 80 ಸಾವಿರದಿಂದ ₹ 70 ಸಾವಿರಕ್ಕೆ ನಡೆಸಲಾಗುತ್ತಿದೆ. ವಿಮೆ ಮೌಲ್ಯ ಒಂದು ಲಕ್ಷ ರೂಪಾಯಿ ಇದ್ದರೂ ಇಲ್ಲಿ ಚಿಕಿತ್ಸೆ ಸಾಧ್ಯವಾಗಲಿದೆ. ಇದರಿಂದ ಬಡವರಿಗೆ ಚಿಕಿತ್ಸೆ ಪಡೆಯಲು ಸಮಸ್ಯೆಯಾಗದು’ ಎಂದು ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ ನಿರ್ದೇಶಕ ಡಾ. ಮದನ್ ಬಲ್ಲಾಳ್ ತಿಳಿಸಿದರು.

ಕ್ರಿಸ್‌ಮಸ್: ಬೆಂಗಳೂರು– ಕಲಬುರಗಿ ವಿಶೇಷ ರೈಲು ಸಂಚಾರ

ಹುಬ್ಬಳ್ಳಿ: ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ನಿವಾರಿಸಲು ನೈರುತ್ಯ ರೈಲ್ವೆಯು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಬೆಂಗಳೂರು – ಕಲಬುರಗಿ ನಿಲ್ದಾಣಗಳ ನಡುವೆ ಪ್ರತಿ ದಿಕ್ಕಿನಲ್ಲಿ ಎರಡು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು (06589/06590)ಗಳನ್ನು ಓಡಿಸಲಿದೆ.

ಎಸ್‌ಎಂವಿಟಿ ಬೆಂಗಳೂರು-ಕಲಬುರಗಿ ವಿಶೇಷ ಎಕ್ಸ್‌ಪ್ರೆಸ್ ರೈಲು (06533) ಡಿ.22 ಮತ್ತು 24 ರಂದು ರಾತ್ರಿ 9.15ಕ್ಕೆ ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ನಿಲ್ದಾಣದಿಂದ ಹೊರಟು ಮರುದಿನ ಬೆಳಿಗ್ಗೆ 7.40ಕ್ಕೆ ಕಲಬುರಗಿ ತಲುಪಲಿದೆ.

ಪುನಃ ಇದೇ ರೈಲು (06590) ಕಲಬುರಗಿಯಿಂದ ಡಿ.23 ಮತ್ತು 25ರಂದು ಬೆಳಿಗ್ಗೆ 9.34ಕ್ಕೆ ಹೊರಟು ಇದೇ ಮಾರ್ಗವಾಗಿ, ಅದೇ ದಿನ ರಾತ್ರಿ 8ಗಂಟೆಗೆ ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ತಲುಪಲಿದೆ.

ಮಾಹಿತಿಗಾಗಿ ಪ್ರಯಾಣಿಕರು www.enquiry.indianrail.gov.in ಗೆ ಭೇಟಿ ನೀಡಬಹುದು ಎಂದು ನೈರುತ್ಯ ರೈಲ್ವೆ ಇಲಾಖೆಯ ಪ್ರಕಟಣೆ ತಿಳಿಸಿದೆ.

ಗ್ರಾಹಕನ ಮೇಲೆ ಹಲ್ಲೆಗೆ ಯತ್ನ

ಬೆಂಗಳೂರು: ಅಧಿಕ ಹಣ ಪಾವತಿಸುವಂತೆ ಒತ್ತಾಯಿಸಿದ ಕ್ಯಾಬ್ ಚಾಲಕ, ಗ್ರಾಹಕರೊಬ್ಬರನ್ನು ಅವಾಚ್ಯ ಶಬ್ಧಗಳಿಂದ ನಿಂದಿಸಿ, ನಡು ರಸ್ತೆಯಲ್ಲಿ ಹಲ್ಲೆಗೆ ಯತ್ನಿಸಿರುವ ಘಟನೆ ನಗರದಲ್ಲಿ ನಡೆದಿದೆ.

ಪದ್ಮನಾಭನಗರದ ಆರ್. ಕೆ. ಲೇಔಟ್‌ನಲ್ಲಿ ಈ ಘಟನೆ ನಡೆದಿದ್ದು, ಕ್ಯಾಬ್ ಚಾಲಕ ಕಾಂತರಾಜು ಅವರ ವರ್ತನೆಯಿಂದ ಬೇಸತ್ತ ಗ್ರಾಹಕ ಶುಭಂ ಅವರು ಘಟನೆ ಕುರಿತು ವಿಡಿಯೊ ಮಾಡಿ, ನಂತರ ‘ಎಕ್ಸ್’ ನಲ್ಲಿ ಅದನ್ನು ಪೋಸ್ಟ್ ಮಾಡಿ, ನಗರ ಪೊಲೀಸರಿಗೆ ಟ್ಯಾಗ್ ಮಾಡಿದ್ದಾರೆ.

ಶನಿವಾರ ಬೆಳಿಗ್ಗೆ ತಮ್ಮ ಸಂಬಂಧಿಯೊಬ್ಬರಿಗಾಗಿ ಆರ್. ಕೆ. ಲೇಔಟ್‌ನಿಂದ ಶುಭಂ ಅವರು ಓಲಾ ಕ್ಯಾಬ್ ಬುಕ್ ಮಾಡಿದ್ದರು. ಡ್ರಾಪ್ ಮುಗಿದ ಬಳಿಕ ಚಾಲಕ, ‘ನಿಗದಿತ ಅಂತರಕ್ಕಿಂತಲೂ 3 ಕಿ.ಮೀ ಹೆಚ್ಚುವರಿಯಾಗಿದೆ, ಆದ್ದರಿಂದ ಹೆಚ್ಚು ಹಣ ಕೊಡಿ’ ಎಂದು ಕೇಳಿದ್ದಾರೆ. ಇದಕ್ಕೆ ನಿರಾಕರಿಸಿದ ಶುಭಂ, ‘ಆ್ಯಪ್‌ನ ಪ್ರಕಾರ ಹಣ ಪಾವತಿಸುತ್ತೇನೆ’ ಎಂದಿದ್ದಾರೆ.

ಇದೇ ವಿಚಾರಕ್ಕೆ ಕೆಲಕಾಲ ಇಬ್ಬರ ನಡುವೆ ವಾಗ್ವಾದ ನಡೆದಿದೆ. ಕೋಪಗೊಂಡ ಚಾಲಕ, ಕ್ಯಾಬ್‌ನಿಂದ ಇಳಿದು ಶುಭಂ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆಗೆ ಯತ್ನಿಸಿದ್ದಾರೆ. ಸ್ಥಳೀಯರು ಇಬ್ಬರನ್ನೂ ಸಮಾಧಾನಪಡಿಸಿ ಸ್ಥಳದಿಂದ ಕಳಿಸಿದ್ದಾರೆ.

ಗಣರಾಜ್ಯೋತ್ಸವ ಪರೇಡ್ ರಾಜ್ಯದ ಸ್ತಬ್ಧಚಿತ್ರಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2025ರ ಜನವರಿ 26 ರಂದು ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಸ್ತಬ್ಧಚಿತ್ರಗಳ ಪ್ರದರ್ಶನಕ್ಕೆ ಕರ್ನಾಟಕವೂ ಸೇರಿ 15 ರಾಜ್ಯಗಳು ಆಯ್ಕೆಯಾಗಿವೆ.

ರಕ್ಷಣಾ ಇಲಾಖೆ ಆಯ್ಕೆಯಾದ ರಾಜ್ಯಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. 2024 ರ ಗಣರಾಜ್ಯೋತ್ಸವ ಪರೇಡ್‌ಗೆ ಕರ್ನಾಟಕ ಆಯ್ಕೆ ಆಗದ ಕಾರಣ ರಾಜಕೀಯ ಕೆಸರೆರಚಾಟಕ್ಕೆ ಕಾರಣವಾಗಿತ್ತು.

ರಾಜ್ಯದಿಂದ ಈ ಬಾರಿ ಲಕ್ಕುಂಡಿಯ ಪ್ರಾಚೀನ ದೇವಾಲಯ ಸ್ತಬ್ಧಚಿತ್ರ ಪ್ರದರ್ಶಿಸುವ ಸಾಧ್ಯತೆ ಇದೆ. ವಿಶ್ವಪಾರಂಪರಿಕ ತಾಣ ಪಟ್ಟಿಗೆ ಸೇರಿಸುವ ಪ್ರಯತ್ನ ನಡೆಸುತ್ತಿರುವ ರಾಜ್ಯ ಸರ್ಕಾರ ಲಕ್ಕುಂಡಿ ಆಯ್ಕೆ ಮಾಡುವ ಸಾಧ್ಯತೆ ಹೆಚ್ಚು ಎಂದು ಮೂಲಗಳು ಹೇಳಿವೆ. ಚಾಲುಕ್ಯರು, ಕಲಚೂರಿಗಳ ಕಾಲದ ಹಲವು ಶೈವ, ಜೈನ ದೇವಾಲಯಗಳು ಲಕ್ಕುಂಡಿಯಲ್ಲಿವೆ.

ರಕ್ಷಣಾ ಇಲಾಖೆ ಪ್ರತಿ ಮೂರು ವರ್ಷಕ್ಕೊಮ್ಮೆ ವಿವಿಧ ರಾಜ್ಯಗಳ ಸ್ತಬ್ದ ಚಿತ್ರಗಳ ಪ್ರದರ್ಶನಕ್ಕೆ ಅವಕಾಶ ನೀಡಲಿದೆ. ಪರೇಡ್‌ನಲ್ಲಿ ಸ್ತಬ್ದ ಚಿತ್ರ ಪ್ರದರ್ಶನಕ್ಕೆ 15 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೀಮಿತ ಮಾಡಲಾಗಿದೆ. ಇದಕ್ಕಾಗಿ ಅಂತರ್ ರಾಜ್ಯ ಮಂಡಳಿಯ ಆಧಾರದ ಮೇಲೆ ದೇಶವನ್ನು 6 ವಲಯಗಳನ್ನಾಗಿ ವಿಭಾಗಿಸಲಾಗಿದೆ. ಪ್ರತಿ ವಲಯಕ್ಕೂ ಕೋಟಾ ನಿಗದಿ ಮಾಡಿದೆ. 2024, 2025 ಮತ್ತು 2026 ರಲ್ಲಿ ಯಾವ ಯಾವ ರಾಜ್ಯಗಳು ಸ್ತಬ್ಧಚಿತ್ರ ಪ್ರದರ್ಶಿಸಬೇಕು ಎಂಬುದರ ಪಟ್ಟಿ ಈಗಾಗಲೇ ಮಾಡಲಾಗಿದೆ. ಆ ಪ್ರಕಾರ ದಕ್ಷಿಣದ ರಾಜ್ಯಗಳ ಪೈಕಿ ಆಂಧ್ರ ಮತ್ತು ಕರ್ನಾಟಕ್ಕೆ 2025ಕ್ಕೆ ಅವಕಾಶ ಸಿಕ್ಕಿದೆ. ಕೇರಳ, ತಮಿಳುನಾಡು ಮತ್ತು ಪುದುಚೇರಿಗೆ 2026ರಲ್ಲಿ ಅವಕಾಶ ಸಿಗಲಿದೆ.

26ರಿಂದ ಮಹಿಳಾ ಸಾಹಿತ್ಯ ಸಮ್ಮೇಳನ

ಬೆಂಗಳೂರು: ಯುಗದರ್ಶಿನಿ ಮಹಿಳಾ ಫೌಂಡೇಷನ್ ಇದೇ 26ರಿಂದ 28ರವರೆಗೆ ಉತ್ತರ ಪ್ರದೇಶದ ವಾರಾಣಸಿಯ ಸ್ವತಂತ್ರತಾ ಭವನದಲ್ಲಿ ಅಖಿಲ ಭಾರತ ಮಹಿಳಾ ಸಾಹಿತ್ಯ ಸಮ್ಮೇಳನ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಫೌಂಡೇಷನ್ ಅಧ್ಯಕ್ಷೆ ಸರಸ್ವತಿ ಚಿಮ್ಮಲಗಿ, ಮಹಿಳಾ ಸಾಹಿತ್ಯದ ಉನ್ನತೀಕರಣ ಸಮ್ಮೇಳನದ ಆಶಯವಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ದೇಶದ 70 ಸಾಧಕರಿಗೆ ‘ಯುಗದರ್ಶಿನಿ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ’ ಎಂದು ತಿಳಿಸಿದರು.

ಮಂಗಳೂರಿಗೆ ವಿಶೇಷ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರಿಸ್‌ಮಸ್ ಪ್ರಯುಕ್ತ ಮಂಗಳೂರಿಗೆ ಎರಡು ಟ್ರಿಪ್ ವಿಶೇಷ ಎಕ್ಸ್‌ಪ್ರೆಸ್ ರೈಲು ಓಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಡಿ.23 ಮತ್ತು 27ರಂದು ರಾತ್ರಿ 11.55ಕ್ಕೆ ಯಶವಂತಪುರದಿಂದ ಹೊರಡಲಿದ್ದು, ಮರುದಿನ ಬೆಳಿಗ್ಗೆ 11.45ಕ್ಕೆ ಮಂಗಳೂರು ಜಂಕ್ಷನ್ ತಲುಪಲಿದೆ. ಡಿ.24 ಮತ್ತು 28ರಂದು ಮಧ್ಯಾಹ್ನ 1ಕ್ಕೆ ಅದೇ ರೈಲು ಮಂಗಳೂರು ಜಂಕ್ಷನ್ ನಿಲ್ದಾಣದಿಂದ ಹೊರಡಲಿದ್ದು, ಅಂದೇ ರಾತ್ರಿ 10.30ಕ್ಕೆ ಯಶವಂತಪುರ ತಲುಪಲಿದೆ.

ಈ ರೈಲು ಕುಣಿಗಲ್, ಚನ್ನರಾಯ ಪಟ್ಟಣ, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕ-ಪುತ್ತೂರು ಮತ್ತು ಬಂಟ್ವಾಳ ನಿಲ್ದಾಣಗಳಲ್ಲಿ ನಿಲುಗಡೆಗೊಳ್ಳಲಿದೆ ಎಂದು ನೈರುತ್ಯ ರೈಲ್ವೆಯ ಅಧಿಕಾರಿಗಳು ತಿಳಿಸಿದ್ದಾರೆ.

ನಿಧನ ವಾರ್ತೆ

ಸ್ವರ್ಣಾಂಬಾ

ನೆಲಮಂಗಲ: ಭಾರತೀಯ ವೈದ್ಯಕೀಯ ಸಂಘದ ನೆಲಮಂಗಲ ಘಟಕದ ಅಧ್ಯಕ್ಷ ಡಾ.ಎಂ. ಜಯಪ್ರಸಾದ್ ಅವರ ತಾಯಿ ಸ್ವರ್ಣಾಂಬಾ ಮಲ್ಲಪ್ಪ (103) ಶನಿವಾರ ರಾತ್ರಿ ನಿಧನರಾಗಿದ್ದಾರೆ.

ಮೃತರಿಗೆ ಮೂವರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. ಭಾನುವಾರ ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುಜಾತಾ

ನೆಲಮಂಗಲ: ಪಟ್ಟಣದ ಸ್ತ್ರೀರೋಗ ತಜ್ಞೆ ಡಾ.ವಾರಿಣಿ ವಸಂತಕುಮಾರ ಅವರ ತಾಯಿ ಕೆ.ಎಸ್. ಸುಜಾತಾ(87) ಅವರು ವಯೋಸಹಜ ಅನಾರೋಗ್ಯ ದಿಂದಾಗಿ ಭಾನುವಾರ ಮುಂಜಾನೆ ನಿಧನರಾಗಿದ್ದಾರೆ.

ಮೃತರಿಗೆ ಒಬ್ಬ ಪುತ್ರ, ಪುತ್ರಿ ಇದ್ದಾರೆ. ವಿಪ್ರ ಉರುವಲು ಚಿತಾಗಾರದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಡಿಜಿಟಲ್ ಅರೆಸ್ಟ್: ₹11.8 ಕೋಟಿ ವಂಚನೆ

ಮುಂಬೈ ಪೊಲೀಸರ ಸೋಗಿನಲ್ಲಿ ನಗರದ ಸಾಫ್ಟ್‌ವೇರ್ ಉದ್ಯೋಗಿಗೆ ಕರೆ • ಏಳು ಖಾತೆಗಳಿಗೆ ಹಣ ವರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರಿಗೆ ಮುಂಬೈ ಪೊಲೀಸರ ಸೋಗಿನಲ್ಲಿ ಕರೆ ಮಾಡಿದ ವಂಚಕರು, ಡಿಜಿಟಲ್ ಅರೆಸ್ಟ್ ಮೂಲಕ ಬೆದರಿಸಿ ₹11.83 ಕೋಟಿ ಹಣವನ್ನು ತಮ್ಮ ಖಾತೆಗೆ ವರ್ಗಾಯಿಸಿಕೊಂಡಿದ್ದಾರೆ.

ಈವರೆಗೆ ರಾಜ್ಯದಲ್ಲಿ ವರದಿಯಾದ ಅತ್ಯಧಿಕ ಮೊತ್ತ ಕಳೆದುಕೊಂಡ ಡಿಜಿಟಲ್ ಅರೆಸ್ಟ್ ಪ್ರಕರಣ ಇದಾಗಿದೆ.

ಹಣ ಕಳೆದುಕೊಂಡಿರುವ ವಿಜಯ್ ಕುಮಾರ್ ಅವರು ನೀಡಿರುವ ದೂರು ಆಧರಿಸಿ ಈಶಾನ್ಯ ವಿಭಾಗದ ಸಿಇಎನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ವಂಚಕರು ಏಳು ಪ್ರತ್ಯೇಕ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಯಿಸಿ ಕೊಂಡಿದ್ದು, ಹಣದ ವಹಿವಾಟು ನಡೆದ ಖಾತೆಗಳ ವಿವರ ಸಂಗ್ರಹಿಸಲಾಗು- ತ್ತಿದೆ. ತನಿಖೆ ಪ್ರಗತಿಯಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಖಾಸಗಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ವಿಜಯ್ ಕುಮಾರ್ ಅವರಿಗೆ ನವೆಂಬರ್ 11ರಂದು ಕರೆ ಮಾಡಿದ್ದ ಅಪರಿಚಿತ ವ್ಯಕ್ತಿ, ಟೆಲಿಕಾಂ ರೆಗ್ಯುಲೇಟರಿ ಅಥಾರಿಟಿ ಆಫ್ ಇಂಡಿಯಾ (ಟ್ರಾಯ್) ಪ್ರತಿನಿಧಿ ಎಂದು ಪರಿಚಯಿಸಿಕೊಂಡಿದ್ದ. ಬಳಿಕ ‘ನಿಮ್ಮ ಆಧಾರ್ ಕಾರ್ಡ್‌ಗೆ ಲಿಂಕ್ ಆಗಿರುವ ಮೊಬೈಲ್ ನಂಬರ್‌ನ್ನು ಕಾನೂನು ಬಾಹಿರ ಜಾಹೀರಾತು ಹಾಗೂ ಸಂದೇಶಗಳ ರವಾನೆಗೆ ಬಳಸಲಾಗಿದೆ. ಆ ನಂಬರ್‌ನಲ್ಲಿ ಸೇವೆಯನ್ನು ಸ್ಥಗಿತಗೊಳಿ- ಸಲಾಗುತ್ತಿದೆ. ಮುಂಬೈನ ಕೊಲಾಬಾದ ಸೈಬರ್ ಕ್ರೈಂ ಠಾಣೆಯಲ್ಲಿ ನಿಮ್ಮ ವಿರುದ್ಧ ಪ್ರಕರಣ ದಾಖಲಾಗಿದ್ದು, ವಿಚಾರಣೆ ಎದುರಿಸಬೇಕಾಗುತ್ತದೆ ಎಂದು ಬೆದರಿಸಿ ದ್ದಾನೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಲ ನಿಮಿಷದ ಬಳಿಕ ಕರೆ ಮಾಡಿದ್ದ ಮತ್ತೊಬ್ಬ ಅಪರಿಚಿತ ವ್ಯಕ್ತಿಯ ಸೂಚನೆಯಂತೆ ವಿಜಯ್ ಅವರು ಸ್ಕೈಪ್ ವಿಡಿಯೊ ಕಾಲಿಂಗ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಬಳಿಕ ಪೊಲೀಸ್ ವಸ್ತ್ರದಲ್ಲಿದ್ದ ವ್ಯಕ್ತಿಯೊಬ್ಬ ವಿಡಿಯೊ ಕರೆ ಮಾಡಿ, ತಾನು ಮುಂಬೈ ಪೊಲೀಸ್ ಅಧಿಕಾರಿ ಎಂದು ಹೇಳಿದ್ದಾನೆ.

ಉದ್ಯಮಿ ನರೇಶ್ ಗೋಯಲ್ ಎಂಬುವರು ನಿಮ್ಮ ಆಧಾರ್ ಕಾರ್ಡ್ ಬಳಸಿ ಕೆನರಾ ಬ್ಯಾಂಕ್‌ನಲ್ಲಿ ಖಾತೆ ತೆರೆದು ₹6 ಕೋಟಿ ವಹಿವಾಟು ನಡೆಸಿದ್ದಾರೆ. ಆದ್ದರಿಂದ ಹಣ ಅಕ್ರಮ ವರ್ಗಾವಣೆ ಆರೋಪದಡಿ ಡಿಜಿಟಲ್ ಅರೆಸ್ಟ್ ಮಾಡಲಾಗುತ್ತಿದೆ. ಪ್ರಕರಣದ ತನಿಖೆ ಕುರಿತು ಯಾರಿಗೂ ಮಾಹಿತಿ ನೀಡಬಾರದೆಂದು ಸೂಚಿಸಿದ್ದಾನೆ’ ಎಂದಿದ್ದಾರೆ. ನವೆಂಬರ್ 25ರಂದು ಮತ್ತೆ ಸ್ಕೈಪ್ ಮೂಲಕ ವಿಡಿಯೊ ಕರೆ ಮಾಡಿದ್ದ ವಂಚಕ, ‘ನಿಮ್ಮ ವಿರುದ್ಧದ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದೆ. ಹೇಳಿದಂತೆ ಕೇಳದಿದ್ದರೆ ಕುಟುಂಬ ಸದಸ್ಯರನ್ನು ಬಂಧಿಸಬೇಕಾಗುತ್ತದೆ. ತನಿಖೆಯ ಭಾಗವಾಗಿ ನಿಮ್ಮ ಬ್ಯಾಂಕ್ ಖಾತೆ ಪರಿಶೀ- ಲಿಸಬೇಕಿರುವ ಕಾರಣ, ಹಣ ವರ್ಗಾವಣೆ ಮಾಡಬೇಕು’ ಎಂದು ಹೇಳಿದ್ದಾನೆ.

ವಂಚಕರು ನೀಡಿದ್ದ ಬ್ಯಾಂಕ್ ಖಾತೆಗೆ ವಿಜಯ್ ಕುಮಾರ್ ಅವರು ₹75 ಲಕ್ಷ, ಬಳಿಕ ಮತ್ತೊಂದು ಖಾತೆಗೆ ₹3.41 ಕೋಟಿ ವರ್ಗಾಯಿಸಿದ್ದಾರೆ. ಇದೇ ರೀತಿ ಡಿಸೆಂಬರ್ 12ರವರೆಗೂ ನಿತ್ಯ ವಿಜಯ್‌ಕುಮಾರ್‌ಗೆ ಕರೆ ಮಾಡಿ, ಬಂಧನದ ಬೆದರಿಕೆಯೊಡ್ಡಿ ಒಟ್ಟು ₹11,83,55,648 ಹಣವನ್ನು ಬೇರೆ ಬೇರೆ ಖಾತೆಗಳಿಗೆ ಆರೋಪಿಗಳು ವರ್ಗಾಯಿಸಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

11 ತಿಂಗಳಲ್ಲಿ 491 ಡಿಜಿಟಲ್ ಅರೆಸ್ಟ್ ಪ್ರಕರಣ

ಡಿಜಿಟಲ್ ಅರೆಸ್ಟ್ ಪ್ರಕರಣಗಳು ದಾಖಲಾಗಿರುವ ಪಟ್ಟಿಯಲ್ಲಿ ಕರ್ನಾಟಕವು ದೇಶದಲ್ಲೇ 2ನೇ ಸ್ಥಾನ ಪಡೆದಿದೆ.

2024ರ ನವೆಂಬರ್ ಅಂತ್ಯಕ್ಕೆ ರಾಜ್ಯದಲ್ಲಿ 641 ಡಿಜಿಟಲ್ ಅರೆಸ್ಟ್ ಪ್ರಕರಣಗಳು ವರದಿಯಾಗಿದ್ದು, ₹109 ಕೋಟಿ ವಂಚಕರ ಪಾಲಾಗಿದೆ. ಆ ಪೈಕಿ ಬೆಂಗಳೂರಿನಲ್ಲಿ 480 ಪ್ರಕರಣಗಳು ವರದಿಯಾಗಿದ್ದು, ₹42.4 ಕೋಟಿ ವಂಚಿಸಲಾಗಿದೆ. ಕೇವಲ ₹9 ಕೋಟಿ ಹಣವನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ನಿರ್ಲಕ್ಷ್ಯದ ಚಾಲನೆ: ಚಾಲಕನ ವಿರುದ್ಧ ಎಫ್ಐಆರ್

6 ಜನ ಸಾವು: ತನಿಖೆ ಶುರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಪುಣೆ ರಾಷ್ಟ್ರೀಯ ಹೆದ್ದಾರಿಯ ತಿಪ್ಪಗೊಂಡನ ಹಳ್ಳಿ–ತಾಳೇಕೆರೆ ಗೇಟ್ ಬಳಿ ಶನಿವಾರ ಸಂಭವಿಸಿದ ರಸ್ತೆ ಅಪಘಾತದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಂಟೇನರ್ ಚಾಲಕ ಆರೀಫ್ ಅನ್ಸಾರಿ ವಿರುದ್ಧ ನೆಲಮಂಗಲ ಪೊಲೀಸರು ಎಫ್ಐಆರ್ ದಾಖಲಿಸಿದ್ದಾರೆ.

ಮೃತ ಸಾಫ್ಟವೇರ್ ಉದ್ಯಮಿ ಚಂದ್ರಮ್ ಏಗಪ್ಪಗೋಳ ಅವರ ಸಹೋದರ ಡಾ.ಮಲ್ಲಿನಾಥ ಅವರ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ಕೊಂಡಿದ್ದು, ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿರುವ ದೃಶ್ಯ ಆಧರಿಸಿ ಡಿವೈಎಸ್‌ಪಿ ತನಿಖೆ ನಡೆಸುತ್ತಿದ್ದಾರೆ.

‘ಕಂಟೇನರ್ ಚಾಲಕನ ನಿರ್ಲಕ್ಷ್ಯ ಹಾಗೂ ಅಜಾಗರೂಕತೆಯಿಂದಲೇ ಅನಾಹುತ ಸಂಭವಿಸಿದೆ. ಅಪಘಾತದಲ್ಲಿ ಚಾಲಕನ ಕಾಲಿಗೆ ಗಂಭೀರ ಗಾಯವಾಗಿದ್ದು, ವಿಕ್ಟೋರಿಯಾ ಆಸ್ಪತ್ರೆ- ಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ತುಮಕೂರು ಕಡೆಯಿಂದ ಬೆಂಗಳೂರಿನತ್ತ ಚಲಿಸುತ್ತಿದ್ದ ಕಂಟೇನರ್‌ನ ಮುಂಭಾಗದಲ್ಲಿದ್ದ ಕಾರೊಂದರ ಚಾಲಕ ದಿಢೀರ್ ವೇಗ ತಗ್ಗಿಸಿದ್ದಾರೆ. ಆಗ ಎದುರಿಗಿದ್ದ ಕಾರಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸುವ ಪ್ರಯತ್ನದಲ್ಲಿ ಕಂಟೇನರ್ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಆಗಿದೆ. ಬಳಿಕ ಬೆಂಗಳೂರಿನಿಂದ ತುಮಕೂರಿನ ಕಡೆಗೆ ಚಲಿಸುತ್ತಿದ್ದ ಟೆಂಪೊಗೆ ಡಿಕ್ಕಿಯಾಗಿ, ವೋಲ್ವೊ ಕಾರಿನ ಮೇಲೆ ಬಿದ್ದ ಪರಿಣಾಮ ಆರು ಮಂದಿ ಮೃತಪಟ್ಟರು’ ಎಂದು ಪೊಲೀಸರು ಹೇಳಿದ್ದಾರೆ.

‘ಅಪಘಾತಕ್ಕೆ ಕಾರಣವೇನು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ. ಅಪಘಾತಕ್ಕೆ ಕಾರಣವಾದ ಕಾರು ಯಾವುದು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಅಪಘಾತದ ದೃಶ್ಯಗಳು ಘಟನಾ ಸ್ಥಳದ ಸಮೀಪದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ವೋಲ್ವೊ ಕಾರಿನ ಡ್ಯಾಷ್ ಬೋರ್ಡ್‌ನ ಕ್ಯಾಮೆರಾಗಳು ಸಂಪೂರ್ಣ ನಜ್ಜುಗುಜ್ಜು ಆಗಿದೆ. ಮೃತ ಚಂದ್ರಮ್ ಅವರ ಐಫೋನ್ ವಶಕ್ಕೆ ಪಡೆಯಲಾಗಿದ್ದು, ಅವರ ಪಾಸ್‌ವರ್ಡ್ ಪತ್ತೆಯಾಗಿಲ್ಲ. ಹಾಗಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ’ ಎಂದು ಹೇಳಿದರು.

ಕ್ರಿಸ್ಮಸ್ ಹಬ್ಬದ ರಜೆಯ ಕಾರಣ ಚಂದ್ರಮ್ ಏಗಪ್ಪಗೋಳ ಅವರು ಕುಟುಂಬ ಸಹಿತ ಶನಿವಾರ ಸ್ವಗ್ರಾಮಕ್ಕೆ ತಮ್ಮ ವೋಲ್ವೊ ಕಾರಿನಲ್ಲಿ ತೆರಳು- ತ್ತಿದ್ದರು. ರಸ್ತೆ ಮಧ್ಯೆ ಕಾರಿನ ಮೇಲೆ ಕಂಟೇನರ್ ಮಗುಚಿ ಬಿದ್ದ ಪರಿಣಾಮ ಚಂದ್ರಮ್ ಏಗಪ್ಪಗೋಳ (46), ಪತ್ನಿ ಗೌರಾಬಾಯಿ ಚಂದ್ರಮ್ ಏಗಪ್ಪಗೋಳ (40), ಧೀಕ್ಷಾ ಚಂದ್ರಮ್ ಏಗಪ್ಪಗೋಳ (10), ಗ್ಯಾನ್ ಏಗಪ್ಪಗೋಳ (16), ಆರ್ಯ ಚಂದ್ರಮ್ ಏಗಪ್ಪಗೋಳ (6) ಮತ್ತು ವಿಜಯಲಕ್ಷ್ಮಿ (36) ಮೃತಪಟ್ಟಿ- ದ್ದರು.

ಸಾಮೂಹಿಕ ಅಂತ್ಯಕ್ರಿಯೆ: ಅಪಘಾತ ದಲ್ಲಿ ಮೃತಪಟ್ಟ ಆರು ಜನರ ಅಂತ್ಯಕ್ರಿಯೆ ಭಾನುವಾರ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯ ಜತ್ ತಾಲ್ಲೂಕಿನ ಮೊರಬಗಿ ಗ್ರಾಮದಲ್ಲಿ ನಡೆಯಿತು.

ವೇಶ್ಯಾವಾಟಿಕೆ: ಗೂಂಡಾ ಕಾಯ್ದೆಯಡಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಾಗೂ ಹೊರರಾಜ್ಯಗಳ ಸ್ಪಾಗಳಲ್ಲಿ ಹೈಟೆಕ್ ವೇಶ್ಯವಾಟಿಕೆ ನಡೆಸುತ್ತಿದ್ದ ಆರೋಪಿಯನ್ನು ಕೇಂದ್ರ ಅಪರಾಧ ವಿಭಾಗ(ಸಿಸಿಬಿ)ದ ಮಹಿಳಾ ಸಂರಕ್ಷಣಾ ದಳದ ಅಧಿಕಾರಿಗಳು ಗೂಂಡಾ ಕಾಯ್ದೆಯಡಿ ಬಂಧಿಸಿದ್ದಾರೆ.

ಮಹದೇವಪುರ ನಿವಾಸಿ ಅನಿಲ್ ಕುಮಾರ್ ಅಲಿಯಾಸ್ ಅನಿಲ್ ರೆಡ್ಡಿ(40) ಬಂಧಿತ ಆರೋಪಿ.

ಆರೋಪಿಯು ಹೊರರಾಜ್ಯ ಹಾಗೂ ವಿದೇಶಿ ಮಹಿಳೆಯರಿಗೆ ಸ್ಪಾಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ, ಹೆಚ್ಚಿನ ಸಂಬಳದ ಆಮಿಷವೊಡ್ಡಿ ಅಕ್ರಮ ಬಂಧನದಲ್ಲಿ ಇರಿಸಿಕೊಂಡು ಹೈಟೆಕ್ ವೇಶ್ಯಾವಾಟಿಕೆ ನಡೆಸುತ್ತಿದ್ದ. ಈತನ ಮಾನವ ಕಳ್ಳಸಾಗಣೆ ಹಾಗೂ ವೇಶ್ಯವಾಟಿಕೆ ದಂಧೆಯನ್ನು ಪರಿ- ಣಾಮಕಾರಿಯಾಗಿ ನಿಯಂತ್ರಿಸುವ ನಿಟ್ಟಿನಲ್ಲಿ ಗೂಂಡಾ ಕಾಯ್ದೆಯಡಿ ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅನಿಲ್ ಕುಮಾರ್ ವಿರುದ್ಧ ಆಂಧ್ರಪ್ರದೇಶ ಹಾಗೂ ಮಹದೇವಪುರ ಪೊಲೀಸ್ ಠಾಣೆಗಳಲ್ಲಿ ಮಾನವ ಕಳ್ಳ ಸಾಗಣೆ, ಅತ್ಯಾಚಾರ ಸೇರಿದಂತೆ ನಾಲ್ಕು ಅಪರಾಧ ಪ್ರಕರಣಗಳು ದಾಖಲಾಗಿವೆ. ಆದರೂ ಈತ ವೃತ್ತಿಪರ ವೇಶ್ಯಾಗೃಹಗಳನ್ನು ನಡೆಸುವುದನ್ನು ಮುಂದುವರೆಸಿದ್ದ. ಹಾಗಾಗಿ ಮಹದೇವಪುರ ಠಾಣೆ ಪೊಲೀಸರು ಹಾಗೂ ಸಿಸಿಬಿ ಅಧಿಕಾರಿಗಳು ಆರೋಪಿಯನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ನಗರ ಪೊಲೀಸ್ ಕಮಿಷನರ್‌ಗೆ ಪ್ರಸ್ತಾವನೆ ಸಲ್ಲಿಸಿದ್ದರು. ಆರೋಪಿಯನ್ನು ಬಂಧಿಸಿ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಒಪ್ಪಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

₹2 ಲಕ್ಷ ದಂಡ ವಸೂಲು

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸುವ ಸವಾರರ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ನಗರದ ಸಂಚಾರ ಪೂರ್ವ ವಿಭಾಗದ ಪೊಲೀಸರು, ಶನಿವಾರ 402 ಪ್ರಕರಣ ದಾಖಲಿಸಿ ₹2.01 ಲಕ್ಷ ದಂಡ ವಸೂಲಿ ಮಾಡಿದ್ದಾರೆ.

ಏಕಮುಖ ಸಂಚಾರ ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಸಂಚಾರ, ನೋ ಪಾರ್ಕಿಂಗ್, ಫುಟ್‌ಪಾತ್‌ನಲ್ಲಿ ವಾಹನಗಳ ನಿಲುಗಡೆ, ಬೈಕ್‌ನಲ್ಲಿ ಮೂವರು ಸವಾರರ ಪ್ರಯಾಣ ಸೇರಿದಂತೆ ವಿವಿಧ ಸಂಚಾರ ನಿಯಮ ಉಲ್ಲಂಘಿಸಿದ ಸವಾರರು ಹಾಗೂ ಚಾಲಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮುಂದಿನ ದಿನಗಳಲ್ಲಿಯೂ ಈ ವಿಶೇಷ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್.ಜೈನ್ ತಿಳಿಸಿದ್ದಾರೆ.

ಗಾಂಜಾ ಮಾರಾಟ: ವ್ಯಕ್ತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಷ್ಟ್ರದಿಂದ ಗಾಂಜಾ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ವ್ಯಕ್ತಿಯೊಬ್ಬನನ್ನು ವಿದ್ಯಾರಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೋಣನಕುಂಟೆ ನಿವಾಸಿ ಸೆಂದಿಲ್ ಕುಮಾರ್‌ನನ್ನು ಬಂಧಿಸಿ, ₹4.5 ಲಕ್ಷ ಮೌಲ್ಯದ 15.930 ಕೆ.ಜಿ. ಗಾಂಜಾ ಜಪ್ತಿ ಮಾಡಲಾಗಿದೆ. ನಾಪತ್ತೆಯಾಗಿರುವ ಪ್ರಮುಖ ಆರೋಪಿ ಇಲಿಯಾಸ್ ನಗರದ ಅಸ್ಗರ್ ಪತ್ತೆಗೆ ಪೊಲೀಸರ ತನಿಖೆ ಮುಂದುವರೆದಿದೆ.

ವಿಶ್ವನಗರದ ಸ್ಮಶಾನದ ಬಳಿ ಗಾಂಜಾ ಮಾರಾಟಕ್ಕೆ ಸೆಂದಿಲ್ ಯತ್ನಿಸಿರುವ ಬಗ್ಗೆ ಖಚಿತ ಆಧರಿಸಿ ಇನ್‌ಸ್ಪೆಕ್ಟರ್ ಸಿ.ಬಿ.ಶಿವಸ್ವಾಮಿ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ಬಂಧಿಸಿತು.

‘ಸೆಂದಿಲ್ ಎರಡು ವರ್ಷದ ಹಿಂದೆ ದರೋಡೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಸೇರಿದ್ದಾಗ ಗಾಂಜಾ ಪೆಡ್ಲರ್ ಅಸ್ಗರ್ ಪರಿಚಯವಾಗಿತ್ತು. ಆತನ ಸೂಚನೆ ಮೇರೆಗೆ ಮಹಾರಾಷ್ಟ್ರದ ನಾಸಿಕ್‌ಗೆ ಬಸ್‌ನಲ್ಲಿ ತೆರಳಿ ಗಾಂಜಾ ಖರೀದಿಸಿ ತಂದು ಮಾರಾಟ ಮಾಡುತ್ತಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ನೇಹಿತನ ಕೊಲೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯದ ಅಮಲಿನಲ್ಲಿ ಮನೆಯಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದ ಎಂಬ ಕಾರಣಕ್ಕೆ ಆಶ್ರಯ ನೀಡಿದ್ದ ಸ್ನೇಹಿತನನ್ನು ಕೊಲೆ ಮಾಡಿದ್ದ ಆರೋಪಿಯನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರ ತಾಲ್ಲೂಕಿನ ತಿಮ್ಮಭೋವಿ ಪಾಳ್ಯ ನಿವಾಸಿ ಪ್ರದೀಪ್ (41) ಕೊಲೆಯಾಗಿದ್ದು, ಆರೋಪಿ ಚೇತನ್ (26) ನನ್ನು ಬಂಧಿಸಲಾಗಿದೆ.

‘ತಿಮ್ಮಭೋವಿಪಾಳ್ಯದ ಸ್ವಂತ ಮನೆಯಲ್ಲಿ ಪ್ರದೀಪ್ ವಾಸವಿದ್ದರು. ಮೂರು ತಿಂಗಳ ಹಿಂದೆ ಸ್ನೇಹಿತ ಚೇತನ್‌ಗೆ ಆಶ್ರಯ ನೀಡಿದ್ದರು. ಶುಕ್ರವಾರ ರಾತ್ರಿ ಇಬ್ಬರ ನಡುವೆ ಗಲಾಟೆ ನಡೆದಿದೆ. ಗಲಾಟೆ ಶಬ್ದ ಹೊರಗಡೆ ಕೇಳಿಸಬಾರದು ಎಂದು ಟಿ.ವಿಯ ಶಬ್ದವನ್ನು ಜೋರು ಮಾಡಿ, ಆರೋಪಿಯು ದೊಣ್ಣೆಯಿಂದ ಹಲ್ಲೆ ಮಾಡಿ ಕೊಲೆ ಮಾಡಿದ್ದಾನೆ. ಬಾಡಿಗೆ ಮನೆಯವರು ಬಂದು ನೋಡುವಷ್ಟ ರಲ್ಲಿ ಪರಾರಿಯಾಗಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ .

‘ಕೊಲೆ ಮಾಡಿದ ಬಳಿಕ ಆರೋಪಿ ತನ್ನ ಕಾರಿನಲ್ಲಿ ಸೇಲಂಗೆ ತೆರಳಿದ್ದ. ಪೊಲೀಸರಿಗೆ ಸಿಕ್ಕಿಬೀಳುವ ಭಯದಿಂದ ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂ ಕರೆ ಮಾಡಿ ಸ್ನೇಹಿತರೊಂದಿಗೆ ಮಾತನಾಡುತ್ತಿದ್ದ. ಸ್ನೇಹಿತರೊಬ್ಬರಿಗೆ ಕರೆ ಮಾಡಿದ ಬಳಿಕ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದ. ಆ ಕರೆಯ ಲೊಕೇಷನ್ ಆಧರಿಸಿ ಕಾರ್ಯಾಚರಣೆ ನಡೆಸಿ, ಸೇಲಂನ ಹೋಟೆಲ್‌ನಲ್ಲಿ ತಂಗಿದ್ದ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತರಲಾಯಿತು’ ಎಂದು ಹೇಳಿದರು.

‘ಆರೋಪಿ ಚೇತನ್, ಕೊಲೆ ಯತ್ನ, ದರೋಡೆ ಪ್ರಕರಣದಲ್ಲಿ ಜೈಲಿಗೆ ಹೋಗಿ ಜಾಮೀನಿನ ಮೇಲೆ ಹೊರ ಬಂದಿದ್ದ. ಕಾರು ಓಡಿಸಿಕೊಂಡು ಜೀವನ ನಡೆಸುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

‘ಮರಣೋತ್ತರ ಪರೀಕ್ಷೆ ವೇಳೆ ಕೊಲೆಯಾದ ವ್ಯಕ್ತಿಯ ಪೃಷ್ಠದ ಭಾಗದಲ್ಲಿ ಸಿಗರೇಟ್‌ನಿಂದ ಸುಟ್ಟ ಗಾಯಗಳಾಗಿ ದ್ದವು. ಅನುಮಾನಗೊಂಡು ಪೊಲೀಸರು ಆರೋಪಿಯನ್ನು ವಿಚಾರಿಸಿದಾಗ, ಆತ ಸ್ಪಷ್ಟ ಉತ್ತರ ನೀಡಲಿಲ್ಲ. ಮದ್ಯ ಸೇವಿಸಿ ಬಂದು ಮನೆಯಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದ ಕಾರಣ ಕೊಲೆ ಮಾಡಿರುವುದಾಗಿ ಹೇಳಿದ್ದಾನೆ. ಆದರೆ, ಸಲಿಂಗಕಾಮಕ್ಕೆ ಸಹಕರಿಸದ ಕಾರಣಕ್ಕೆ ಸಿಗರೇಟ್‌ನಿಂದ ಪೃಷ್ಠಕ್ಕೆ ಸುಟ್ಟಿರುವ ಸಾಧ್ಯತೆ ಇದೆ. ವೈದ್ಯಕೀಯ ಪರೀಕ್ಷಾ ವರದಿ ಬಂದ ಬಳಿಕ ನಿಖರ ಕಾರಣ ತಿಳಿಯಲಿದೆ’ ಎಂದು ಪೊಲೀಸರು ತಿಳಿಸಿದರು.

ಚಿತ್ರಾವಳಿ

ಅರಮನೆ ಮೈದಾನದಲ್ಲಿ ಇದೇ 27ರಿಂದ 29ರವರೆಗೆ ನಡೆಯಲಿರುವ ವಿಶ್ವ ಹವ್ಯಕ ತೃತೀಯ ಸಮ್ಮೇಳನದ ಪ್ರಯುಕ್ತ ಅಖಿಲ ಹವ್ಯಕ ಮಹಾಸಭಾವು ಮಲ್ಲೇಶ್ವರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಹವ್ಯಕ ವಾಕಥಾನ್‌ಗೆ ಶಾಸಕ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಚಾಲನೆ ನೀಡಿದರು. ಚಿತ್ರನಟಿ ರಾಧಿಕಾ ನಾರಾಯಣ್, ಕಿರುತೆರೆ ನಟಿ ಚಂದನಾ ಅನಂತಕೃಷ್ಣ, ಮಹಾಸಭೆ ಅಧ್ಯಕ್ಷ ಡಾ. ಗಿರಿಧರ ಕಜೆ ಪಾಲ್ಗೊಂಡಿದ್ದರು

ದಕ್ಷಿಣ ಕನ್ನಡಿಗರ ಸಂಘವು ನಗರದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಉದ್ಯಮಿ ಟಿ.ಕೆ.ಉಮರ್ ಅವರಿಗೆ ‘ಕರಾವಳಿ ರತ್ನ ಪ್ರಶಸ್ತಿ’ ಪ್ರದಾನ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿದೇವಿ ಮಾಲಗತ್ತಿ, ಸಂಘದ ಅಧ್ಯಕ್ಷ ಕೆ.ಸಿ.ಬಲ್ಲಾಳ್, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ಲಿಯೊ ಕ್ವಾಡ್ರೋಸ್ ಹಾಗೂ ಮುಂಬೈನ ವರ್ಲ್ಡ್ ಫೆಡರೇಷನ್‌ನ ಉಪಾಧ್ಯಕ್ಷ ಕರ್ನಿರೆ ವಿಶ್ವನಾಥ್ ಶೆಟ್ಟಿ ಉಪಸ್ಥಿತರಿದ್ದರು

ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಸರಘಟ್ಟ ಸಮೀಪದ ಬೊಮ್ಮಶೆಟ್ಟಹಳ್ಳಿ, ಕಿತ್ತನಹಳ್ಳಿ, ಅಂಚೆಪಾಳ್ಯ ಗ್ರಾಮಗಳಲ್ಲಿ ₹9 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭಾನುವಾರ ಶಾಸಕ ಎಸ್.ಆರ್.ವಿಶ್ವನಾಥ್ ಗುದ್ದಲಿ ಪೂಜೆ ನೆರವೇರಿಸಿದರು.

ಸರ್ಕಾರಿ ಇಲಾಖೆಗಳೇ 'ಹೊರೆ'!

ಕೇಂದ್ರ, ರಾಜ್ಯ ಸರ್ಕಾರದಿಂದ ಜಲಮಂಡಳಿಗೆ ₹150 ಕೋಟಿ ನೀರಿನ ಶುಲ್ಕ ಬಾಕಿ

• ಗಾಣಧಾಳು ಶ್ರೀಕಂಠ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ (ಬಿಡಬ್ಲ್ಯುಎಸ್‌ಎಸ್‌ಬಿ) ರಾಜ್ಯ, ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳು, ಅಧೀನ ಸಂಸ್ಥೆಗಳು ₹150 ಕೋಟಿಗೂ ಹೆಚ್ಚು ಮೊತ್ತದ ಶುಲ್ಕ ಬಾಕಿ ಉಳಿಸಿಕೊಂಡಿವೆ.

ರಾಜ್ಯ, ಕೇಂದ್ರ ಸರ್ಕಾರದ ಇಲಾಖೆಗಳೇ ಸುಮಾರು ₹97 ಕೋಟಿ ಬಾಕಿ ಉಳಿಸಿಕೊಂಡಿವೆ. ಒಟ್ಟು ಬಾಕಿ ಮೊತ್ತದಲ್ಲಿ ₹104 ಕೋಟಿ ನೀರಿನ ಶುಲ್ಕವಾದರೆ, ₹46 ಕೋಟಿ ಬಡ್ಡಿ.

ಬಾಕಿ ಉಳಿಸಿಕೊಂಡಿರುವಲ್ಲಿ ಪೊಲೀಸ್ ಇಲಾಖೆ, ಕೇಂದ್ರದ ರೈಲ್ವೆ ಇಲಾಖೆ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ)ಯ ಈಜು ಕೊಳಗಳದ್ದು ಹೆಚ್ಚಿನ ಪಾಲಿದೆ.

ಕೇಂದ್ರ, ರಾಜ್ಯ ಸರ್ಕಾರದ ಇಲಾಖೆಗಳು, ಬಿಬಿಎಂಪಿ, ರಕ್ಷಣಾ ಇಲಾಖೆ, ಶಾಸನಬದ್ಧ ಸಂಸ್ಥೆಗಳ ಸುಮಾರು 40 ಇಲಾಖೆಗಳು ₹50 ಲಕ್ಷಕ್ಕಿಂತ ಹೆಚ್ಚು ಬಿಲ್ ಬಾಕಿ ಉಳಿಸಿಕೊಂಡಿವೆ. ಶಿಕ್ಷಣ ಇಲಾಖೆ ಸುಮಾರು ₹10 ಕೋಟಿ, ಆರೋಗ್ಯ ಇಲಾಖೆ ಸುಮಾರು ₹3 ಕೋಟಿಯಷ್ಟು ಶುಲ್ಕವನ್ನು ಬಾಕಿ ಉಳಿಸಿಕೊಂಡಿವೆ ಎಂದು ಜಲಮಂಡಳಿ ತಿಳಿಸಿದೆ.

ಜಲಮಂಡಳಿ ಸರ್ಕಾರದ ಆರ್ಥಿಕ ನೆರವಿಲ್ಲದೇ ನಿರ್ವಹಣೆ ಮಾಡುತ್ತಿದೆ. ನೀರು ಮತ್ತು ಒಳಚರಂಡಿ ಶುಲ್ಕಗಳೇ ಮಂಡಳಿಗೆ ವರಮಾನದ ಮೂಲಗಳು. ಸರ್ಕಾರಿ ಇಲಾಖೆಗಳೇ ಕೋಟ್ಯಂತರ ಶುಲ್ಕ ಬಾಕಿ ಉಳಿಸಿಕೊಂಡಿರುವುದು ಮಂಡಳಿಗೆ ದೊಡ್ಡ ತಲೆನೋವಾಗಿದೆ.

ವಿವಿಧ ಸರ್ಕಾರಿ ಇಲಾಖೆಗಳಿಂದ ಜಲಮಂಡಳಿ ವಾರ್ಷಿಕವಾಗಿ ₹1200 ಕೋಟಿಯಿಂದ ₹1300 ಕೋಟಿ ಆದಾಯಗಳಿಸುತ್ತಿದೆ. ಮಂಡಳಿಗೆ ಪ್ರತಿ ತಿಂಗಳು ವಿವಿಧ ನಿರ್ವಹಣಾ ವೆಚ್ಚಗಳಿಗಾಗಿ ಸುಮಾರು ₹75 ಕೋಟಿ ಬೇಕಾಗುತ್ತದೆ. ಈಗ ಆದಾಯ ನೀಡುತ್ತಿದ್ದ ಇಲಾಖೆಗಳೇ ಕೋಟಿ ಮೊತ್ತ ಶುಲ್ಕ ಬಾಕಿ ಉಳಿಸಿಕೊಂಡಿರುವುದು, ಮಂಡಳಿಗೆ ಹೊರೆಯಾಗಿದೆ.

ಜಲಮಂಡಳಿ 10.37 ಲಕ್ಷ ನೀರಿನ ಸಂಪರ್ಕಗಳನ್ನು ಹೊಂದಿದೆ. ಇದರಲ್ಲಿ, 8.55 ಲಕ್ಷ ಗೃಹಸಂಪರ್ಕ ಮತ್ತು 1.82 ಲಕ್ಷ ವಾಣಿಜ್ಯ, ಕೈಗಾರಿಕೆ ಮತ್ತು ಇತರೆ ಸಂಪರ್ಕಗಳಾಗಿವೆ.

ಜಲಮಂಡಳಿಯ ಆರ್ಥಿಕ ಸ್ಥಿತಿ ಸುಧಾರಣೆಗಾಗಿ ನೀರಿನ ದರ ಏರಿಕೆ ಅನಿವಾರ್ಯ ಎಂದು ಉಪ ಮುಖ್ಯಮಂತ್ರಿ ಇತ್ತೀಚೆಗೆ ಹೇಳಿದ್ದರು. ಜಲಮಂಡಳಿ ಅಧ್ಯಕ್ಷರು, 'ದರ ಏರಿಕೆ ಅನಿವಾರ್ಯ. ಈ ಕುರಿತು ಸಲಹೆ ನೀಡಿ, ದರ ಏರಿಕೆಗೆ ಸಹಕರಿಸಬೇಕು' ಎಂದು ನಗರ ಭಾಗದ ಜನಪ್ರತಿನಿಧಿಗಳಿಗೆ ಪತ್ರ ಬರೆದು ಮನವಿ ಮಾಡಿದ್ದರು.

ಶುಲ್ಕ ಬಾಕಿ ಉಳಿಸಿಕೊಂಡಿರುವ ಇಲಾಖೆಗಳಿಗೆ ಹಲವು ಬಾರಿ ನೋಟಿಸ್ ನೀಡಲಾಗಿದೆ. ಈವರೆಗೂ ಶುಲ್ಕ ಪಾವತಿಸಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಾಕಿ ಶುಲ್ಕದ ವಿವರ (ಕೋಟಿಗಳಲ್ಲಿ)

ವರ್ಗ	ಬಾಕಿ	ಬಡ್ಡಿ	ಒಟ್ಟು ಮೊತ್ತ
ಬಿಬಿಎಂಪಿ	4.82	10.76	15.58
ಕೇಂದ್ರ ಸರ್ಕಾರ	19.40	3.85	23.26
ರಾಜ್ಯ ಸರ್ಕಾರ	46.33	27.41	73.74
ರಕ್ಷಣಾ ಇಲಾಖೆ	27.94	2.35	30.29
ಶಾಸನಬದ್ಧ ಸಂಸ್ಥೆಗಳು	5.56	2.23	7.80
ಒಟ್ಟು	104.05	46.62	150.76

ಹೆಚ್ಚು ಬಾಕಿ ಉಳಿಸಿಕೊಂಡಿರುವ ಇಲಾಖೆಗಳು

ರಾಜ್ಯ ಸರ್ಕಾರ	
ಪೊಲೀಸ್ ಇಲಾಖೆ	₹36.68 ಕೋಟಿ
ಶಿಕ್ಷಣ ಇಲಾಖೆ	₹10.74 ಕೋಟಿ
ಆರೋಗ್ಯ ಇಲಾಖೆ	₹3.7 ಕೋಟಿ
ಬಿಬಿಎಂಪಿ	
ಈಜು ಕೊಳಗಳು	₹3.70 ಕೋಟಿ
ಕೇಂದ್ರ ಸರ್ಕಾರ	
ರೈಲ್ವೆ ಇಲಾಖೆ	₹19.03 ಕೋಟಿ

'ಹಣಕಾಸು ಇಲಾಖೆಗೆ ಪತ್ರ'

'ನೀರಿನ ಶುಲ್ಕ ಬಾಕಿ ಇರುವ ಇಲಾಖೆಗಳಿಗೆ ನೋಟಿಸ್ ಕೊಟ್ಟಿದ್ದು, ಪತ್ರಗಳನ್ನೂ ಬರೆದಿದ್ದೇವೆ. ಹಣಕಾಸು ಇಲಾಖೆಗೆ ಪತ್ರ ಬರೆದು, ಇಲಾಖೆಗಳ ಅನುದಾನದಲ್ಲಿ ನೀರಿನ ಶುಲ್ಕ ಕಡಿತಗೊಳಿಸಿ ಮಂಡಳಿಗೆ ವರ್ಗಾಯಿಸಲು ಕೋರಿದ್ದೇವೆ. ಹಣಕಾಸು ಇಲಾಖೆಯ ಉತ್ತರದ ನಿರೀಕ್ಷೆಯಲ್ಲಿದ್ದೇವೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

'ಕನ್ನಡ–ತೆಲುಗು ಭ್ರಾತೃತ್ವದ ಭಾಷೆಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಮತ್ತು ತೆಲುಗು ಭಾಷೆಗಳು ಸ್ನೇಹ, ಸೌಹಾರ್ದ, ಸಾಮರಸ್ಯ ಸಾಧಿಸಿವೆ. ಎರಡು ಭಾಷೆಗಳು ಕೊಡು,ಕೊಳ್ಳುವಿಕೆಗಳ ಮೂಲಕ ಪರಸ್ಪರ ವಿಸ್ತಾರವಾಗಿ ಬೆಳೆದು ನಿಂತಿವೆ' ಎಂದು ಬೆಂಗಳೂರು ವಿಶ್ವವಿದ್ಯಾಲಯ ಸಿಂಡಿಕೇಟ್ ಸದಸ್ಯೆ ಕೆ.ಶರೀಫಾ ಅಭಿಪ್ರಾಯಪಟ್ಟರು.

ಬೆಂಗಳೂರು ವಿಶ್ವವಿದ್ಯಾಲಯದ ತೆಲುಗು ವಿಭಾಗದ ಸುವರ್ಣ ಮಹೋತ್ಸವ ಹಿನ್ನೆಲೆ ಆಯೋಜಿಸಿದ್ದ 'ತೆಲುಗು, ಕನ್ನಡ ಜಾನಪದ - ಗಿರಿಜನ ಸಾಹಿತ್ಯಮ್ - ತುಲನಾತ್ಮಕ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

'ಕನ್ನಡದ ಆದಿಕವಿ ಪಂಪ ತೆಲುಗಿನ ಮೂಲದವರು. ತೆಲುಗಿನ ಶ್ರೇಷ್ಠ ಕವಿ ನನ್ನಯ್ಯ ಭಟ್ಟ ಕರ್ನಾಟಕದವರು. ಪೊನ್ನ, ಸೋಮನಾಥ, ಪಾಲ್ಕುರುಕಿ ಸೋಮನಾಥ ಕನ್ನಡ ತೆಲುಗಿನ ಭಾಷಾ, ಸಾಂಸ್ಕೃತಿಕ ವಿನಿಮಯದ ರಾಯಭಾರಿಗಳಾಗಿದ್ದಾರೆ' ಎಂದು ವಿಶ್ಲೇಷಿಸಿದರು.

'ಕನ್ನಡ ಮತ್ತು ತೆಲುಗಿನ ಭಾಷಾ ಇತಿಹಾಸ, ಜಾನಪದ ಶೈಲಿ, ಪದ್ಧತಿ, ವಿಧಾನಗಳು, ನಂಬಿಕೆ, ಆಚರಣೆಗಳು ಪರಸ್ಪರ ಕೊಡು ಕೊಳ್ಳುವಿಕೆಯನ್ನು ಸಾಧಿಸಿವೆ' ಎಂದು ಎರಡು ಭಾಷೆಗಳ ಪ್ರಾಮುಖ್ಯದ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣ ಸಂಸ್ಥೆಯ ಸಂಸ್ಥಾಪಕ ಎಂ. ರುಕ್ಮಾಂಗರಾದ ನಾಯ್ಡು ಮತ್ತು ವಿ. ನಾರಾಯಣ ರೆಡ್ಡಿ ಅವರನ್ನು ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿನ ಸಾಧನೆ ಗುರುತಿಸಿ ಸನ್ಮಾನಿಸಲಾಯಿತು.

'ಬ್ರಿಗೇಡ್' ಜಗಮಗ...

ಕ್ರಿಸ್‌ಮಸ್ ಮತ್ತು ಹೊಸವರ್ಷಾಚರಣೆ ಪ್ರಯುಕ್ತ ಬೆಂಗಳೂರಿನ ಬ್ರಿಗೇಡ್ ರಸ್ತೆಯು ವಿಶೇಷ ವಿದ್ಯುತ್ ಅಲಂಕಾರದಿಂದ ಕಂಗೊಳಿಸುತ್ತಿದ್ದು, ಭಾನುವಾರ ಜನಜಂಗುಳಿ, ವಾಹನದಟ್ಟಣೆಯ ನಡುವೆ ಕಣ್ಮನ ಸೆಳೆಯಿತು
ಪ್ರಜಾವಾಣಿ ಚಿತ್ರ: ರಂಜು ಪಿ.

'ಸೀಕ್ರೆಟ್ ಸಾಂತ'ಕ್ಕೆ ತಡೆ: ಆಯೋಜಕರಿಗೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಉದ್ಯಾನದಲ್ಲಿ 20 ಜನರನ್ನು ಮೀರಿದ ಯಾವುದೇ ಸಭೆಗೆ ತೋಟಗಾರಿಕಾ ಇಲಾಖೆಯ ಪೂರ್ವಾನುಮತಿ ಅಗತ್ಯವಿದೆ ಎಂದು ಕಬ್ಬನ್ ಪಾರ್ಕ್ ಆಡಳಿತ ಮಂಡಳಿ ಹೇಳಿದೆ.

ಡಿಸೆಂಬರ್ 21ರಂದು ಕಬ್ಬನ್ ರೀಡ್ಸ್ ಎಂಬ ಸಂಸ್ಥೆಯು ಕಬ್ಬನ್ ಪಾರ್ಕ್‌ನಲ್ಲಿ 'ಸೀಕ್ರೆಟ್ ಸಾಂತ' ಚಟುವಟಿಕೆಗಾಗಿ 500ಕ್ಕೂ ಹೆಚ್ಚು ಜನರನ್ನು ಸೇರಿಸಿತ್ತು. ಸಾಕಷ್ಟು ಉಡುಗೊರೆ ಪ್ಯಾಕ್‌ಗಳನ್ನೂ ಕೂಡ ಪಾರ್ಕ್‌ ನ ಒಳಗೆ ತರಲಾಗಿತ್ತು. ಮಾರ್ಗಸೂಚಿಯನ್ನು ಸ್ಪಷ್ಟವಾಗಿ ಉಲ್ಲಂಘಿಸುವ ಕಾರ್ಯಕ್ರಮ ಇದಾಗಿತ್ತು. ತಕ್ಷಣವೇ ಸಂಘಟಕರಿಗೆ ತಿಳಿಸಿ, ಕಾರ್ಯಕ್ರಮ ಸ್ಥಗಿತಗೊಳಿಸಿ, ಎಚ್ಚರಿಕೆ ನೀಡಲಾಯಿತು ಎಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ಕಬ್ಬನ್ ಉದ್ಯಾನದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲು ₹30,000 ಶುಲ್ಕ ಹಾಗೂ ಮುಂಗಡವಾಗಿ ₹20,000 ಪಾವತಿಸಬೇಕು. ಉದ್ಯಾನಕ್ಕೆ ಬರುವ ವಾಯುವಿಹಾರಿಗಳಿಗೆ ಅಡಚಣೆಯಾಗದಂತೆ, ಇಲಾಖೆಯ ಮಾರ್ಗಸೂಚಿಗಳ ಅನ್ವಯ ಕಾರ್ಯಕ್ರಮಗಳನ್ನು ರೂಪಿಸಬೇಕು' ಎಂದು ತೋಟಗಾರಿಕೆ ಇಲಾಖೆ (ಕಬ್ಬನ್ ಉದ್ಯಾನ) ಉಪನಿರ್ದೇಶಕಿ ಕುಸುಮಾ 'ಪ್ರಜಾವಾಣಿ'ಗೆ ತಿಳಿಸಿದರು.

'ಉದ್ಯಾನದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಯಾವುದೇ ರೀತಿಯ ಅನುಮತಿ ಪಡೆದುಕೊಂಡಿರಲಿಲ್ಲ' ಎಂದು ತಿಳಿಸಿದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

'ಕಸ ಸಂಗ್ರಹಿಸುವ ವಾಹನ ನಿಲ್ಲಿಸುತ್ತಿಲ್ಲ'

ಆರ್.ಆರ್. ನಗರ ವಿಧಾನಸಭೆ ವ್ಯಾಪ್ತಿಯಲ್ಲಿರುವ ಹೊಸಕೆರೆಹಳ್ಳಿಯ ಸಪ್ತಗಿರಿ ಲೇಔಟ್‌ನಲ್ಲಿ ಹಸಿ ಕಸದ ವಿಲೇವಾರಿ ದೊಡ್ಡ ಸಮಸ್ಯೆಯಾಗಿದೆ. ಈ ಲೇಔಟ್‌ನಲ್ಲಿ ಒಂದನೇ ಕ್ರಾಸ್‌ಗೆ ಹೊಂದಿಕೊಂಡಿರುವ ಮುಖ್ಯ ರಸ್ತೆಗಳು ಇಳಿಜಾರಿನಿಂದ ಕೂಡಿವೆ. ಎರಡು ದಿನಗಳಿಗೊಮ್ಮೆ ಬರುವ ಹಸಿ ಕಸ ಸಂಗ್ರಹದ ವಾಹನವು ವೇಗವಾಗಿ ತೆರಳುತ್ತಿದೆ. ಬೆಳಿಗ್ಗೆ 6.30ರಿಂದ 6.45ರೊಳಗೆ ಬರುವ ಈ ವಾಹನ, ಮನೆಗಳ ಬಳಿ ನಿಲ್ಲುತ್ತಿಲ್ಲ. ಇದರಿಂದಾಗಿ ಕಸ ಹಿಡಿದು ಮನೆಯಿಂದ ಹೊರ ಬರುವಷ್ಟರಲ್ಲಿಯೇ ವಾಹನ ತೆರಳುತ್ತಿದೆ. ಪರಿಣಾಮ, ಕಸದ ವಿಲೇವಾರಿ ಸಮಸ್ಯೆಯಾಗುತ್ತಿದೆ. ಇದರಿಂದಾಗಿ ಕೆಲವರು ಲೇಔಟ್‌ನ ಖಾಲಿ ನಿವೇಶಗಳಲ್ಲಿ ಕಸ ಎಸೆಯುತ್ತಿದ್ದಾರೆ. ಪ್ರತಿ ರಸ್ತೆಯಲ್ಲಿಯೂ ನಿರ್ದಿಷ್ಟ ಸಮಯ ವಾಹನ ನಿಂತಲ್ಲಿ ಕಸ ವಿಲೇವಾರಿ ಸಾಧ್ಯವಾಗುತ್ತದೆ. ಇಲ್ಲವಾದಲ್ಲಿ ಕಸದ ಸಮಸ್ಯೆ ಉಲ್ಬಣಿಸುವ ಸಂಭವವಿದೆ. ಏಳು ಗಂಟೆಯ ಬಳಿಕ ವಾಹನ ಬಂದಲ್ಲಿ ಸಹಕಾರಿಯಾಗಲಿದೆ. ಬಿಬಿಎಂಪಿ ಅಧಿಕಾರಿಗಳು ಈ ಬಗ್ಗೆ ಕ್ರಮವಹಿಸಬೇಕು.

ಶಾರದಾ, ಸಪ್ತಗಿರಿ ಲೇಔಟ್

ಕೆಂಗೇರಿ ಮೆಟ್ರೊ ನಿಲ್ದಾಣದಿಂದ ದೊಡ್ಡಬೆಲೆಗೆ ಸಂಪರ್ಕ ಕಲ್ಪಿಸುವ ರಸ್ತೆ ದುಸ್ಥಿತಿ

'ಕೆಂಗೇರಿ: ರಸ್ತೆ ದುರಸ್ತಿಗೊಳಿಸಿ'

ಕೆಂಗೇರಿ ಮೆಟ್ರೊ ನಿಲ್ದಾಣದಿಂದ ದೊಡ್ಡಬೆಲೆ ಕಡೆಗೆ ಸಂಪರ್ಕಿಸುವ ಒಂದು ಕಿ.ಮೀ ಉದ್ದದ ರಸ್ತೆಯಲ್ಲಿ ಗುಂಡಿಗಳು ಬಿದ್ದಿದ್ದು, ಸಂಪೂರ್ಣ ಹಾಳಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಗುಂಡಿಗಳಿರುವ ಕಾರಣ ಇಲ್ಲಿ ಸಂಚಾರ ದಟ್ಟಣೆ ಆಗುತ್ತಿದೆ. ಇದರಿಂದ, ಕಚೇರಿಗೆ, ಶಾಲಾ–ಕಾಲೇಜಿಗೆ ತೆರಳಲು ತಡವಾಗುತ್ತಿದೆ. ಈ ರಸ್ತೆಯಲ್ಲಿ ಈಗಾಗಲೇ ಹಲವು ಅಪಘಾತಗಳು ಸಂಭವಿಸಿವೆ. ಈ ಬಗ್ಗೆ ಬಿಬಿಎಂಪಿ ಹಾಗೂ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗುತ್ತಿಲ್ಲ. ಕೂಡಲೇ ಇಲ್ಲಿನ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಪ್ರಗತಿ ವೆಂಕಟೇಶ ಬಾಬು, ಕೆಂಗೇರಿ ನಾಗರಿಕ ಹಕ್ಕು ಹಿತ ರಕ್ಷಣಾ ಸಂಸ್ಥೆ ಸಂಚಾಲಕ

ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಸುರಿದಿರುವ ಕಸದ ರಾಶಿ

'ರಸ್ತೆಯಲ್ಲಿ ಕಸದ ರಾಶಿ'

ಬನ್ನೇರುಘಟ್ಟ ಮುಖ್ಯರಸ್ತೆಯಿಂದ ಈಸ್ಟ್ ಎಂಡ್ ರಸ್ತೆಗೆ ಸಂಪರ್ಕಿಸುವ ರಸ್ತೆಯಲ್ಲಿ ಕಸದ ರಾಶಿ ಹಾಕಲಾಗಿದೆ. ಸ್ಥಳೀಯ ನಿವಾಸಿಗಳು ತಮ್ಮ ಮನೆಗಳಲ್ಲಿ ಉತ್ಪತ್ತಿಯಾಗುವ ಕಸವನ್ನು ಪ್ಲಾಸ್ಟಿಕ್ ಕವರ್‌ಗಳಲ್ಲಿ ತುಂಬಿಕೊಂಡು ಬಂದು ಈ ರಸ್ತೆಯಲ್ಲಿ ಎಸೆದು ಹೋಗುತ್ತಿದ್ದಾರೆ. ಇದು ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಹಾಕಿರುವ ಕಸದ ರಾಶಿಯನ್ನು ಕೂಡಲೇ ವಿಲೇವಾರಿ ಮಾಡಬೇಕು. ರಸ್ತೆಯಲ್ಲಿ ಕಸ ಹಾಕದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು.

ವಿ.ಎಸ್.ಕುಮಾರ್, ಬನ್ನೇರುಘಟ್ಟ

ಚಿಕ್ಕಬಾಣಾವರ ರೈಲ್ವೆ ಅಂಡರ್‌ಪಾಸ್

'ಸೋರುತಿಹುದು ರೈಲ್ವೆ ಅಂಡರ್‌ಪಾಸ್'

ಚಿಕ್ಕಬಾಣಾವರ ಬಸ್ ನಿಲ್ದಾಣದ ಬಳಿ ಇರುವ ರೈಲ್ವೆ ಅಂಡರ್‌ಪಾಸ್ ಸೋರುತ್ತಿದ್ದು, ವಾಹನ ಸಂಚಾರಕ್ಕೆ ಅನನಕೂಲವಾಗಿದೆ. ಈ ಅಂಡರ್‌ಪಾಸ್ ಮೂಲಕವೇ ಹೆಸರಘಟ್ಟ ಮುಖ್ಯ ರಸ್ತೆ ಹಾದು ಹೋಗಿದ್ದು, ಪ್ರತಿನಿತ್ಯ ಸಂಚಾರದಟ್ಟಣೆ ಇರುತ್ತದೆ. ಅಂಡರ್‌ಪಾಸ್‌ನ ಚಾವಣಿಯಿಂದ ತ್ಯಾಜ್ಯ ನೀರು ಸೋರುತ್ತಿದೆ. ಇದು ದ್ವಿಚಕ್ರ ವಾಹನ ಸವಾರರು ಹಾಗೂ ಪಾದಚಾರಿಗಳ ಮೇಲೆ ಬೀಳುತ್ತಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ದುರಸ್ತಿಗೊಳಿಸಿ ಸುರಕ್ಷತೆ ಕ್ರಮಗಳನ್ನು ಕೈಗೊಳ್ಳಬೇಕು.

ಮಹಮ್ಮದ್ ರಫಿ, ಚಿಕ್ಕಬಾಣಾವರ

ಮದ್ಯದ ಟೆಟ್ರಾ ಪ್ಯಾಕ್‌ಗಳ ರಾಶಿ • ನರಸೀಪುರ ನಾಗರಿಕರ ಆಕ್ರೋಶ

ಕೆರೆ ಅಂಗಳದಲ್ಲಿ ಕೋಳಿ ತ್ಯಾಜ್ಯ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ರಾಶಿ ಗಟ್ಟಲೆ ಬಿದ್ದಿರುವ ಮದ್ಯದ ಟೆಟ್ರಾ ಪ್ಯಾಕ್ ಹಾಗೂ ಪ್ಲಾಸ್ಟಿಕ್ ಲೋಟಗಳು. ಅಲ್ಲಲ್ಲಿ ಬಿದ್ದಿರುವ ಕೋಳಿ ತ್ಯಾಜ್ಯ, ಅಂಗಡಿಗಳ ತ್ಯಾಜ್ಯ, ಕ್ಷೌರದ ಅಂಗಡಿಗಳ ತ್ಯಾಜ್ಯ. ಕೊಳೆತು ದುರ್ವಾಸನೆ ಬೀರುವ ನೀರು...

ನೆಲಮಂಗಲ ತಾಲ್ಲೂಕಿನ ನರಸೀಪುರ ಕೆರೆ ಅಂಗಳದ ದುಸ್ಥಿತಿ ಇದು. ಕೆರೆ ಅವ್ಯವಸ್ಥೆ ಕುರಿತು ಸ್ಥಳೀಯ ಪಂಚಾಯಿತಿಗೆ ಹಲವು ಬಾರಿ ಸ್ಥಳೀಯರು ಮೌಖಿಕವಾಗಿ ತಿಳಿಸಿದ್ದರೂ ಯಾವುದೇ ಕ್ರಮವಹಿಸಿಲ್ಲ.

ಗ್ರಾಮ ಪಂಚಾಯಿತಿ ಕಚೇರಿಯ ಹಿಂಭಾಗದಲ್ಲಿ, ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಬಲಭಾಗದಲ್ಲಿ, ಡೇರಿ, ಗ್ರಂಥಾಲಯ ಹಾಗೂ ಅಂಚೆ ಕಚೇರಿ ಬಳಿ, ಜೆಜೆಎಂ ಓವರ್ ಹೆಡ್ ಟ್ಯಾಂಕ್ ಹತ್ತಿರದಲ್ಲೇ ತ್ಯಾಜ್ಯ ತುಂಬಿ ಹೋಗಿದೆ. 'ಕೆರೆಯ ಏರಿ ಮೇಲೆ ನರಸೀಪುರ, ದೇವರಹಟ್ಟಿ ಪಾಳ್ಯ, ಬೆಟ್ಟದ ಹೊಸಹಳ್ಳಿ ಹಾಗೂ ಸಾಲಹಟ್ಟಿ ಗ್ರಾಮಗಳ ಜನರು ಶಾಲಾ ವಿದ್ಯಾರ್ಥಿಗಳು, ಡೇರಿಗೆ ಹಾಲು ತರುವ ರೈತರು ಮೂಗು ಮುಚ್ಚಿಕೊಂಡು



ಕೊಳೆತಿರುವ ನೀರು

ಕೆರೆ ಅಂಗಳದಲ್ಲಿ ತ್ಯಾಜ್ಯ ಸುರಿಯಲಾಗಿದೆ

ಓಡಾಡಬೇಕಾದ ಸ್ಥಿತಿ ಇದೆ' ಎಂದು ದೊಡ್ಡರಾಜು ದೂರಿದರು.

48.13 ಎಕರೆಯಷ್ಟು ವಿಶಾಲವಾದ ಕೆರೆ ಅರಣ್ಯ ಇಲಾಖೆಗೆ ಸೇರಿದ್ದರೂ ಸ್ಥಳೀಯ ಪಂಚಾಯಿತಿ ಅದರ ನಿರ್ವಹಣೆ ಮಾಡುತ್ತಾ ಬಂದಿದೆ. ಕೆರೆ ಅಂಗಳದಲ್ಲಿ ಮುಳ್ಳಿನ ಗಿಡಗಳು ಬೆಳೆದಿವೆ. ಅಡ್ಡಾದಿಡ್ಡಿಯಾಗಿ ಮಣ್ಣು ತೆಗೆದಿರುವುದರಿಂದ ಗುಂಡಿಗಳು ಬಿದ್ದಿವೆ. ಕೆರೆಗೆ ನೀರು ಹರಿಸಬೇಕಿದ್ದ ರಾಜಕಾಲುವೆಗಳು ಮಾಯವಾಗಿವೆ. ಒತ್ತುವರಿ ಹೆಚ್ಚುತ್ತಿದ್ದು, ದಿನದಿಂದ ದಿನಕ್ಕೆ ಕೆರೆ ಕಿರಿದಾಗುತ್ತಿದೆ ಎಂದು ಹುಚ್ಚಣ್ಣ ಬೇಸರ ವ್ಯಕ್ತಪಡಿಸಿದರು.

'ಪಂಚಾಯಿತಿ ಕಚೇರಿ, ಡೇರಿ, ಆಸ್ಪತ್ರೆಯ ಸನಿಹದಲ್ಲಿಯೇ ಕೆರೆಗೆ ತ್ಯಾಜ್ಯ ಹಾಕಿ ಯಾರೋ ಬೆಂಕಿ ಇಡುತ್ತಿದ್ದಾರೆ. ಸಾಲದು ಎಂಬಂತೆ ಇಲ್ಲೇ ಕೆಲವರು ಶೌಚ ಕೂಡ ಮಾಡುತ್ತಿದ್ದಾರೆ. ಪಂಚಾಯಿತಿಯಾಗಲಿ, ಅರಣ್ಯ ಇಲಾಖೆಯಾಗಲಿ ಕ್ರಮ ಕೈಗೊಳ್ಳುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ, ಇನ್ನೊಂದು ಕಡೆ ಕೆರೆಯೂ ಹಾಳಾಗುತ್ತಿದೆ' ಎಂದು ವಕೀಲ ಮಾರುತಿ ತಿಳಿಸಿದರು.

ಸದನದ ಘನತೆ ಕಾಪಾಡಿ: ದೇಶಪಾಂಡೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಎಂಬತ್ತರ ದಶಕದಲ್ಲಿ ಶೋಷಿತ ಸಮುದಾಯದ ವ್ಯಕ್ತಿಯೊಬ್ಬರು ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೃಹತ್ ಆಲದ ಮರದಂತೆ ಬೆಳೆಸಿರುವುದು ಸಾಮಾನ್ಯ ಸಂಗತಿಯಲ್ಲ ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಹೇಳಿದರು

ಅಂಬೇಡ್ಕರ್ ತಾಂತ್ರಿಕ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಸಂಸ್ಥಾಪಕ ಕಾರ್ಯದರ್ಶಿ ಎಂ.ಎಚ್ ಜೆ.ಪಿ. ನಾರಾಯಣ್ ಅವರ 98ನೇ ಜನ್ಮ ದಿನಾಚರಣೆ, ಅಭಿನಂದನಾ ಗ್ರಂಥ ಬಿಡುಗಡೆ ಹಾಗೂ ಹಳೇ ವಿದ್ಯಾರ್ಥಿಗಳ ಸಮಾವೇಶ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಲೋಕಸಭೆ ಹಾಗೂ ರಾಜ್ಯ ವಿಧಾನ ಪರಿಷತ್ತಿನಲ್ಲಿ ಇತ್ತೀಚೆಗೆ ನಡೆದ ಘಟನೆಗಳು ಜನಪ್ರತಿನಿಧಿಗಳಿಗೆ ಶೋಭೆ ತರುವುದಿಲ್ಲ. ಸದನಗಳ ಘನತೆಯನ್ನು ಸದಸ್ಯರು ಕಾಪಾಡಬೇಕು' ಎಂದರು.



ಎಂ.ಎಚ್.ಜಯಪ್ರಕಾಶ್ ನಾರಾಯಣ್ ಅವರ ಕುರಿತ 'ಹಚ್ಚಿಟ್ಟ ಹಣತೆ' ಅಭಿನಂದನಾ ಗ್ರಂಥವನ್ನು ಶಾಸಕ ಆರ್.ವಿ.ದೇಶಪಾಂಡೆ ಲೋಕಾರ್ಪಣೆಗೊಳಿಸಿದರು. ಪಿವಿಪಿ ಟ್ರಸ್ಟ್ ಅಧ್ಯಕ್ಷ ಎಸ್.ಮರಿಸ್ವಾಮಿ, ಕಾರ್ಯದರ್ಶಿ ಶಿವಮಲ್ಲು, ಖಜಾಂಚಿ ಪ್ರೊ.ಎಂ.ಮಹದೇವ್, ಬಿ.ಎನ್.ಉಮೇಶ್, ತಿಪ್ಪೇಸ್ವಾಮಿ, ಸಿದ್ದರಾಜು ಮತ್ತಿತರರು ಇದ್ದರು

'ವಿಶೇಷ ಆರ್ಥಿಕ ವಲಯ ರೂಪಿಸಿದ ಎಸ್. ಎಂ.ಕೃಷ್ಣ, ಕೈಗಾರಿಕಾ ನೀತಿ ಜಾರಿಗೆ ತಂದ ಜೆ.ಎಚ್ ಪಟೇಲ್ ಅಂಥವರಿಂದ ಇಂದು ಕೈಗಾರಿಕಾ ವಲಯದಲ್ಲಿ ಕೋಟಿಗೂ ಹೆಚ್ಚು ಉದ್ಯೋಗಾವಕಾಶ ಸೃಷ್ಟಿಯಾಗಿದೆ' ಎಂದು ಪಿವಿಪಿ ಖಜಾಂಚಿ ಪ್ರೊ.ಎಂ. ಮಹದೇವ್ ಸ್ಮರಿಸಿದರು.

'ಸಮಾಜದ ಬೆಳವಣಿಗೆಗೆ ಕಾರಣೀಭೂತರಾದ ವ್ಯಕ್ತಿಗಳ ಇತಿಹಾಸವನ್ನು ದಾಖಲಿಸುವುದು ಅತ್ಯಂತ ಪ್ರಮುಖ ಕಾರ್ಯವಾಗಿದೆ' ಎಂದು ಪಿವಿಪಿ ಟ್ರಸ್ಟ್ ಅಧ್ಯಕ್ಷ ಎಸ್. ಮರಿಸ್ವಾಮಿ ಹೇಳಿದರು.

'ಸಮಸ್ಯೆಗಳ ಪರಿಹಾರಕ್ಕೆ ಕ್ರಮ'

ಬಂಡಿಕೊಡಿಗೇಹಳ್ಳಿ ಗ್ರಾಮಸಭೆ: ಸ್ವಚ್ಛತಾ ಸಿಬ್ಬಂದಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಬಂಡಿಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿಯಿಂದ ಆಯೋಜಿಸಿದ್ದ 2024-25ನೇ ಸಾಲಿನ ಮೊದಲನೇ ಸುತ್ತಿನ ಗ್ರಾಮಸಭೆಯನ್ನು ಪಂಚಾಯಿತಿ ಅಧ್ಯಕ್ಷೆ ಪವಿತ್ರ ಎನ್.ಸುಬ್ರಮಣಿ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಪಂಚಾಯಿತಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ಕುಡಿಯುವ ನೀರು, ಚರಂಡಿ, ಸ್ವಚ್ಛತೆ ಹಾಗೂ ಬೀದಿದೀಪದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಅಹವಾಲುಗಳು ಸಲ್ಲಿಕೆಯಾಗಿವೆ. ಅವುಗಳನ್ನು ಪರಿಶೀಲಿಸಿ, ಹಂತ-ಹಂತವಾಗಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪಿ.ಎ.ಪೂಣಚ್ಚ ಮಾತನಾಡಿ, ಎಲ್ಲ ಗ್ರಾಮಗಳಲ್ಲಿ ಈಗಾಗಲೆ ವಾರ್ಡ್ ಸಭೆಗಳನ್ನು ನಡೆಸಿ, ಸಾರ್ವಜನಿಕರಿಂದ ಬೇಡಿಕೆಗಳನ್ನು ಸ್ವೀಕರಿಸಿ, ಕಾಮಗಾರಿಗಳನ್ನು ನಿರ್ವಹಿಸಲು ನೀಲನಕ್ಷೆ ಸಿದ್ಧಪಡಿಸಲಾಗಿದೆ ಎಂದು ತಿಳಿಸಿದರು.

ಗ್ರಾಮಸಭೆಯಲ್ಲಿ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು

ವಿತರಣೆ: ಅರ್ಹ ಫಲಾನುಭವಿಗಳಿಗೆ ಹೊಲಿಗೆಯಂತ್ರ, ಶ್ರವಣಸಾಧನಗಳು, ಎಸ್.ಎಸ್.ಎಲ್.ಸಿ, ಪಿಯುಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನದ ಚೆಕ್ ವಿತರಿಸಲಾಯಿತು.

₹27 ಲಕ್ಷ ಮೌಲ್ಯದ ಚಿನ್ನದ ಕಿರೀಟ ದೇಣಿಗೆ

ತಿರುಪತಿ (ಪಿಟಿಐ): ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ವ್ಯಾಪ್ತಿಯಲ್ಲಿರುವ ತಾರಿಗೊಂಡದ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನಕ್ಕೆ ಭಾನುವಾರ ಚಿನ್ನದ ಕಿರೀಟವನ್ನು ದೇಣಿಗೆಯಾಗಿ ನೀಡಲಾಗಿದೆ.

ಈ ದೇವಾಲಯವು ತಿರುಪತಿಯಿಂದ 110 ಕಿ.ಮೀ ದೂರದಲ್ಲಿದೆ. ಚೆನ್ನೈ ಮೂಲದ ಭಕ್ತರಾದ ವಸಂತ ಲಕ್ಷ್ಮಿ, ಮಾಧವಿ ಮತ್ತು ಮನೋಹರ್ ಅವರು ಸುಮಾರು ₹27 ಲಕ್ಷ ಮೌಲ್ಯದ 340.930 ಗ್ರಾಂ ತೂಕದ ಚಿನ್ನದ ಕಿರೀಟವನ್ನು ದೇಣಿಗೆಯಾಗಿ ನೀಡಿದ್ದಾರೆ ಎಂದು ಟಿಟಿಡಿ ಪ್ರಕಟಣೆ ತಿಳಿಸಿದೆ.

'ಹವಾಮಾನ ಬದಲಾವಣೆ ಬಗ್ಗೆ ಜಾಗೃತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹವಾಮಾನ ಬದಲಾವಣೆಯಿಂದಾಗುವ ಪರಿಣಾಮಗಳ ಕುರಿತು ಜಿಲ್ಲಾ ಮಟ್ಟದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆಯ (ಇಎಂಪಿಆರ್‌ಐ) ಹವಾಮಾನ ಬದಲಾವಣೆ ವಿಭಾಗದ ಹಿರಿಯ ಸಮಾಲೋಚಕಿ ಸರಿತಾ ಹೇಳಿದರು.

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ ಸಹಯೋಗದೊಂದಿಗೆ ಜನಶಿಕ್ಷಣ ಟ್ರಸ್ಟ್ ಆಯೋಜಿಸಿದ್ದ 'ಪರಿಸರ ಅರಿವು' ಸಮಾವೇಶದಲ್ಲಿ 'ಕರ್ನಾಟಕ ಕೃಷಿಯ ಮೇಲೆ ಹವಾಮಾನ ಬದಲಾವಣೆ ಪರಿಣಾಮಗಳು' ವಿಷಯ ಕುರಿತು ಅವರು ಮಾತನಾಡಿದರು.

ಜಾಗತಿಕ ತಾಪಮಾನ ಏರಿಕೆಯಿಂದ ಬೆಳೆ ಇಳುವರಿಯ ಮೇಲೂ ಪರಿಣಾಮ ಬೀರುತ್ತಿದೆ ಜನವರಿಯಿಂದ ಆಕಾಶವಾಣಿಯಲ್ಲಿ 'ಹವಾಮಾನ ಮಿತ್ರ' ಕಾರ್ಯಕ್ರಮದ ಮೂಲಕ ಹವಾಮಾನ ಬದಲಾವಣೆ ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಗುವುದು ಎಂದರು.

ಸಮಾವೇಶದಲ್ಲಿ ಕೃಷಿ ವಿಜ್ಞಾನಿ ಜಿ.ಎನ್. ನಾಗರಾಜ್ ಹಾಗೂ ಐಎಸ್‌ಐ ಪ್ರಾಧ್ಯಾಪಕಿ ಮದುರಾ ಸ್ವಾಮಿನಾಥನ್ ಸಮಾಲೋಚನೆ ನಡೆಸಿದರು. ಸರಿತಾ, ಟಿ. ಮಹೇಶ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ರಕ್ಷಣಾ ಸಚಿವಾಲಯದ ಸಲಹೆಗಾರ ಸತೀಶ್ ರೆಡ್ಡಿ

₹21,000 ಕೋಟಿ ರಕ್ಷಣಾ ಸಾಮಗ್ರಿ ರಫ್ತು

ಪ್ರಜಾವಾಣಿ ವಾರ್ತೆ

ಆನೇಕಲ್: ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಭಾರತ ಸ್ವಾವಲಂಬಿಯಾಗುತ್ತಿದೆ. 2023ನೇ ಸಾಲಿನಲ್ಲಿ ₹21 ಸಾವಿರ ಕೋಟಿ ರಕ್ಷಣಾ ಉಪಕರಣಗಳನ್ನು ರಫ್ತು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ₹50 ಸಾವಿರ ಕೋಟಿ ಗುರಿ ಹೊಂದಲಾಗಿದೆ. ರಕ್ಷಣಾ ಕ್ಷೇತ್ರದಲ್ಲಿ ಭಾರತ ನಾಯಕನಾಗಬೇಕು ಎಂಬುದು ಗುರಿಯಾಗಿದೆ ಎಂದು ರಕ್ಷಣಾ ಸಚಿವಾಲಯದ ಸಲಹೆಗಾರ, ಡಿಆರ್‌ಡಿಓ ಆಡಳಿತ ಮಂಡಳಿ ಅಧ್ಯಕ್ಷ ಡಾ.ಜಿ.ಸತೀಶ್ ರೆಡ್ಡಿ ಹೇಳಿದರು.

ಅಲಯನ್ಸ್ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವದಲ್ಲಿ ಮಾತನಾಡಿ, ಸ್ಟಾರ್ಟ್ ಅಪ್‌ಗೆ ಇತ್ತೀದಿನ ದಿನಗಳಲ್ಲಿ ಭಾರಿ ಬೆಂಬಲ ವ್ಯಕ್ತವಾಗುತ್ತಿದೆ. ಹೊಸ ಹೊಸ ಸಂಶೋಧನೆಗಳು, ನವೀನ ಮಾರುಕಟ್ಟೆ ಗ್ರಾಹಕರನ್ನು ಸೆಳೆಯುತ್ತಿದೆ ಎಂದರು.

ಆನೇಕಲ್‌ನ ಅಲಯನ್ಸ್ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವವನ್ನು ಗೋವಾ ರಾಜ್ಯಪಾಲ ಎಸ್. ಶ್ರೀಧರನ್ ಪಿಳ್ಳೈ ಉದ್ಘಾಟಿಸಿದರು

ದೇಶದಲ್ಲಿ ₹4.38 ಕೋಟಿ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. 14 ಲಕ್ಷ ಮಂದಿ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಪದವಿ ಪಡೆಯುತ್ತಿದ್ದಾರೆ. ಪಿಎಚ್‌ಡಿಗಳ ಸಂಖ್ಯೆಯಲ್ಲಿ ಭಾರತ ಜಾಗತಿಕವಾಗಿ 3ನೇ ಸ್ಥಾನದಲ್ಲಿದೆ. ಐಐಟಿಗಳಲ್ಲಿ ಅಧ್ಯಯನ ನಡೆಸುವ ಶೇ.75ರಷ್ಟು ಮಂದಿ ವಿದೇಶಗಳಿಗೆ ತೆರಳುತ್ತಾರೆ. ವಿದೇಶಗಳಿಗೆ ತೆರಳುವ ಬದಲಿಗೆ ಭಾರತದ ಅಭಿವೃದ್ಧಿಗೆ ನಿಮ್ಮ ಶಕ್ತಿಯನ್ನು ಮೀಸಲಿಡುವ ಅವಶ್ಯಕತೆಯಿದೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಗೋವಾ ರಾಜ್ಯದ ರಾಜ್ಯಪಾಲ ಎಸ್.ಶ್ರೀಧರನ್ ಪಿಳ್ಳೈ, ವಿದ್ಯಾರ್ಥಿಗಳು ಪಡೆದ ಪದವಿ ಸಮಾಜದ ಅಭಿವೃದ್ಧಿಗೆ ಉಪಯೋಗವಾಗಬೇಕು. ಪದವೀಧರರು ಉಜ್ವಲ ಭವಿಷ್ಯದೊಂದಿಗೆ ಬಲಿಷ್ಠ ಭಾರತವನ್ನು ನಿರ್ಮಾಣ ಮಾಡಬೇಕು ಎಂದರು.

ಕರ್ನಾಟಕ ಐಟಿ ಬಿಟಿ ಕ್ಷೇತ್ರದಲ್ಲಿ ದೇಶದಲ್ಲಿಯೇ ಉನ್ನತ ಸಾಧನೆ ಮಾಡಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಘಟಿಕೋತ್ಸವದಲ್ಲಿ 1,145 ಮಂದಿ ವಿದ್ಯಾರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಸ್ವೀಕರಿಸಿದರು.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಶ್ವವಿದ್ಯಾಲಯ ಕುಲಪತಿ ಪ್ರೇಮಾನಂದ್ ಶೆಟ್ಟಿ, ಸಹ ಕುಲಪತಿ ಅಭಯ್ ಛೆಬ್ಬಿ, ಉಪಕುಲಪತಿ ಡಾ.ಪ್ರೇಸ್ಲಿ ಶಾನ್, ರಿಜಿಸ್ಟರ್ ಜನರಲ್ ಸುರೇಖಾ ಶೆಟ್ಟಿ, ರೆಜಿಸ್ಟರ್ ವಿಶ್ವನಾಥಯ್ಯ ಮಠಂ ಇದ್ದರು.

ಇದು ಕ್ರಿಮಿನಲ್ ಅಪರಾಧ: ಕಲಬುರಗಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

'ರವಿ ಬಯ್ಗುಳದ ಆಡಿಯೊ, ವಿಡಿಯೊ ಇವೆ'

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಕಲಬುರಗಿ: 'ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರಿಗೆ ಸಿ.ಟಿ. ರವಿ ಅವಾಚ್ಯ ಪದ ಬಳಸಿದ್ದಾರೆ ಎಂಬುದರ ಆಡಿಯೊ, ವಿಡಿಯೊ ಕ್ಲಿಪಿಂಗ್ ಇವೆ. ಅವರ ಆ ಪದವನ್ನು ಕೇಳಿಸಿಕೊಂಡ ಪರಿಷತ್‌ನ ಸದಸ್ಯರೂ ಇದ್ದಾರೆ. ಅವರು ಮಾತನಾಡಿದ್ದೂ ಸತ್ಯ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಭಾನುವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಸಚಿವೆ ಬಗ್ಗೆ ಸಿ.ಟಿ.ರವಿ ಬಳಸಿದ ಪದ ಅತ್ಯಂತ ಅನಾಗರಿಕವಾದದ್ದು. ಇದು ಕ್ರಿಮಿನಲ್ ಅಪರಾಧ. ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದವರು ಅಂತಹ ಶಬ್ದ ಬಳಸಿದ್ದು ಖಂಡನೀಯ. ಈಗಾಗಲೇ ತನಿಖೆ ನಡೆಯುತ್ತಿದೆ. ನ್ಯಾಯಾಂಗ ತನಿಖೆಗೆ ಏಕೆ ಕೇಳುತ್ತಿದ್ದಾರೆ' ಎಂದು ಪ್ರಶ್ನಿಸಿದರು.

ಅರ್ಧದಷ್ಟು ತೆರಿಗೆ ಪಾಲು ಬೇಕು: 'ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ. ಕರ್ನಾಟಕದಿಂದ ₹4.50 ಲಕ್ಷ ಕೋಟಿಯಷ್ಟು ತೆರಿಗೆ ಕೇಂದ್ರಕ್ಕೆ ಹೋಗುತ್ತಿದೆ. ವಾಪಸ್ ಕೊಡುತ್ತಿರುವುದು ಕೇವಲ ₹60 ಸಾವಿರ ಕೋಟಿ. ಇದರಲ್ಲಿ ಅನ್ಯಾಯವಾಗುತ್ತಿದೆ. ಒಟ್ಟಾರೆ ತೆರಿಗೆಯಲ್ಲಿ ಶೇ 50ರಷ್ಟು ವಾಪಸ್ ಕೊಡಬೇಕು ಎಂಬುದು ನಮ್ಮ ವಾದ' ಎಂದು ಹೇಳಿದರು.

ಚಿಕ್ಕಮಗಳೂರು ನಗರಕ್ಕೆ ಶನಿವಾರ ಮಧ್ಯರಾತ್ರಿ ಬಂದ ಸಿ.ಟಿ. ರವಿ ಅವರಿಗೆ ಕಾರ್ಯಕರ್ತರು ಭವ್ಯ ಸ್ವಾಗತ ಕೋರಿದರು

'ಬೆಳಗಾವಿ ಚಲೊ'ಗೆ ಚಿಂತನೆ: ರವಿ

ಚಿಕ್ಕಮಗಳೂರು: 'ರಾಜ್ಯ ಸರ್ಕಾರ ಹಮ್ಮುರಾಬಿ ಸಿದ್ಧಾಂತದ ಮೇಲೆ ನಡೆಯುತ್ತಿದೆ. ನನ್ನನ್ನು ಬಂಧಿಸಿ ಇಡೀರಾತ್ರಿ ಸುತ್ತಾಡಿಸಿದ ಕ್ರಮದ ವಿರುದ್ಧ ಹಕ್ಕುಚ್ಯುತಿ ಮಂಡಿಸುತ್ತೇನೆ. ಬೆಳಗಾವಿ ಚಲೊ ನಡೆಸುವ ಬಗ್ಗೆಯೂ ಆಲೋಚನೆ ನಡೆಯುತ್ತಿದೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು.

'ಮುಖ್ಯಮಂತ್ರಿ ಮತ್ತು ರಾಜ್ಯ ಸರ್ಕಾರಕ್ಕೆ ಸಂವಿಧಾನದ ಮೇಲೆ ನಂಬಿಕೆ ಇದ್ದಂತೆ ಕಾಣಿಸುತ್ತಿಲ್ಲ. ಕಬ್ಬಿನ ಗದ್ದೆ, ಜಲ್ಲಿ ಕ್ರಷರ್ ಬಳಿಗೆ ಪೊಲೀಸರು ಕರೆದೊಯ್ದು ಕೂರಿಸಿದ್ದರು. ಅವರಿಗೆ ಪ್ರತಿ ಅರ್ಧ ಗಂಟೆಗೊಮ್ಮೆ ಬರುತ್ತಿದ್ದ ನಿರ್ದೇಶನದಂತೆ ಅವರು ನಡೆದುಕೊಳ್ಳುತ್ತಿದ್ದರು. ಮಾಧ್ಯಮ ಪ್ರತಿನಿಧಿಗಳು ಬೆನ್ನು ಹತ್ತಿದ್ದರಿಂದ ಜೀವ ಉಳಿದಿದೆ. ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು' ಎಂದು ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದರು.

ವಿಧಾನಸೌಧದ ಕಾರಿಡಾರ್‌ನಲ್ಲಿ ನನ್ನ ಮೇಲೆ ದಾಳಿ ನಡೆಸಲು ಬಂದ ಆರೋಪಿಗಳನ್ನು ಬಂಧಿಸಬೇಕು. ಇಲ್ಲದಿದ್ದರೆ ಬೆಳಗಾವಿ ಚಲೊ ನಡೆಸುವ ಬಗ್ಗೆ ಪಕ್ಷ ಆಲೋಚನೆ ನಡೆಸುತ್ತಿದೆ. ಈ ಬಗ್ಗೆ ಕಾನೂನು ಹೋರಾಟ ನಡೆಸಲು ತೀರ್ಮಾನಿಸಿದ್ದು, ಜನತಾ ನ್ಯಾಯಾಲಯದ ಮುಂದೆಯೂ ಹೋಗುತ್ತೇವೆ' ಎಂದರು.

ಸಿ.ಟಿ.ರವಿ ಅವರನ್ನು ಪೊಲೀಸರು ತರಾತುರಿಯಲ್ಲಿ ಬಂಧನ ಮಾಡಿದ್ದಾರೆ. ಬಹುಶಃ ಅವರಿಗೆ ಅವರನ್ನು ನಕಲಿ ಎನ್‌ಕೌಂಟರ್ ಮಾಡುವ ಉದ್ದೇಶ ಇದ್ದಿತ್ತೇನೋ

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ರವಿ ಅವರನ್ನು ಫೇಕ್ ಎನ್‌ಕೌಂಟರ್ ಮಾಡುವ ವಿಚಾರ ಪೊಲೀಸರಿಗಿತ್ತು ಎನಿಸುತ್ತದೆ ಎಂದು ಹೇಳಿಕೆ ಕೊಟ್ಟಿರುವುದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರಿಗೆ ಶೋಭೆ ತರುವುದಿಲ್ಲ

ಎಚ್.ಕೆ.ಪಾಟೀಲ, ಸಚಿವ

ರವಿ ಬಂಧನದ ಹಿಂದೆ ಹಲವರ ಕೈವಾಡವಿದೆ. ರಾಜಕೀಯವಾಗಿ ಟಾರ್ಗೆಟ್ ಮಾಡುವುದಕ್ಕೇ ಅಲ್ಲ; ದೈಹಿಕವಾಗಿಯೂ ಹಲ್ಲೆ ಮಾಡಿ, ರವಿ ಮುಗಿಸುವ ಷಡ್ಯಂತ್ರ ಇದರಲ್ಲಿ ಅಡಗಿದೆ

ಜಗದೀಶ ಶೆಟ್ಟರ್, ಸಂಸದ

ಹತ್ಯೆಗೆ ಸಂಚು- ಆರ್. ಅಶೋಕ

ಮಂಡ್ಯ: 'ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಹತ್ಯೆಗೆ ಸಂಚು ನಡೆದಿದೆ, ಅದರಲ್ಲಿ ಅನುಮಾನವಿಲ್ಲ' ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ ಪ್ರತಿಪಾದಿಸಿದರು.

87ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿ, 'ತನಿಖೆಗೂ ಮೊದಲೇ ರವಿ ಅವರನ್ನು ಕಬ್ಬಿನ ಗದ್ದೆಯಲ್ಲಿ ಇರಿಸಿದ್ದು ಏನುದ್ದೇಶ? ಇನ್ನು ಮುಂದೆ ಸಿಎಂ, ಗೃಹಸಚಿವರನ್ನು ಕೂಡ ಕಬ್ಬಿನ ಗದ್ದೆಯಲ್ಲಿಯೇ ಸುರಕ್ಷಿತವಾಗಿಡಲಿ' ಎಂದು ಆಗ್ರಹಿಸಿದರು.

'ನಾನು ಪೊಲೀಸ್ ಠಾಣೆಗೆ ಹೋಗಿದ್ದು, ಅಲ್ಲಿ ಕುಳಿತಿದ್ದುದು ನಿಜ, ರವಿಯವರನ್ನು 40 ಜನ ಹೊಡೆದು ಕೊಲೆ ಮಾಡಲು ಪ್ರಯತ್ನಿಸಿದ್ದರ ವಿರುದ್ಧ ದೂರು ಕೊಡುವುದಕ್ಕೆ ಹೋಗಿದ್ದೆ,ಅವರನ್ನು ಬಿಡಿಸಿಕೊಂಡು ಬರಲು ಅಲ್ಲ' ಎಂದರು.

'ನಾನೂ ಗೃಹಸಚಿವನಾಗಿದ್ದೆ, ಕಾನೂನು ನನಗೂ ಗೊತ್ತಿದೆ. ಗೃಹ ಸಚಿವ ಪರಮೇಶ್ವರ, ಸಿಎಂ ಸಿದ್ದರಾಮಯ್ಯ ಅವರು ಪ್ರಕರಣದ ಬಗ್ಗೆ ಗೊತ್ತೇ ಇಲ್ಲವೆನ್ನುತ್ತಾರೆ. ಹಾಗಾದರೆ ಇದನ್ನೆಲ್ಲ ಇನ್ಯಾರು ಮಾಡಿಸಿದ್ದಾರೆ' ಎಂದು ಪ್ರಶ್ನಿಸಿದರು. 'ಜಯಮಾಲಾ ಸಚಿವರಾಗಿದ್ದಾಗ ... ಅವರು 'ಸೇವೆ' ಎಂದಿದ್ದರು. ಅವರಿಗೆ ಜಯಮಾಲಾ ಛೀಮಾರಿ ಹಾಕಿದ್ದರು. ಆಗ ಏಕೆ ಇವರು ಲಕ್ಷ್ಮೀ ವಿರುದ್ಧ ಕ್ರಮ ಕೈಗೊಳ್ಳಲಿಲ್ಲ? ಸೇವೆ ಎಂದರೆ ಏನು ಎಂದು ಏಕೆ ಆಗ ಕೇಳಲಿಲ್ಲ' ಎಂದು ಪ್ರಶ್ನಿಸಿದರು.

ಮಾತು ತಿರುಚುವುದರಲ್ಲಿ ರವಿ ನಿಪುಣ: ಡಿ.ಕೆ ಸುರೇಶ್

ಬೆಂಗಳೂರು: 'ಆರೋಪ ಮಾಡುವುದರಲ್ಲಿ, ಮಾತು ತಿರುಚುವುದರಲ್ಲಿ ಸಿ.ಟಿ. ರವಿ ನಿಪುಣರು' ಎಂದು ಕಾಂಗ್ರೆಸ್ ಮಾಜಿ ಸಂಸದ ಡಿ.ಕೆ. ಸುರೇಶ್ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, 'ತಾನು ಮಾಡಿರುವ ತಪ್ಪಿಗೆ ಅವರು ರಾಜ್ಯದ ಮಹಿಳೆಯರಲ್ಲಿ ಕ್ಷಮೆ ಕೇಳುವುದು ಒಳಿತು' ಎಂದು ಅಭಿಪ್ರಾಯಪಟ್ಟರು.

ಎಸ್‌ಪಿಜಿ ಭದ್ರತೆ ತೆಗೆದುಕೊಳ್ಳಲಿ: 'ನನಗೆ ಏನಾದರೂ ಆದರೆ ಡಿ.ಕೆ. ಶಿವಕುಮಾರ್ ಹಾಗೂ ಲಕ್ಷ್ಮಿ ಹೆಬ್ಬಾಳಕರ ಅವರೇ ಕಾರಣ' ಎಂಬ ಸಿ.ಟಿ. ರವಿ ಹೇಳಿಕೆ ಬಗ್ಗೆ ಕೇಳಿದಾಗ, 'ಸಿ.ಟಿ. ರವಿ ಬೇಕಾದರೆ ಕೇಂದ್ರ ಸರ್ಕಾರದಿಂದ ಎಸ್‌ಪಿಜಿ ಭದ್ರತೆ ಪಡೆಯಲಿ. ಹಿಂದೆಯೊಂದು ಮುಂದೆ ಒಂದು ಭದ್ರತಾ ವ್ಯಾನ್ ಹಾಕಿಕೊಂಡು ಓಡಾಡಲಿ' ಎಂದರು.

ಉಳ್ಳಾಲ: ಅಪಘಾತದಲ್ಲಿ ಮೃತಪಟ್ಟ ಯುವಕನ ಅಸ್ಥಿ ದಾನ

ಪ್ರಜಾವಾಣಿ ವಾರ್ತೆ

ಈಶ್ವರ ಎನ್.

ಉಳ್ಳಾಲ: ಅಪಘಾತದಲ್ಲಿ ಮೃತಪಟ್ಟ ಯುವಕನ ಅಸ್ಥಿದಾನಕ್ಕೆ ಕುಟುಂಬದವರು ಮುಂದಾಗಿದ್ದು, ದೇರಳಕಟ್ಟೆ ಕೆ.ಎಸ್. ಹೆಗ್ಡೆ ಆಸ್ಪತ್ರೆಯ ಎಲುಬು ಮತ್ತು ಕೀಲು ತಜ್ಞರ ವಿಭಾಗದ ಮುಖ್ಯಸ್ಥ ಡಾ. ವಿಕ್ರಮ್ ಶೆಟ್ಟಿ ನೇತೃತ್ವದಲ್ಲಿ ದಾನ ಸಂಗ್ರಹಿಸಲಾಗಿದೆ. ಇದರಿಂದ ಕ್ಯಾನ್ಸರ್ ಪೀಡಿತ ಆರು ಮಕ್ಕಳ ಕಾಲುಗಳನ್ನು ಉಳಿಸಬಹುದು ಎಂದು ಅವರು ತಿಳಿಸಿದ್ದಾರೆ.

ಬಂಟವಾಳ ಗ್ರಾಮ ಸೋಮವಾರಪೇಟೆ ನಿವಾಸಿ, 32 ವರ್ಷದ ಈಶ್ವರ ಎನ್. ಅವರಿಗೆ ರಸ್ತೆ ಅಪಘಾತದಲ್ಲಿ ತಲೆಗೆ ಗಂಭೀರ ಗಾಯವಾಗಿದ್ದು, ಅವರು ಭಾನುವಾರ ಮೃತಪಟ್ಟರು. ಈಶ್ವರ ಅವರ ಸ್ಥಿತಿಯ ಬಗ್ಗೆ ಮಾಹಿತಿ ಪಡೆದ ಅವರ ಸೋದರರು, ವೈದ್ಯಕೀಯ ತಂಡದ ಸಮಾಲೋಚನೆ ನಂತರ ಸೋದರರು ಅಸ್ಥಿಯನ್ನು ದಾನ ಮಾಡಲು ಮುಂದಾದರು. ಆಸ್ಪತ್ರೆ ಸಂಯೋಜಕಿ ಅಕ್ಷತಾ ಶೆಟ್ಟಿ ಅವರ ಮಾರ್ಗದರ್ಶನದಲ್ಲಿ, ಕುಟುಂಬದ ಎಲ್ಲ ಸದಸ್ಯರಿಗೂ ದಾನದ ಮಹತ್ವ ವಿವರಿಸಲಾಯಿತು.

'ಇದು ನ್ಯಾಯಾಂಗ ಪ್ರಕರಣವಾಗಿರುವುದರಿಂದ, ಪೊಲೀಸ್ ಅನುಮತಿ ಪಡೆದು ಶಸ್ತ್ರಚಿಕಿತ್ಸೆ ಪ್ರಕ್ರಿಯೆ ಆರಂಭಿಸಲಾಯಿತು. ಡಾ. ವಿಕ್ರಮ್ ಶೆಟ್ಟಿ ಅವರ ನೇತೃತ್ವದಲ್ಲಿ, ಡಾ. ವರುಣ್ ಶೆಟ್ಟಿ, ಡಾ. ಶ್ರಿಶ್ ನಂಬಿಯಾರ್, ಟಿಷ್ಯೂ ಬ್ಯಾಂಕ್ ತಂಡದ ನೆರವಿನಿಂದ ಪ್ರಕ್ರಿಯೆ ನಡೆಯಿತು.

'ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಅಸ್ಥಿ ದಾನ ಮಾಡಲಾಗಿದ್ದು, ದಾನ ಮತ್ತು ದೇಹದಾನದ ಮಹತ್ವ ಕುರಿತು ಸಾರ್ವಜನಿಕರಲ್ಲಿ ಜಾಗೃತಿಯ ಹೆಚ್ಚಿಸಲು ಪ್ರೇರಣೆಯಾಗಲಿದೆ' ಎಂದು ವೈದ್ಯಕೀಯ ಅಧೀಕ್ಷಕ ಡಾ.ಸುಮಲತಾ ಶೆಟ್ಟಿ ಹೇಳಿದರು.

ರಾಜ್ಯದಲ್ಲಿ 2.76 ಲಕ್ಷ ಹುದ್ದೆಗಳು ಖಾಲಿ

ಒಂದನೇ ಪುಟದಿಂದ..

ಲಕ್ಷಾಂತರ ಪದವೀಧರರು: ರಾಜ್ಯದಲ್ಲಿ ಇಷ್ಟು ದೊಡ್ಡ ಪ್ರಮಾಣದ ಹುದ್ದೆಗಳು ಖಾಲಿ ಉಳಿದುಕೊಂಡಿರುವ ನಡುವೆಯೇ, 2022–24ರ ನಡುವಿನ ಎರಡು ವರ್ಷಗಳಲ್ಲಿ ರಾಜ್ಯದ ಪದವಿ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಂದ ಒಟ್ಟಾರೆ 8,87,395 ಮಂದಿ ಪದವಿ (ಪದವಿ, ಎಂಜಿನಿಯರಿಂಗ್, ಸ್ನಾತಕೋತ್ತರ ಪದವಿ) ಪಡೆದು ಹೊರಬಂದಿದ್ದಾರೆ. ಕೌಶಲಾಭಿವೃದ್ಧಿ ಸಚಿವರು ವಿಧಾನ ಪರಿಷತ್ತಿನಲ್ಲಿ ನೀಡಿರುವ ಉತ್ತರದಲ್ಲಿ ಈ ಅಂಕಿ ಅಂಶಗಳನ್ನು ನೀಡಿದೆ.

1.45 ಲಕ್ಷ ನಿರುದ್ಯೋಗಿಗಳಿಗೆ ಯುವ ನಿಧಿ

ಯುವ ನಿಧಿ- ಗ್ಯಾರಂಟಿ ಕಾರ್ಯಕ್ರಮದ ಮೂಲಕ 1,45,978 ಮಂದಿ ಪದವೀಧರರಿಗೆ ಮತ್ತು 2,253 ಡಿಪ್ಲೊಮಾ ಪಾಸಾದವರಿಗೆ ಮಾಸಿಕ ಯುವನಿಧಿ ಯೋಜನೆ ಮೂಲಕ ಹಣ (ಪದವೀಧರ ನಿರುದ್ಯೋಗಿಗಳಿಗೆ ಮಾಸಿಕ ₹3,000 ಹಾಗೂ ಡಿಪ್ಲೊಮಾ ಪಾಸ್ ನಿರುದ್ಯೋಗಿಗಳಿಗೆ ₹1,500) ನೀಡುತ್ತಿದೆ. ಯುವ ನಿಧಿ ಕಾರ್ಯಕ್ರಮ ಜಾರಿಯಾದ ಬಳಿಕ ಈ ಯೋಜನೆಗೆ ₹172.78 ಕೋಟಿ ವ್ಯಯ ಮಾಡಿರುವುದಾಗಿ ಸರ್ಕಾರ ತಿಳಿಸಿದೆ.

ಆಯ್ಕೆ ಪಟ್ಟಿಯಲ್ಲಿ ಅಕ್ರಮ: ಸ್ಪರ್ಧಾರ್ಥಿಗಳು ಆರೋಪ

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಲೋಪ

ಪ್ರಜಾವಾಣಿ ವಾರ್ತೆ

ತಾತ್ಕಾಲಿಕ ಪಟ್ಟಿ ವಾಪಸ್

ಹಲವು ಗೊಂದಲಗಳಿಗೆ ಕಾರಣವಾಗಿದ್ದ ಪಟ್ಟಿಯನ್ನು ಜಿಲ್ಲಾ ಆಡಳಿತ ರಾತ್ರೋರಾತ್ರಿ ತನ್ನ ಅಧಿಕೃತ ವೆಬ್‌ಸೈಟ್‌ನಿಂದ ಹಿಂಪಡೆದಿದೆ. ಸ್ಪರ್ಧಾರ್ಥಿಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ಸಾಮಾಜಿಕ ಜಾಲ ತಾಣದಲ್ಲಿ ಅಭ್ಯರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದ್ದರು. ಇದರಿಂದ ಎಚ್ಚೆತ್ತ ಜಿಲ್ಲಾ ಆಡಳಿತ ಪಟ್ಟಿ ವಾಪಸ್ ಪಡೆದಿದೆ.

'ತಾಂತ್ರಿಕ ಕಾರಣದಿಂದ 1:3 ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿ ಹಿಂಪಡೆಯಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ತುಮಕೂರು: ಗ್ರಾಮ ಆಡಳಿತಾಧಿಕಾರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಜಿಲ್ಲಾ ಆಡಳಿತ ಪ್ರಕಟಿಸಿದ 1:3 ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಲೋಪವಾಗಿದ್ದು, ಅಕ್ರಮ ನಡೆದಿದೆ' ಎಂದು ಸ್ಪರ್ಧಾರ್ಥಿಗಳು ಆರೋಪಿಸಿದ್ದಾರೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಅ.26 ಮತ್ತು 27ರಂದು 1 ಸಾವಿರ ಹುದ್ದೆಗಳಿಗೆ ಪರೀಕ್ಷೆ ನಡೆಸಿತ್ತು. ಡಿ.20ರಂದು ಕೆಇಎ ಮೆರಿಟ್ ಪಟ್ಟಿ ಪ್ರಕಟಿಸಿ ಪ್ರತಿ ಜಿಲ್ಲೆಗೆ ಪಟ್ಟಿ ಕಳುಹಿಸಿದೆ. ಜಿಲ್ಲಾ ಆಡಳಿತ ಡಿ.21ರಂದು ತಾತ್ಕಾಲಿಕ ಪಟ್ಟಿ ಪ್ರಕಟಿಸಿದೆ. ಜಾತಿವಾರು ವಿಂಗಡಿಸಿ ಪಟ್ಟಿ ಬಿಡುಗಡೆಗೊಳಿಸಿ ದಾಖಲಾತಿ ಪರಿಶೀಲನೆಗೆ ಕ್ರಮಕೈಗೊಂಡಿದೆ.

'ಕೆಇಎ ಬಿಡುಗಡೆ ಮಾಡಿದ ಮೆರಿಟ್ ಪಟ್ಟಿಗೂ ಜಿಲ್ಲಾ ಆಡಳಿತ ಪ್ರಕಟಿಸಿದ ಪಟ್ಟಿಗೂ ತುಂಬಾ ವ್ಯತ್ಯಾಸವಿದೆ. ತಾತ್ಕಾಲಿಕ ಪಟ್ಟಿಯಲ್ಲಿ ಅಭ್ಯರ್ಥಿಗಳ 40 ರಿಂದ 70 ಅಂಕಗಳು ಹೆಚ್ಚು-ಕಡಿಮೆಯಾಗಿವೆ. ಇದರಿಂದ ಶ್ರಮಪಟ್ಟು ಓದಿದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಅಧಿಕಾರಿಗಳು ನೇಮಕಾತಿ ಅಕ್ರಮಕ್ಕೆ ಮುಂದಾಗಿದ್ದಾರೆ. ಕೂಡಲೇ ಸೂಕ್ತ ಕ್ರಮಕೈಗೊಂಡು ಸಮಸ್ಯೆ ಸರಿಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಅಂಕಪಟ್ಟಿಯಲ್ಲಿ ಸಂಪೂರ್ಣವಾಗಿ ವ್ಯತ್ಯಾಸವಾಗಿದೆ. ನಗರ ಮತ್ತು ಗ್ರಾಮೀಣ ಅಭ್ಯರ್ಥಿ, ಮೀಸಲಾತಿವಾರು ಪಟ್ಟಿ ಸಿದ್ಧಪಡಿಸುವಲ್ಲಿ ಅಕ್ರಮ ನಡೆದಿದೆ. ಮಹಿಳಾ ಅಭ್ಯರ್ಥಿಗಳ ಪಟ್ಟಿಯಲ್ಲಿ ಪುರುಷರ ಹೆಸರು ಸೇರಿಸಲಾಗಿದೆ. ಅಂತಿಮ ಪಟ್ಟಿಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಅಕ್ರಮಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಪಟ್ಟಿ ತಿದ್ದುಪಡಿ ಮಾಡಬೇಕು' ಎಂದು ಒತ್ತಾಯಿಸಿದ್ದಾರೆ.

'ಪರೀಕ್ಷೆಗಾಗಿ ಹಗಲು ರಾತ್ರಿ ಎನ್ನದೆ ಕಷ್ಟಪಟ್ಟು ಓದಿದ್ದೇವೆ. ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿ ಇದ್ದವರಿಗೆ ಜಿಲ್ಲಾ ಆಡಳಿತದ ಪಟ್ಟಿಯಿಂದ ಆಘಾತ ಉಂಟಾಗಿದೆ. ತಕ್ಷಣಕ್ಕೆ ಲೋಪ ಸರಿಪಡಿಸಬೇಕು. ಮುಂದಿನ ದಿನಗಳಲ್ಲಿ ಹೀಗೆ ಆಗದಂತೆ ಎಚ್ಚರಿಕೆ ವಹಿಸಬೇಕು' ಎಂದು ಅಭ್ಯರ್ಥಿಯೊಬ್ಬರು ಮನವಿ ಮಾಡಿದರು.

'ತಾಂತ್ರಿಕ ಸಮಸ್ಯೆಯಿಂದ ವ್ಯತ್ಯಾಸ ಆಗಿದೆಯೋ, ಬೇರೆ ಏನಾದರೂ ತೊಂದರೆಯಿಂದ ಈ ರೀತಿ ನಡೆದಿದೆಯೋ ಎಂಬುದನ್ನು ಪತ್ತೆ ಹಚ್ಚಬೇಕು' ಎಂದು ಅಭ್ಯರ್ಥಿ ಶ್ರೀನಿವಾಸ್ ಒತ್ತಾಯಿಸಿದರು.

ಈ ಹಿಂದಿನ ವರ್ಷಗಳಲ್ಲಿ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳಿಗೆ ಪಿಯುಸಿ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಇದೇ ಮೊದಲ ಬಾರಿಗೆ ಸ್ಪರ್ಧಾತ್ಮಕ ಪರೀಕ್ಷೆ ಏರ್ಪಡಿಸಲಾಗಿತ್ತು. ಜಿಲ್ಲೆಯ 73 ಹುದ್ದೆಗಳಿಗೆ ಪರೀಕ್ಷೆ ಬರೆಯಲು 25,216 ಮಂದಿ ನೋಂದಣಿ ಮಾಡಿಕೊಂಡಿದ್ದರು.

ಬೆಳಗಾವಿ: ಬಾಣಂತಿ ಸಾವು ವೈದ್ಯರ ನಿರ್ಲಕ್ಷ್ಯ ಆರೋಪ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಜಿಲ್ಲಾಸ್ಪತ್ರೆಯಲ್ಲಿ ಭಾನುವಾರ ಬೆಳಿಗ್ಗೆ ಬಾಣಂತಿಯೊಬ್ಬರು ಮೃತಪಟ್ಟಿದ್ದು, 'ವೈದ್ಯರ ನಿರ್ಲಕ್ಷ್ಯವೇ ಸಾವಿಗೆ ಕಾರಣ' ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಹುಕ್ಕೇರಿ ತಾಲ್ಲೂಕಿನ ಗೌಡವಾಡ ಗ್ರಾಮದ ವೈಶಾಲಿ ಕೊಟಬಾಗಿ ಮೃತ ಮಹಿಳೆ. 'ಜಿಲ್ಲಾಸ್ಪತ್ರೆಯ ಹೆರಿಗೆ ವಾರ್ಡ್‌ಗೆ ವೈಶಾಲಿ ಅವರನ್ನು ಶನಿವಾರ ದಾಖಲಿಸಿದ್ದೆವು. ಸಿಸೇರಿಯನ್ ಮೂಲಕ ಹೆರಿಗೆ ಮಾಡಲಾಗಿದ್ದು, ಹೆಣ್ಣುಮಗುವಿಗೆ ಜನ್ಮ ನೀಡಿದ್ದಾರೆ. ಭಾನುವಾರ ಬೆಳಿಗ್ಗೆ 7 ಗಂಟೆಯವರೆಗೆ ಆಕೆಯ ಆರೋಗ್ಯ ಸ್ಥಿರವಾಗಿತ್ತು. ನಂತರ ಎದೆನೋವು ಕಾಣಿಸಿಕೊಂಡಿತು. ಸಕಾಲಕ್ಕೆ ವೈದ್ಯರು ಚಿಕಿತ್ಸೆ ನೀಡಲು ಬರಲಿಲ್ಲ. ತುರ್ತು ನಿಗಾ ಘಟಕಕ್ಕೆ ದಾಖಲಿಸಿದರೂ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು' ಎಂದು ಅತ್ತೆ ಈರವ್ವ ಆರೋಪಿಸಿದರು.

'ಭಾನುವಾರ ಬೆಳಿಗ್ಗೆಯವರೆಗೂ ವೈಶಾಲಿ ಆರೋಗ್ಯ ಸ್ಥಿರವಾಗಿತ್ತು. ಎದೆನೋವು ಬಂದ ತಕ್ಷಣ, ವೈದ್ಯರು ಚಿಕಿತ್ಸೆ ನೀಡಿ ಬಾಣಂತಿ ಜೀವ ಉಳಿಸಲು ಪ್ರಯತ್ನಿಸಿದ್ದಾರೆ. ಆದರೆ, ಹೃದಯ ಸಂಬಂಧಿ ಸಮಸ್ಯೆಯಿಂದ ಅವರು ಮೃತಪಟ್ಟಿದ್ದಾರೆ' ಎಂದು ಬಿಮ್ಸ್ ನಿರ್ದೇಶಕ ಡಾ.ಅಶೋಕಕುಮಾರ ಶೆಟ್ಟಿ ಹೇಳಿದರು.

'ರೋಗಿಗಳ ಕುಟುಂಬದವರು ಮಾಡಿದ ಆರೋಪದ ಕುರಿತಾಗಿ ತನಿಖೆಗೆ ಆದೇಶಿಸಿದ್ದೇನೆ. ವೈದ್ಯರು ತಪ್ಪು ಎಸಗಿರುವುದು ಸಾಬೀತಾದರೆ, ಶಿಸ್ತು ಕ್ರಮ ಜರುಗಿಸಲಾಗುವುದು' ಎಂದರು.

ಎಪಿಎಂಸಿ ಠಾಣೆ ಪೊಲೀಸರು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 25/2024–25
ದಿನಾಂಕ : 18–12–2024

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು ಲೆಕ್ಕ ಶೀರ್ಷಿಕೆ : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಯೋಜನೆಯಡಿ ಕರೆದಿರುವ ಕಾಮಗಾರಿಗಳನ್ನು KW-4 (Standard Tender Document) ಪ್ರಕಾರ KPPP ಮುಖಾಂತರ ಕರ್ನಾಟಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು KTPP Act 1999 and KTPP Rule 2000 ರಲ್ಲಿ ಸಿವಿಲ್ ಗುತ್ತಿಗೆದಾರರುಗಳಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಅಂದಾಜು ಮೊತ್ತ ರೂ. 236.25 ಲಕ್ಷಗಳ ಒಟ್ಟು 01 ಟೆಂಡರ್ ಆಹ್ವಾನಿಲಾಗಿದೆ. ಆನ್‌ಲೈನ್ ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ : 20–12–2024 ಕೊನೆಯ ದಿನಾಂಕ : 27–12–2024 ಸಂಜೆ 5.00 ಗಂಟೆಯ ವರೆಗೆ. ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30–12–2024 ಇನ್ನುಳಿದ ಹೆಚ್ಚಿನ ಮಾಹಿತಿಗಳನ್ನು KPPP website www.kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಚೇರಿ ದೂರವಾಣಿ ಸಂಖ್ಯೆ : 08226–223019ಕ್ಕೆ ಸಂಪರ್ಕಿಸಿವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:497:2024–25

ದುಬಾರಿ ಕಾಯಿಲೆಗಳ ಚಿಕಿತ್ಸೆಗೆ ನೆರವು

ಎಸ್‌ಸಿ, ಎಸ್‌ಟಿ ಸಮುದಾಯದ ಜನರಿಗೆ, 17 ಕಾಯಿಲೆಗಳಿಗೆ ಅನ್ವಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರಿಗೆ ಅಪರೂಪದ ಮತ್ತು ದುಬಾರಿ ವೆಚ್ಚದ 17 ಕಾಯಿಲೆಗಳ ಚಿಕಿತ್ಸಾ ವೆಚ್ಚವನ್ನು 'ಕಾರ್ಪಸ್ ಫಂಡ್' ಸ್ಥಾಪಿಸಿ ಭರಿಸುವ ಯೋಜನೆ ಜಾರಿಗೊಳಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನಲ್ಲಿ ಪರಿಶಿಷ್ಟರ ಕಲ್ಯಾಣ ಯೋಜನೆ (ಎಸ್‌ಸಿಎಸ್‌ಪಿ, ಟಿಎಸ್‌ಪಿ) ಅಡಿಯಲ್ಲಿ ಪ್ರಸ್ತುತ ಲಭ್ಯ ಇರುವ ₹47 ಕೋಟಿ ಮೊತ್ತದಲ್ಲಿ ಕಾರ್ಪಸ್ ಫಂಡ್ ಸೃಜಿಸಿ ಅದರ ಬಡ್ಡಿಯ ಮೊತ್ತದಿಂದ ಈ ಕಾಯಿಲೆಗಳ ಚಿಕಿತ್ಸಾ ವೆಚ್ಚ ಭರಿಸಲಾಗುತ್ತದೆ.

ವಿರಳ ಮತ್ತು ದುಬಾರಿ ವೆಚ್ಚದ ಒಟ್ಟು 33 ಕಾಯಿಲೆಗಳಲ್ಲಿ 16 ಕಾಯಿಲೆಗಳಿಗೆ ರಾಜ್ಯ ಸರ್ಕಾರದ ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ, ಜೀವ ಸಾರ್ಥಕತೆ ಮುಂತಾದ ಯೋಜನೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. ಉಳಿದ 17 ಕಾಯಿಲೆಗಳ ಚಿಕಿತ್ಸಾ ವಿಧಾನಗಳ ವೆಚ್ಚವನ್ನು ಬಡ್ಡಿ ಮೊತ್ತದಲ್ಲಿ ಭರಿಸಲಾಗುವುದು ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಅಲ್ಲದೆ, ಮುಂದಿನ ದಿನಗಳಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರ ಯಾವುದಾದರೂ ಯೋಜನೆಗಳಲ್ಲಿ ಎಲ್ಲ ಸಮುದಾಯಗಳ ಜನಸಂಖ್ಯೆಗೆ ಅನ್ವಯವಾಗುವಂತೆ ಪ್ರಸ್ತಾಪಿತ 17 ಚಿಕಿತ್ಸಾ ವಿಧಾನಗಳಲ್ಲಿ ಯಾವುದಾದರೂ ಒಂದನ್ನು ಸೇರಿಸಿದರೆ, ಅವುಗಳನ್ನು ಈ ಯೋಜನೆಯಿಂದ ಕೈಬಿಡಲಾಗುವುದು ಎಂದೂ ಇಲಾಖೆ ಸ್ಪಷ್ಟಪಡಿಸಿದೆ.

ಡಿ. 6ರಂದು ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ 17 ಕಾಯಿಲೆಗಳ ಚಿಕಿತ್ಸಾ ವೆಚ್ಚ ಭರಿಸುವ ಯೋಜನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿತ್ತು.

₹7 ಲಕ್ಷ ಚಿಕಿತ್ಸಾ ವೆಚ್ಚ ತಗಲುವ ಅಸ್ಥಿ ಮಜ್ಜೆ ಕಸಿ (ಬೋನ್ ಮ್ಯಾರೊ) ಕಾಯಿಲೆ, ₹3.25 ಲಕ್ಷ ವೆಚ್ಚ ತಗಲುವ ಆಂಜಿಯೋ ಪ್ಲಾಸ್ಟಿ, 4 ಲಕ್ಷಕ್ಕೂ ಹೆಚ್ಚು ವೆಚ್ಚ ತಗಲುವ ಹೃದಯ ಸಂಬಂಧಿ ಕಾಯಿಲೆಗಳು ಈ 17 ಕಾಯಿಲೆಗಳ ಚಿಕಿತ್ಸಾ ಪಟ್ಟಿಯಲ್ಲಿವೆ.

कर्मचारी राज्य बीमा निगम
(श्रम एवं रोजगार मंत्रालय, भारत सरकार)
EMPLOYEES' STATE INSURANCE CORPORATION
(Ministry of Labour & Employment, Govt. of India)
क.रा.बी.नि. ESIC

उप क्षेत्रीय कार्यालय-बेंगलूर दक्षिण (बोम्मसंद्रा),
23, 9 'सी' मेन, रिंग रोड, बी.टी.एम. प्रथम स्टेज, बैंगलोर 560 029
SUB REGIONAL OFFICE-BANGALORE-SOUTH (BOMMASANDRA)
23, 9 'C' Main, Ring Road, BTM 1st Stage, Bangalore-560 029
Ph.No. 080-26786391/ 93/ 96, Fax: 26786392
E-mail: sro-bommasandra@esic.gov.in, Website: www.esic.gov.in

NOTICE

To
Shri. Siddalingayya S Kulkarni, Proprietor, M/s Galaxy Security & Allied Services No. 815, 1st Floor Nagappa Building 5th Cross New MICO ROAD G.R Nagar Bangalore-560100
My Client ESI Corporation, No.23, 9th B Main, BTM Ring Road, Opp: IOC Petrol Bunk Bangalore-560029, has filed complaint CC No. 13920/2020 before 25th ADDL. CHIEF METROPOLITAN MAGISTRATE at Bengaluru (25TH ACMM) against you under section 138 of Negotiable and Instrument Act, 1881. The arrest warrant issued against you has been returned due to your absconding (or is concealing yourself to avoid the services of the said warrant). Please note the court has issued proclamation against you and the next hearing date is on the 27th day of December, 2024.

Sd/-
Mohumed Sadiqh B.A
KV Legal
Advocates & Legal Consultants No.FF47, 1st Floor, Gold Tower, No.50, Residency Road, Bangalore 560 025
sadiq@kvlegal.com
Mob: 9448557169, 9482083786

Bangalore
Dated: 23.12.2024

कर्मचारी राज्य बीमा निगम
(श्रम एवं रोजगार मंत्रालय, भारत सरकार)
EMPLOYEES' STATE INSURANCE CORPORATION
(Ministry of Labour & Employment, Govt. of India)
क.रा.बी.नि. ESIC

उप क्षेत्रीय कार्यालय-बेंगलूर दक्षिण (बोम्मसंद्रा),
23, 9 'सी' मेन, रिंग रोड, बी.टी.एम. प्रथम स्टेज, बैंगलोर 560 029
SUB REGIONAL OFFICE-BANGALORE-SOUTH (BOMMASANDRA)
23, 9 'C' Main, Ring Road, BTM 1st Stage, Bangalore-560 029
Ph.No. 080-26786391/ 93/ 96, Fax: 26786392
E-mail: sro-bommasandra@esic.gov.in, Website: www.esic.gov.in

NOTICE

To
Shri. Siddalingayya S Kulkarni, Proprietor, M/s Galaxy Security & Allied Services No. 815, 1st Floor Nagappa Building 5th Cross New MICO ROAD G.R Nagar Bangalore-560100
My Client ESI Corporation, No.23, 9th B Main, BTM Ring Road, Opp: IOC Petrol Bunk Bangalore-560029, has filed complaint CC No. 16872/2019 before 25th ADDL. CHIEF METROPOLITAN MAGISTRATE at Bengaluru (25TH ACMM) against you under section 138 of Negotiable and Instrument Act, 1881. The arrest warrant issued against you has been returned due to your absconding (or is concealing yourself to avoid the services of the said warrant). Please note the court has issued proclamation against you and the next hearing date is on the 27th day of December, 2024.

Sd/-
Mohumed Sadiqh B.A
KV Legal
Advocates & Legal Consultants No.FF47, 1st Floor, Gold Tower, No.50, Residency Road, Bangalore 560 025
sadiq@kvlegal.com
Mob: 9448557169, 9482083786

Bangalore
Dated: 23.12.2024

कर्मचारी राज्य बीमा निगम
(श्रम एवं रोजगार मंत्रालय, भारत सरकार)
EMPLOYEES' STATE INSURANCE CORPORATION
(Ministry of Labour & Employment, Govt. of India)
क.रा.बी.नि. ESIC

उप क्षेत्रीय कार्यालय-बेंगलूर दक्षिण (बोम्मसंद्रा),
23, 9 'सी' मेन, रिंग रोड, बी.टी.एम. प्रथम स्टेज, बैंगलोर 560 029
SUB REGIONAL OFFICE-BANGALORE-SOUTH (BOMMASANDRA)
23, 9 'C' Main, Ring Road, BTM 1st Stage, Bangalore-560 029
Ph.No. 080-26786391/ 93/ 96, Fax: 26786392
E-mail: sro-bommasandra@esic.gov.in, Website: www.esic.gov.in

NOTICE

To
Shri. Siddalingayya S Kulkarni, Proprietor, M/s Galaxy Security & Allied Services No. 815, 1st Floor Nagappa Building 5th Cross New MICO ROAD G.R Nagar Bangalore-560100
My Client ESI Corporation, No.23, 9th B Main, BTM Ring Road, Opp: IOC Petrol Bunk Bangalore-560029, has filed complaint CC No. 16873/2019 before 25th ADDL. CHIEF METROPOLITAN MAGISTRATE at Bengaluru (25TH ACMM) against you under section 138 of Negotiable and Instrument Act, 1881. The arrest warrant issued against you has been returned due to your absconding (or is concealing yourself to avoid the services of the said warrant). Please note the court has issued proclamation against you and the next hearing date is on the 27th day of December, 2024.

Sd/-
Mohumed Sadiqh B.A
KV Legal
Advocates & Legal Consultants No.FF47, 1st Floor, Gold Tower, No.50, Residency Road, Bangalore 560 025
sadiq@kvlegal.com
Mob: 9448557169, 9482083786

Bangalore
Dated: 23.12.2024

ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯುರಿಟೀಸ್)
ವಿಧಾನ ಸೌಧ, ಬೆಂಗಳೂರು.

No: FD 01 BMB 2024 | Dated: 19.12.2024

ಪ್ರಕಟಣೆ

1. ಒಟ್ಟು ಮೊತ್ತ: ರೂ 4000 ಕೋಟಿ (ರೂ 2000 ಕೋಟಿ – 16 ವರ್ಷದ ಅವಧಿ ಮತ್ತು ರೂ 2000 ಕೋಟಿ–ಮರು ಹಂಚಿಕೆ)
2. ಹಂಚಿಕೆ ವಿಧಾನ: ಹರಾಜು ಮೂಲಕ, ಪಿಡಿಒ, ಆರ್‌ಬಿಐ, ಮುಂಬೈ (ಫೋರ್ಟ್) ಮುಖಾಂತರ.
3. ಹರಾಜಿನ ದಿನಾಂಕ : ಡಿಸೆಂಬರ್ 24, 2024.

ಕರ್ನಾಟಕ ಸರ್ಕಾರವು ಮೇಲಿನ ಸೆಕ್ಯೂರಿಟಿಗಳಿಗೆ ಚಂದಾದಾರಿಕೆಯನ್ನು ಆಹ್ವಾನಿಸುತ್ತದೆ. ಅಧಿಸೂಚನೆಯ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಒ, ಆರ್‌ಬಿಐ, ಬೆಂಗಳೂರು ಇವರಿಂದ ಪಡೆಯಬಹುದು. ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯನ್ನು ಉತ್ತೇಜಿಸಲು RBI ನಿಂದ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನು ಪರಿಚಯಿಸಲಾಗಿದೆ. ಮಾರಾಟದ ಅಧಿಸೂಚಿತ ಮೊತ್ತದ ಶೇ 10ರ ವರೆಗಿನ ಸರ್ಕಾರಿ ಸ್ಟಾಕ್ ಅನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಲಾಗುತ್ತದೆ. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆ ವೆಬ್‌ಸೈಟ್ www.rbi.org.in ನಲ್ಲಿ ಲಭ್ಯವಿದೆ.

ಸಹಿ/– ಡಾ. ಎಂ.ಟಿ. ರೇಜು,
ಸರ್ಕಾರದ ಕಾರ್ಯದರ್ಶಿ, (ವೆಚ್ಚ)
ಹಣಕಾಸು ಇಲಾಖೆ

DIPR/CP/3866/Zen/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಪ್ರಧಾನ ಮುಖ್ಯ ಅಭಿಯಂತರರು,
2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009.

ಸಂ.: ಬೆಂಜಮಂ/ಪ್ರಮುಅ/ಅಮುಅ(ಯು.ಎಫ್.ಡಬ್ಲ್ಯೂ)/ತಾಂಸ(ಯು.ಎಫ್.ಡಬ್ಲ್ಯೂ)/9537/2024–25 ದಿನಾಂಕ: 21.12.2024

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ – ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರ್‌ದಾರರಿಂದ **ಸಕಾನಿಅ (ಯು.ಎಫ್.ಡಬ್ಲ್ಯೂ)–2 ಉಪ ವಿಭಾಗದಡಿಯ ಮಲ್ಲೇಶ್ವರಂ 18ನೇ ಅಡ್ಡ ರಸ್ತೆಯ ಹತ್ತಿರದ ಅಯ್ಯಪ್ಪ ದೇವಸ್ಥಾನದಿಂದ ಸ್ಟೆಲ್ಲಾ ಮೇರೀಸ್ ಶಾಲೆಯವರೆಗೆ ಸೋರಿಕೆಯಾಗುತ್ತಿರುವ 28" ವ್ಯಾಸದ ಸಿಐ ಫೀಡರ್ ಮಾರ್ಗದ ಬದಲಾಗಿ 700 ಮಿ.ಮೀ ವ್ಯಾಸದ ಎಂಎಸ್ ಕೊಳವೆ ಮಾರ್ಗವನ್ನು ಒದಗಿಸುವ ಮತ್ತು ಅಳವಡಿಸುವ ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಆಹ್ವಾನಿಸಿದೆ.**

ಟೆಂಡರ್‌ಗಿಟ್ಟ ಮೊತ್ತ: **ರೂ. 232.66 ಲಕ್ಷಗಳು**. ಇಎಂಡಿ: **ರೂ. 3.50 ಲಕ್ಷಗಳು.**

ಭರ್ತಿ ಮಾಡಲಾದ ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **07.01.2025**ರ ಮಧ್ಯಾಹ್ನ **3.00** ಗಂಟೆಯವರೆಗೆ. ಬಿಡ್‌ಗಳನ್ನು ತೆರೆಯುವ ದಿನಾಂಕ: **08.01.2025** ರಂದು ಸಂಜೆ **4.00** ಗಂಟೆಗೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಪ್ರಧಾನ ಮುಖ್ಯ ಅಭಿಯಂತರರು

DIPR/CP/MIA/3909/2024-25

ಲಿಂಗಾಯತ ಗಾಣಿಗರಿಗೆ ಮೀಸಲಾತಿ ಬೇಡ ಪೂರ್ಣಾನಂದಪುರಿ ಶ್ರೀ

ವಿಜಯಪುರ(ದೇವನಹಳ್ಳಿ): 'ಉತ್ತರ ಕರ್ನಾಟಕದ ಲಿಂಗಾಯತ ಗಾಣಿಗರು 2ಎ ಮೀಸಲಾತಿಗಾಗಿ ಒತ್ತಾಯಿಸುತ್ತಿದ್ದಾರೆ. ಅವರನ್ನು ಹಿಂದುಳಿದ ವರ್ಗಕ್ಕೆ ಸೇರಿಸಲು ಅವಕಾಶ ನೀಡಿದರೆ ಗಾಣಿಗ ಸಮುದಾಯದ ಮೀಸಲಾತಿಯನ್ನು ಅವರು ಕಸಿದುಕೊಳ್ಳುತ್ತಾರೆ' ಎಂದು ನೆಲಮಂಗಲ ಕ್ಷೇತ್ರ ತೈಲೇಶ್ವರ ಗಾಣಿಗ ಮಹಾಸಂಸ್ಥಾನದ ಪೀಠಾಧಿಪತಿ ಪೂರ್ಣಾನಂದಪುರಿ ಸ್ವಾಮೀಜಿ ಹೇಳಿದರು.

ಗಾಣಿಗ ಸೇವಾ ಕ್ಷೇಮಾಭಿವೃದ್ಧಿ ಸಂಘದಿಂದ ಪಟ್ಟಣದ ಸೌಮ್ಯ ಚನ್ನ ಕೇಶವಸ್ವಾಮಿ ದೇವಾಲಯ ಆವರಣದಲ್ಲಿ ಭಾನುವಾರ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು.

'ಗಾಣಿಗ ಸಮುದಾಯವನ್ನು ಬಿಜೆಪಿ ಸರ್ಕಾರದಲ್ಲಿ ಅಭಿವೃದ್ಧಿ ಹೊಂದಿರುವ ಸಮುದಾಯಗಳ ಪಟ್ಟಿಗೆ ಸೇರ್ಪಡೆಗೊಳಿಸಿದ್ದರು. ನಾವು ಸಾಕಷ್ಟು ಹೋರಾಟ ಮಾಡಿ, ಹಿಂದುಳಿದ ಸಮುದಾಯದ ಸಾಲಿಗೆ ಸೇರ್ಪಡೆಗೊಳಿಸಿದೆವು. ಈಗ ಉತ್ತರ ಕರ್ನಾಟಕದ ಲಿಂಗಾಯಿತ ಗಾಣಿಗರು 2ಎ ಮೀಸಲಾತಿ ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದಾರೆ. ಯಾವುದೇ ಕಾರಣಕ್ಕೂ ಅವರನ್ನು ಹಿಂದುಳಿದ ವರ್ಗಗಳ ಮೀಸಲಾತಿಯಡಿ ಸೇರಿಸಲು ಅವಕಾಶ ನೀಡಬಾರದು'ಎಂದು ಹೇಳಿದರು.

'ಸತೀಶ್ ಸೈಲ್ ನಾಮ್ ಕೆ ವಾಸ್ತೆ ಶಾಸಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಲೆಕೇರಿ ಬಂದರಿನಿಂದ ಅಕ್ರಮವಾಗಿ ಅದಿರು ಸಾಗಣೆ ಮತ್ತು ಮಾರಾಟ ಮಾಡಿದ ಅಪರಾಧಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಕಾರವಾರದ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಅವರಿಗೆ ವಿಧಿಸಿರುವ ಕಠಿಣ ಜೈಲು ಶಿಕ್ಷೆಯನ್ನು ಹೈಕೋರ್ಟ್ ಅಮಾನತಿನಲ್ಲಿ ಇರಿಸಿ ಆದೇಶಿಸಿದೆ.

'ಸಿಬಿಐ ವಿಶೇಷ ನ್ಯಾಯಾಲಯ ವಿಧಿಸಿರುವ ಕಠಿಣ ಜೈಲು ಶಿಕ್ಷೆಗೆ ತಡೆ ನೀಡಬೇಕು' ಎಂದು ಕೋರಿ ಸತೀಶ್ ಸೈಲ್ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಸಂಬಂಧ ಕೆಲ ಷರತ್ತುಗಳನ್ನು ವಿಧಿಸಿದೆ.

'ಮೇಲ್ಮನವಿ ನಿರ್ಧಾರವಾಗುವವರೆಗೆ ಪ್ರಜಾಪ್ರತಿನಿಧಿ ಕಾಯ್ದೆ-1951ರ ಕಲಂ 151ರ ಅನ್ವಯ ಕಾರವಾರ ವಿಧಾನಸಭಾ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಸಬಾರದು. ಸೈಲ್ ಅವರು ವಿಧಾನ ಸಭೆಯ ಕಲಾಪದಲ್ಲಿ ಭಾಗಿಯಾಗುವಂತಿಲ್ಲ. ವಿಧಾನಸಭೆಯಲ್ಲಿ ಮತ ಚಲಾಯಿಸಲು ಅಥವಾ ಭತ್ಯೆ ಪಡೆಯಲು ಅರ್ಹರಲ್ಲ. ಮೇಲ್ಮನವಿ ಬಾಕಿ ಇರುವಾಗ ಸೈಲ್ ಅವರನ್ನು ಭವಿಷ್ಯದಲ್ಲಿ ನಡೆಯುವ ಚುನಾವಣೆಯಲ್ಲಿ ಭಾಗವಹಿಸದಂತೆ ಅನರ್ಹಗೊಳಿಸಬಾರದು' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಇದೇ ಪ್ರಕರಣದಲ್ಲಿ ದಂಡದ ಮೊತ್ತದ ಪೈಕಿ ಶೇ 25ರಷ್ಟನ್ನು ವಿಚಾರಣಾ ನ್ಯಾಯಾಲಯದಲ್ಲಿ ಆರು ವಾರಗಳಲ್ಲಿ ಠೇವಣಿ ಇರಿಸಬೇಕೆಂಬ ಷರತ್ತಿಗೆ ಒಳಪಡಿಸಿ ಸತೀಶ್ ಸೈಲ್ ಸೇರಿದಂತೆ ಪ್ರಕರಣದ ಇತರ ಅಪರಾಧಿಗಳಿಗೆ ಹೈಕೋರ್ಟ್ ಈ ವರ್ಷದ ನ. 13ರಂದು ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು.

'ಶಾ ಹೇಳಿಕೆ ಖಂಡಿಸಿ ಇಂದಿನಿಂದ ಪ್ರತಿಭಟನೆ'

ಪ್ರಜಾವಾಣಿ ವಾರ್ತೆ

ಹರಿಪ್ರಸಾದ್

ಬೆಂಗಳೂರು: 'ಬಿಜೆಪಿ, ಸಂಘ ಪರಿವಾರದವರು ವ್ಯಸನಿಗಳು, ವಿಕೃತ ಮನಸ್ಸಿನವರು' ಎಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, 'ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ದೇಶ ಪೂರ್ವಕವಾಗಿ, ಲೆಕ್ಕಾಚಾರ ಹಾಕಿಕೊಂಡೇ ಬಿ.ಆರ್. ಅಂಬೇಡ್ಕರ್ ಬಗ್ಗೆ ಹೇಳಿಕೆ ಕೊಟ್ಟಿದ್ದಾರೆ. ಅವರು ನೀಡಿರುವ ಹೇಳಿಕೆ ಖಂಡಿಸಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಸೋಮವಾರದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದರು.

'ಅಂಬೇಡ್ಕರ್ ಕುರಿತ ಆರ್‌ಎಸ್‌ಎಸ್ ಅಭಿಪ್ರಾಯವನ್ನೇ ಶಾ ತಮ್ಮ ಹೇಳಿಕೆಯಲ್ಲಿ ಪ್ರತಿಪಾದಿಸಿದ್ದಾರೆ. ಪ್ರಜಾ ಪ್ರಭುತ್ವದ ದೇಗುಲದೊಳಗೆ ನಿಂತು ಅವರು ಇಂತಹ ಕೀಳು ಮಟ್ಟದ ಹೇಳಿಕೆ ನೀಡಿರುವುದು ಖಂಡನೀಯ. ಅವರು ಕೂಡಲೇ ದೇಶದ ಜನರ ಕ್ಷಮೆ ಯಾಚಿಸಬೇಕು' ಎಂದು ಹರಿಪ್ರಸಾದ್ ಆಗ್ರಹಿಸಿದರು.

'ಬಿಜೆಪಿಯವರಿಗೆ ಬಡವರು, ಹಿಂದುಳಿದವರು, ದಲಿತರು ಸೇರಿ ಕೆಳಹಂತದ ಜನ ಬೇಕಾಗಿಲ್ಲ. ತಮ್ಮ ಅಡಿಯಾಳಾಗಿಯೇ ನೋಡುವ ಹುನ್ನಾರ ವಿದು' ಎಂದೂ ಅವರು ಆರೋಪ ಮಾಡಿದರು.

'ಸಾವರ್ಕರ್ ಮತ್ತು ಗೋಳ್ವಾಲ್ಕರ್ ಕೂಡ ಅಂಬೇಡ್ಕರ್ ಮತ್ತು ಅವರು ರಚಿಸಿದ ಸಂವಿಧಾನದ ಬಗ್ಗೆ ಇಂತಹದ್ದೇ ಕೀಳುಮಟ್ಟದ ಹೇಳಿಕೆಗಳನ್ನು ನೀಡಿದ್ದರು. ಈ ನಾಯಕರ ಹಿಂಬಾಲಕರಾದ ಶಾ ಇದೀಗ ಅಂಬೇಡ್ಕರ್‌ಕುರಿತು ಸಂಘದ ಆಂತರ್ಯದಲ್ಲಿರುವ ಅಸಹನೆಯನ್ನು ಹೊರಹಾಕಿದ್ದಾರೆ' ಎಂದು ಕಿಡಿಕಾರಿದರು.

ಕರ್ನಾಟಕ ಸರ್ಕಾರ
(ಕಾರಾಗೃಹ ಮತ್ತು ಸುಧಾರಣಾ ಸೇವೆಗಳು)
ಅಧೀಕ್ಷಕರ ಕಾರ್ಯಾಲಯ ಕೇಂದ್ರ ಕಾರಾಗೃಹ, ಬಳ್ಳಾರಿ.
ಇಮೇಲ್:cpbly.prisons-kar@gov.in ದೂ.ಸಂ.08392–255025

ಸಂ:ಕೇಕಾಬ/ದ.ವಿ/6162/2024–25 ದಿನಾಂಕ: 20.12.2024

ಪತ್ರಿಕಾ ಪ್ರಕಟಣೆ

ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ **CCTV Surveillance System Repair and Replacement**ಗೆ ಸಂಬಂಧಿಸಿದಂತೆ ಸರಬರಾಜು ಮತ್ತು ಅಳವಡಿಸಲು ಹಾಗೂ 05 ವರ್ಷದ ಅವಧಿಗೆ ವಾರ್ಷಿಕ ನಿರ್ವಹಣೆ ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ರನ್ವಯ ಇ–ಪೋರ್ಟಲ್ ತಂತ್ರಾಂಶದಲ್ಲಿ ಕರೆ–2 ದರಖಾಸ್ತನ್ನು ದಿನಾಂಕ: **20.12.2024** ರಂದು ಪ್ರಕಟಣೆ ಮಾಡಲಾಗಿದೆ.

01.ಟೆಂಡರ್ ಪ್ರಕಟಣೆ ದಿನಾಂಕ: **20.12.2024**. 02.ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: **ರೂ.60 ಲಕ್ಷಗಳು**. 03.ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: **20.12.2024**. 04.ಟೆಂಡರ್‌ಗೆ ಬಗ್ಗೆ ವಿಚಾರಣೆ/ಸ್ಪಷ್ಟೀಕರಣ ಕೇಳಲು ಅಂತಿಮ ದಿನಾಂಕ: **30.12.2024 ಸಂಜೆ 05:30**. 05.ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಕೊನೆಯ ದಿನಾಂಕ ಟೆಂಡರ್: **03.01.2025 ಸಂಜೆ 05:00**. 06.ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ **04.01.2025 ಸಂಜೆ 05:30**. 07.ಹಣಕಾಸಿನ ಲಕೋಟೆ ತೆರೆಯುವ ದಿನಾಂಕ **06.01.2025 ಬೆಳಿಗ್ಗೆ 11:00**

ಹೆಚ್ಚಿನ ಮಾಹಿತಿಗಾಗಿ **www.kppp.karnataka.gov.in** ವೆಬ್ ಸೈಟ್‌ನಲ್ಲಿ ಪರಿಶೀಲಿಸುವುದು ಅಥವಾ ಮೊಬೈಲ್ ಸಂ:+91 94808–06515 ಹಾಗೂ ಕಛೇರಿಸ್ಥಿರ ದೂರವಾಣಿ ಸಂ:08392–255026 ಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು

ಸಹಿ/–ಅಧೀಕ್ಷಕರು, ಕೇಂದ್ರ ಕಾರಾಗೃಹ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/711/ಕೆಎಸ್ಎಂಸಿಎ/2024–25

ಶಿಕ್ಷಣ

'ಕಠಿಣತೆ' ಎಂಬುದು ವಿದ್ಯಾರ್ಥಿಯಿಂದ ವಿದ್ಯಾರ್ಥಿಗೆ ಭಿನ್ನ. ಕೆಲ ಮಕ್ಕಳಿಗೆ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ಕಷ್ಟವಾದರೆ, ಇನ್ನೂ ಕೆಲವರಿಗೆ , ಸಮಾಜವಿಜ್ಞಾನ ಕಠಿಣವೆನಿಸಬಹುದು.ಇವುಗಳನ್ನು ಗಮನದಲ್ಲಿಟ್ಟುಕೊಂಡು ಪುನರವಲೋಕನದ ಸಿದ್ಧತೆ ನಡೆಸಿ

ಪುನರವಲೋಕನದ ಚಿತ್ತ ಯಶಸ್ಸಿನತ್ತ!

ಚನ್ನಬಸಪ್ಪ ರೊಟ್ಟಿ

ಪಿಯುಸಿ, ಎಸ್ಸೆಸ್ಸೆಲ್ಸಿ ಹಾಗೂ ಸಿಬಿಎಸ್‌ಇ 10 ಮತ್ತು 12ನೇ ತರಗತಿಗಳ ವಾರ್ಷಿಕ ಪರೀಕ್ಷೆಯ ದಿನಾಂಕಗಳು ಈಗಾಗಲೇ ನಿಗದಿಯಾಗಿವೆ. ಇದರಿಂದ ಪರೀಕ್ಷೆ ಬರೆಯುವ ಮಕ್ಕಳಲ್ಲಿ ಒತ್ತಡ ಒಂದೆಡೆಯಾದರೆ, ಪಾಲಕರಲ್ಲಿ ತಮ್ಮ ಮಕ್ಕಳ ಫಲಿತಾಂಶ ಬಗ್ಗೆ ತಳಮಳ ಇನ್ನೊಂದೆಡೆ ಸಾಮಾನ್ಯ ಎನ್ನುವಂತಾಗಿವೆ. ಈ ನಿಟ್ಟಿನಲ್ಲಿ ಪರೀಕ್ಷಾ ಸಿದ್ಧತೆಯ ಅಂತಿಮ ತಯಾರಿಯ ಈ ದಿನಗಳಲ್ಲಿ ವಿದ್ಯಾರ್ಥಿಗಳು ಸೂಕ್ತ ಪುನರವಲೋಕನ ಮಾರ್ಗವನ್ನು ತಮ್ಮದಾಗಿಸಿಕೊಂಡರೆ ಖಂಡಿತ ತಾವಂದುಕೊಂಡಂತೆ ಹಾಗೂ ತಮ್ಮ ಪೋಷಕರ ನಿರೀಕ್ಷೆಯಂತೆ ಫಲಿತಾಂಶ ಪಡೆದು ಉತ್ತಮ ಸಾಧನೆ ಮಾಡಲು ಸಾಧ್ಯವಿದೆ.

'ಉತ್ತಮ ಪುನರವಲೋಕನ' ಪ್ರಕ್ರಿಯೆಯು ವೇಳಾಪಟ್ಟಿಗೆ ಅನುಗುಣವಾದ ಓದು, ವೇಗವಾದ ಕೈಬರಹದ ರೂಢಿ, ಎಲ್ಲ ಅಧ್ಯಾಯಗಳ ಸಮಗ್ರ ಓದು, ಕಿರು ಟಿಪ್ಪಣಿ, ಹಳೆಯ ಪ್ರಶ್ನೆಪತ್ರಿಕೆಗಳನ್ನು ಆಧರಿಸಿದ ಓದು ಇವುಗಳನ್ನು ಒಳಗೊಂಡಿರಬೇಕು. ಬೆಳಗಿನ ಅವಧಿಯಲ್ಲಿ ಓದಿದ್ದು ಹೆಚ್ಚು ನೆನಪಿನಲ್ಲಿ ಉಳಿಯುತ್ತದೆ. ಈ ವೇಳೆಯಲ್ಲಿ ಮಹತ್ವದ ಅಥವಾ ಕಠಿಣವೆನ್ನಿಸುವ ವಿಷಯಾಂಶಗಳನ್ನು ಮನನ ಮಾಡಿಕೊಂಡು ಅವುಗಳಲ್ಲಿನ ಮಹತ್ವದ ಅಂಶಗಳನ್ನು 'ಅಂಡರ್‌ಲೈನ್' ಮಾಡಿ, ಅವುಗಳನ್ನು ಕಿರುಟಿಪ್ಪಣಿ ರೂಪದಲ್ಲಿ ಬರೆದಿಟ್ಟುಕೊಳ್ಳಬೇಕು. ಆ ಕಿರು ಟಿಪ್ಪಣೆಗಳನ್ನು ಕಣ್ಣಿಗೆ ಕಾಣುವಂತೆ ನಿಮ್ಮ ಅಧ್ಯಯನ ಕೊಠಡಿ ಅಥವಾ ಮನೆಯಲ್ಲಿನ ಗೋಡೆಗಳ ಮೇಲೆ ಅಂಟಿಸಿ. ಈ ಮುಖ್ಯಾಂಶಗಳನ್ನು ಪದೇ ಪದೇ ಅವಲೋಕಿಸುತ್ತಿರಿ. ಹೀಗಾದರೆ, ವಿಷಯವಸ್ತುಗಳು ಸುಲಭವಾಗಿ ನೆನಪಿನಲ್ಲಿ ಉಳಿಯುತ್ತವೆ.

ಇನ್ನು ಹಳೆಗನ್ನಡ ಪದ್ಯಗಳು, ವಿಜ್ಞಾನದ ರಾಸಾಯನಿಕ ಸೂತ್ರಗಳು, ಗಣಿತದ ಸೂತ್ರ ಹಾಗೂ ಪ್ರಮೇಯಗಳಂಥ ಕೆಲ ವಿಷಯಗಳನ್ನು ಕಂಠಪಾಠ ಮಾಡುವುದು ಅನಿವಾರ್ಯ ಎಂಬುದನ್ನು ಮರೆಯದಿರಿ. ನಕ್ಷೆ ಬಿಡಿಸುವುದು, ಜೀವವಿಜ್ಞಾನದ ಚಿತ್ರಗಳನ್ನು ಬಿಡಿಸುವ ಕೌಶಲವನ್ನು ತಪ್ಪದೇ ರೂಢಿಸಿಕೊಳ್ಳಿ.

ಪರೀಕ್ಷೆ ಎಂಬುದು 'ಫುಲ್‌ಮೀಲ್' ಊಟದ ಬಟ್ಟಲಿನಂತೆ. ಅದರಲ್ಲಿ ಉಪ್ಪಿನಕಾಯಿ ಮಾತ್ರ ಇಷ್ಟ; ಅದಷ್ಟೇ ಸಾಕು, ಅದನ್ನಷ್ಟೇ ತಿನ್ನುವೆ ಎನ್ನುವಂತಿಲ್ಲ. ಬಟ್ಟಲಿನಲ್ಲಿ ಇರುವ ಎಲ್ಲ ಪದಾರ್ಥಗಳನ್ನೂ ತಿಂದಾಗ ಮಾತ್ರ ಊಟ ಮುಗಿಸಿದಂತೆ. ಅದೇ ರೀತಿ ಪಠ್ಯಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಸಮಗ್ರವಾಗಿ, ಪರಿಪಕ್ವವಾಗಿ ಪುನರಾವಲೋಕಿಸಿದರೆ ಮಾತ್ರ ಪರೀಕ್ಷೆಯಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಲು ಹಾಗೂ ಉತ್ತಮ ಫಲಿತಾಂಶ ಪಡೆಯಲು ಸಾಧ್ಯ.

ಈ ನಿರ್ಣಾಯಕ ಸಮಯದಲ್ಲಿ ಟಿ.ವಿ, ಮೊಬೈಲ್‌ನಿಂದ ದೂರವಿರಿ. ಜಾತ್ರೆ, ಮದುವೆ, ಹಬ್ಬ-ಹರಿದಿನಗಳನ್ನು ಬಿಟ್ಟುಬಿಡಿ. ಈ ಅಮೂಲ್ಯ ಸಮಯವನ್ನು ವಿಷಯಗಳ ಪುನರವಲೋಕನಕ್ಕೆ ಮೀಸಲಿಡಿ. ಶಾಲೆಯಲ್ಲಿ ಆಯೋಜಿಸುವ ಹೆಚ್ಚುವರಿ ತರಗತಿಗಳಿಗೆ ತಪ್ಪದೇ ಹಾಜರಾಗಿ. ಶಿಕ್ಷಕರು, ಪೋಷಕರು ಹಾಗೂ ಹಿರಿಯ ವಿದ್ಯಾರ್ಥಿಗಳಿಂದ ಅಗತ್ಯ ಮಾರ್ಗದರ್ಶನ ಪಡೆಯಿರಿ. ಪಾಲಕರು ಮಕ್ಕಳ ಓದಿನ ಜತೆ- ನಿದ್ರೆ, ನೀರಡಿಕೆ, ಊಟ, ಆರೋಗ್ಯದ ಬಗ್ಗೆ ಕೂಡ ಕಾಳಜಿ ವಹಿಸಿ.

'ಕಠಿಣತೆ' ಎಂಬುದು ವಿದ್ಯಾರ್ಥಿಯಿಂದ ವಿದ್ಯಾರ್ಥಿಗೆ ಭಿನ್ನವಾಗಿರುತ್ತದೆ. ಕೆಲ ಮಕ್ಕಳಿಗೆ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ಕಬ್ಬಿಣದ ಕಡಲೆಯಾಗಿದ್ದರೆ, ಇನ್ನೂ ಕೆಲ ಮಕ್ಕಳಿಗೆ ಭಾಷೆ, ಸಮಾಜವಿಜ್ಞಾನ ವಿಷಯಗಳು ಕಠಿಣವೆನಿಸಬಹುದು. ಈ ಅಂಶವನ್ನೂ ಪರಿಗಣಿಸಿ ಯಾವ ವಿಷಯದ ಅಧ್ಯಯನಕ್ಕೆ ಎಷ್ಟು ಆದ್ಯತೆ ನೀಡಬೇಕು ಎಂಬುದನ್ನು ನಿರ್ಧರಿಸಬೇಕು. ಏಕೆಂದರೆ ಪರೀಕ್ಷಾ ಫಲಿತಾಂಶ ಎಲ್ಲ ವಿಷಯಗಳಲ್ಲೂ ಗಳಿಸಿದ ಒಟ್ಟಾರೆ ಅಂಕಗಳನ್ನು ಆಧರಿಸಿ ನಿರ್ಧರಿತವಾಗುತ್ತದೆ.

ಪುನರವಲೋಕನ ಹೀಗಿರಲಿ..

- ಯಾವುದೇ ವಿಷಯದ ಪಠ್ಯಕ್ರಮವನ್ನು ಪುನರಾವಲೋಕಿಸುವ ಮುನ್ನ ಆಯಾ ವಿಷಯದ ಹಳೆಯ ಪ್ರಶ್ನೆಪತ್ರಿಕೆಗಳನ್ನು ತಪ್ಪದೇ ಪುನರಾವಲೋಕಿಸಿ.
- ಆಯಾ ವಿಷಯದಲ್ಲಿ ಮಹತ್ವದ ಅಧ್ಯಾಯಗಳು ಯಾವುವು ಎಂಬುದನ್ನು ಶಿಕ್ಷಕರು, ಹಿರಿಯ ವಿದ್ಯಾರ್ಥಿಗಳಿಂದ ಕೇಳಿ ತಿಳಿದುಕೊಂಡು ಅವುಗಳಿಗೆ ಹೆಚ್ಚಿನ ಆದ್ಯತೆ ನೀಡಿ.
- ಆಯಾ ಅಧ್ಯಾಯಕ್ಕೆ ಸಂಬಂಧಿಸಿದಂತೆ ಕಿರು ಟಿಪ್ಪಣಿಯನ್ನು ರಚಿಸಿಕೊಳ್ಳಿ. ಇದು ಕ್ಷಿಪ್ರ ಪುನರವಲೋಕನಕ್ಕೆ ಅಗತ್ಯ.
- ಶಾಲೆ-ಕಾಲೇಜುಗಳಲ್ಲಿ ಆಯೋಜಿಸಿದ ಪುನರವಲೋಕನ (ರಿವಿಜನ್) ತರಗತಿಗಳಿಗೆ ತಪ್ಪದೇ ಹಾಜರಾಗಿ. ಪಠ್ಯಪುಸ್ತಕ ಅಥವಾ ನೋಟ್ಸ್‌ನಲ್ಲಿ ಮಹತ್ವದ ಅಂಶಗಳ ಕೆಳಗೆ 'ಅಂಡರ್ ಲೈನ್' ಮಾಡಿ. ಅಥವಾ ಹೈಲೈಟಿಂಗ್ ಪೆನ್ ಬಳಸಿ ಗುರುತಿಸಿಟ್ಟುಕೊಳ್ಳಿ.
- ನಿಮ್ಮದೇ ಆದ ತಂತ್ರ, ತಾರ್ಕಿಕತೆ ಬಳಸಿಕೊಂಡು ಅಬ್ರಿವೇಷನ್ಸ್, ಶಾರ್ಟ್ ರೀಡಿಂಗ್, ಮೈಂಡ್‌ಮ್ಯಾಪ್ ರಚಿಸಿಕೊಳ್ಳಿ.
- ಕೆಲ ಕಠಿಣವೆನಿಸುವ ಸೂತ್ರ, ಪ್ರಮೇಯ, ಪದ್ಯಭಾಗಗಳನ್ನು ಕಂಠಪಾಠ ಮಾಡಿಕೊಂಡು ಅವಕಾಶ ಸಿಕ್ಕಾಗ ಅವುಗಳನ್ನು ಮನನ ಮಾಡಿಕೊಳ್ಳುತ್ತಿರಿ.

ಪರೀಕ್ಷೆಗೆ ಬಾಕಿ ಉಳಿದಿರುವ 'ದಿನಗಣನೆಯ ಚಾರ್ಟ್' ಅನ್ನು ಇಳಿಕೆ ಕ್ರಮಾಂಕದಲ್ಲಿ (30, 29, 28, 27…) ಸಿದ್ಧಪಡಿಸಿಕೊಳ್ಳಬೇಕು. ದಿನ ಕಳೆದಂತೆ ಆಯಾ ದಿನವನ್ನು ಕೆಂಪು ಬಣ್ಣದಿಂದ ಹೊಡೆದುಹಾಕಬೇಕು. ಇದು ಪರೀಕ್ಷಾ ದಿನ ಸಮೀಪಿಸುತ್ತಿರುವ ಕುರಿತು ಎಚ್ಚರಿಸುತ್ತದೆ ಹಾಗೂ ಪರೀಕ್ಷೆಯತ್ತ ನಿಮ್ಮ ಮಾನಸಿಕ ಸಿದ್ಧತೆಯನ್ನು ಹೆಚ್ಚಿಸುತ್ತದೆ.

ಇನ್ನೂ ಪರೀಕ್ಷೆ ಆರಂಭವಾದ ದಿನಗಳಲ್ಲಿ ಸಾಮಾನ್ಯವಾಗಿ ಎರಡು ಪರೀಕ್ಷೆಗಳ ನಡುವೆ ಒಂದೆರಡು ದಿನಗಳ 'ಗ್ಯಾಪ್' ನೀಡಲಾಗಿರುತ್ತದೆ. ಈ 'ಗ್ಯಾಪ್'ನಲ್ಲಿ ಮುಂಬರುವ ಪರೀಕ್ಷಾ ವಿಷಯಕ್ಕೆ ಸಂಬಂಧಿಸಿದಂತೆ ನೀವು ಮಾಡಿಕೊಂಡಿರುವ ಆಯಾ ವಿಷಯದ ಕಿರು ಟಿಪ್ಪಣೆಗಳನ್ನು ಪುನರಾವಲೋಕಿಸಿಕೊಳ್ಳಿ. ವಿಷಯಾಂಶಗಳನ್ನು ಕ್ರಮಬದ್ಧವಾಗಿ ಜೋಡಿಸಿ ತಾರ್ಕಿಕ 'ಮೈಂಡ್ ಮ್ಯಾಪಿಂಗ್' ಮಾಡಿಕೊಳ್ಳಿ. ಇದರಿಂದ ಪರೀಕ್ಷೆಯನ್ನು ಸುಲಭವಾಗಿ ಎದುರಿಸಬಹುದು.

ಏರೋಸ್ಪೇಸ್ ಎಂಜಿನಿಯರಿಂಗ್‌ಗೆ ಬೇಡಿಕೆ ಇದೆಯೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

- **ನನ್ನ ಮಗನಿಗೆ ಗಣಿತ ಹಾಗೂ ಕಂಪ್ಯೂಟರ್ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿಯಿದೆ. ಹಾಗಾಗಿ, ಯಾವ ವಿಭಾಗದಲ್ಲಿ ಉನ್ನತ ಶಿಕ್ಷಣ ಮಾಡಬಹುದು?**

ಕವಿತ, ಬಾಳೆಕುಂದ್ರಿ ಕುರ್ದ್

ಈಗ ಎಂಜಿನಿಯರಿಂಗ್‌ನಲ್ಲಿ 55ಕ್ಕೂ ಹೆಚ್ಚಿನ ವಿಭಾಗಗಳಿವೆ. ಗಣಿತ ಮತ್ತು ಕಂಪ್ಯೂಟರ್ ವಿಷಯಗಳಲ್ಲಿ ಸ್ವಾಭಾವಿಕ ಪ್ರತಿಭೆ ಮತ್ತು ಹೆಚ್ಚಿನ ಆಸಕ್ತಿಯಿದ್ದರೆ, ಎಂಜಿನಿಯರಿಂಗ್ (ಗಣಿತ ಮತ್ತು ಕಂಪ್ಯೂಟಿಂಗ್) ಮಾಡಬಹುದು. ಈ ಕೋರ್ಸ್‌ನಲ್ಲಿ ಮುಂಬರುವ ತಂತ್ರಜ್ಞಾನಗಳ ಕುರಿತ ಸಂಶೋಧನೆ, ಅಭಿವೃದ್ಧಿ ಮತ್ತು ನಾವೀನ್ಯಗಳಂಥ ಪ್ರಮುಖವಾದ ವಿಷಯಗಳನ್ನು ಕಲಿಸಲಾಗುತ್ತದೆ. ಪ್ರಸ್ತುತ, ಈ ಕೋರ್ಸ್ ಇಂಡಿಯನ್ ಇನ್‌ಸ್ಟಿಟ್ಯೂಟ್ ಅಫ್ ಸೈನ್ಸ್, ಇಂಡಿಯನ್ ಇನ್‌ಸ್ಟಿಟ್ಯೂಟ್ ಅಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯವಿಶ್ವವಿದ್ಯಾಲಯದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಲಭ್ಯವಿದೆ. ಅಥವಾ, ನಾಲ್ಕು ವರ್ಷದ ಬಿ.ಎಸ್ಸಿ (ಗಣಿತ) ಮಾಡಿ ನೇರವಾಗಿ ಪಿ.ಎಚ್.ಡಿ (ಗಣಿತ) ಮಾಡಬಹುದು.

ಹೆಚ್ಚಿನ ಮಾಹಿತಿಗಾಗಿ, ಈ ವಿಡಿಯೊ ವೀಕ್ಷಿಸಿ: https://www.youtube.com/watch?v = Ly86IyOTYns

- **ನಾನು ಎಂಬಿಎ (ಹಣಕಾಸು ನಿರ್ವಹಣೆ) ಮಾಡುತ್ತಿದ್ದು, ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಹೆಚ್ಚಿನ ಆಸಕ್ತಿಯಿದೆ. ಹಾಗಾಗಿ, ಈ ಕ್ಷೇತ್ರದಲ್ಲಿ ವೃತ್ತಿಯನ್ನು ಅರಸಬಹುದೇ? ಇಲ್ಲದಿದ್ದರೆ, ಹಣಕಾಸು ನಿರ್ವಹಣೆ ಕ್ಷೇತ್ರದಲ್ಲಿನ ಅವಕಾಶಗಳೇನು?**

ಪ್ರಜ್ವಲ್, ಮೈಸೂರು.

ಎಂಬಿಎ (ಹಣಕಾಸು ನಿರ್ವಹಣೆ) ನಂತರ ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಭವಿಷ್ಯವನ್ನು ರೂಪಿಸಿಕೊಳ್ಳಲು ಕಷ್ಟವಾಗುತ್ತದೆ. ಹಾಗಾಗಿ, ಹಣಕಾಸು, ಬ್ಯಾಂಕಿಂಗ್, ಇನ್‌ಶ್ಯೂರೆನ್ಸ್, ಬಂಡವಾಳ ಹೂಡಿಕೆ, ಸ್ಟಾಕ್ ಮಾರ್ಕೆಟ್, ಮ್ಯೂಚುಯಲ್ ಫಂಡ್ಸ್ ಇತ್ಯಾದಿ ಸೇರಿದಂತೆ ಅರ್ಥವ್ಯವಸ್ಥೆಯ ಸರ್ಕಾರಿ ಮತ್ತು ಕಾರ್ಪೊರೇಟ್ ಕ್ಷೇತ್ರದ ಎಲ್ಲಾ ಸಂಸ್ಥೆಗಳ ಹಣಕಾಸು ವಿಭಾಗದಲ್ಲಿ ಉಜ್ವಲವಾದ ಭವಿಷ್ಯವನ್ನು ರೂಪಿಸಿಕೊಳ್ಳಬಹುದು. ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ಎಂಬಿಎ ಪದವಿಯ ಜೊತೆಗೆ ನಿಷ್ಠೆ, ಪ್ರಾಮಾಣಿಕತೆ, ಸಂವಹನ, ಅಂತರ್‌ವೈಯಕ್ತಿಕ ಕೌಶಲ, ಸಂಖ್ಯಾ ಕೌಶಲ, ವಿಶ್ಲೇಷಾತ್ಮಕ ಕೌಶಲ, ಸಮಸ್ಯೆಗಳನ್ನು ಬಗೆಹರಿಸುವ ಕೌಶಲ, ಹಣಕಾಸು ನಿರ್ವಹಣೆ ಮತ್ತು ವ್ಯಾಪಾರೋದ್ಯಮ ಕೌಶಲಗಳನ್ನು ಬೆಳೆಸಿಕೊಳ್ಳಬೇಕು.

- **ಸರ್, ನಾನು ಪಿಯುಸಿ ನಂತರ ಏರೋಸ್ಪೇಸ್ ಎಂಜಿನಿಯರಿಂಗ್ ಮಾಡುವ ಆಸೆಯಿದೆ. ಈ ಕ್ಷೇತ್ರಕ್ಕೆ ಬೇಡಿಕೆಯಿದೆಯೇ?**

ಮೋಕ್ಷಿತ, ಹಾಸನ.

ವಿಮಾನಗಳು, ಹೆಲಿಕಾಪ್ಟರ್‌ಗಳು, ಬಾಹ್ಯಾಕಾಶ ನೌಕೆಗಳು, ಬಾಹ್ಯಾಕಾಶ ನಿಲ್ದಾಣಗಳು, ಉಡಾವಣಾ ವಾಹನಗಳು, ರಾಕೆಟ್‌ಗಳು, ವಾಯುಯಾನ, ಮಿಲಿಟರಿ ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಏರೋಸ್ಪೇಸ್ ಎಂಜಿನಿಯರ್‌ಗಳು ಕಾರ್ಯ ನಿರ್ವಹಿಸಬಹುದು.

ಇನ್ನೂ ಹೆಚ್ಚಿನ ಪರಿಸರಸ್ನೇಹಿ ಇಂಧನಗಳನ್ನು ಬಳಸಬಹುದಾದ ದಕ್ಷ ಎಂಜಿನ್‌ಗಳ ಉತ್ಪಾದನೆ ಮತ್ತು ಬಳಕೆ, ಮುಂತಾದ ಕ್ಷೇತ್ರಗಳಲ್ಲೂ ಅವಕಾಶವಿರುತ್ತದೆ. ಹಾಗಾಗಿ, ಏರೋಸ್ಪೇಸ್ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಬೇಡಿಕೆಯನ್ನು ನಿರೀಕ್ಷಿಸಬಹುದು.

ಈ ಕ್ಷೇತ್ರದಲ್ಲಿ ಯಶಸ್ವಿಯಾಗಲು ನಿರ್ಧಾರಗಳನ್ನು ತೆಗೆದುಕೊಳ್ಳುವ ಕೌಶಲ, ಸಮಸ್ಯೆಗಳನ್ನು ಪರಿಹರಿಸುವ ಕೌಶಲ, ವಿಶ್ಲೇಷಾತ್ಮಕ ಕೌಶಲ, ವಿಮರ್ಶಾತ್ಮಕ ಚಿಂತನೆ, ಗಣಿತ ಮತ್ತು ವಿಜ್ಞಾನದ ವಿಷಯಗಳಲ್ಲಿ ಸ್ವಾಭಾವಿಕ ಪ್ರತಿಭೆ ಮತ್ತು ಪದವಿ ಪರೀಕ್ಷೆಗಳಲ್ಲಿ ಉತ್ಕೃಷ್ಟವಾದ ಫಲಿತಾಂಶವಿರಬೇಕು.

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಸ್ವಾಮಿ ದಯಾನಂದ್ ಮೆರಿಟ್ ಇಂಡಿಯಾ ಸ್ಕಾಲರ್‌ಶಿಪ್

ಸ್ವಾಮಿ ದಯಾನಂದ್ ಎಜುಕೇಷನ್ ಫೌಂಡೇಷನ್ ನೀಡುವ (ಎಸ್‌ಡಿಇಎಫ್) ಉಪಕ್ರಮವಾಗಿದೆ.

- **ಅರ್ಹತೆ:** ಭಾರತದಾದ್ಯಂತ ಸರ್ಕಾರಿ ಅಥವಾ ಖಾಸಗಿ ಕಾಲೇಜುಗಳಲ್ಲಿ ಎಂಜಿನಿಯರಿಂಗ್, ಮೆಡಿಕಲ್ ಅಥವಾ ಆರ್ಕಿಟೆಕ್ಚರ್ ಕೋರ್ಸ್‌ಗಳಿಗೆ ದಾಖಲಾಗಿರಬೇಕು.

ಮೊದಲ ಮತ್ತು ಎರಡನೆಯ ವರ್ಷಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅಭ್ಯರ್ಥಿಗಳು ತಮ್ಮ 12ನೇ ತರಗತಿ ಪರೀಕ್ಷೆಯಲ್ಲಿ ಕನಿಷ್ಠ ಶೇ 80ರಷ್ಟು ಅಂಕ ಗಳಿಸಿರಬೇಕು ಮತ್ತು ಎರಡನೆಯ ವರ್ಷದಲ್ಲಿರುವ ವಿದ್ಯಾರ್ಥಿಗಳು ಕನಿಷ್ಠ ಸಿಜಿಪಿಎ 8.0 ಹೊಂದಿರಬೇಕು. ಅರ್ಹ ವಿದ್ಯಾರ್ಥಿಗಳು 30,000ಕ್ಕಿಂತ ಕೆಳಗಿನ ಜೆಇಇ/ನೀಟ್ ಎಐಆರ್ ಹೊಂದಿರಬೇಕು, ಕುಟುಂಬದ ವಾರ್ಷಿಕ ಆದಾಯ ₹ 15 ಲಕ್ಷಕ್ಕಿಂತ ಕಡಿಮೆ ಇರಬೇಕು. 12ನೇ ತರಗತಿಯನ್ನು ಪೂರ್ಣಗೊಳಿಸಿ ಒಂದು ವರ್ಷಕ್ಕಿಂತ ಹೆಚ್ಚಿನ ಅಂತರ ಆಗಿರಬಾರದು.

- **ಆರ್ಥಿಕ ಸಹಾಯ:** 5,000ಕ್ಕಿಂತ ಕೆಳಗಿನ ಎಐಆರ್ ಇರುವ ವಿದ್ಯಾರ್ಥಿಗಳಿಗೆ ವಾರ್ಷಿಕ ₹ 1 ಲಕ್ಷ.
- 5,000ದಿಂದ 15,000ದ ಒಳಗಿನ ಎಐಆರ್ ಇರುವ ವಿದ್ಯಾರ್ಥಿಗಳಿಗೆ ವಾರ್ಷಿಕ ₹ 75,000.
- 15,000ದಿಂದ 30,000ದ ಒಳಗಿನ ಎಐಆರ್ ಇರುವ ವಿದ್ಯಾರ್ಥಿಗಳಿಗೆ ವಾರ್ಷಿಕ ₹50,000.
- **ಅರ್ಜಿ ಸಲ್ಲಿಸಲು ಕೊನೆ ದಿನ:** 31-12-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/pjvi/SDEFSL1

ಆಮ್ರಾನ್ ಹೆಲ್ತ್‌ಕೇರ್ ಸ್ಕಾಲರ್‌ಶಿಪ್

ಆಮ್ರಾನ್ ಹೆಲ್ತ್‌ಕೇರ್ ಇಂಡಿಯಾವು ಭಾರತದಾದ್ಯಂತ ಯಾವುದೇ ಶಾಲೆಯಲ್ಲಿ 9 ರಿಂದ 12ನೇ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ.

- **ಅರ್ಹತೆ:** ವಿದ್ಯಾರ್ಥಿನಿಯರು ತಮ್ಮ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 75 ಅಂಕಗಳನ್ನು ಪಡೆದಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 8,00,000ಕ್ಕಿಂತ ಕಡಿಮೆಯಿರಬೇಕು.
- **ಆರ್ಥಿಕ ಸಹಾಯ:** ₹20,000(ಒಂದು ಬಾರಿಯ ವಿದ್ಯಾರ್ಥಿವೇತನ)
- **ಅರ್ಜಿ ಸಲ್ಲಿಸಲು ಕೊನೆ ದಿನ:** 10-01-2025
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/pjvi/OMHS2

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಮೈಸೂರಿನ ಒಡೆಯರು ಹಾಗೂ ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಪ್ರಶ್ನೋತ್ತರ:-

26) ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದ ಕುರಿತು ಬರೆಯಿರಿ

ಉತ್ತರ: (.....ಹಿಂದಿನ ಸಂಚಿಕೆಯಿಂದ)

'ಟಿಪ್ಪು ಭಾರತೀಯ ರಾಜರ ಒಕ್ಕೂಟವನ್ನು ತನ್ನಡೆಗೆ ಸೆಳೆಯಲು ಮಾಡುತ್ತಿದ್ದ ಪ್ರಯತ್ನಗಳು ಹಾಗೂ ತಮ್ಮ ಬದ್ಧ ವೈರಿಗಳಾದ ಫ್ರೆಂಚರೊಂದಿಗೆ ಟಿಪ್ಪು ಹೊಂದಿದ್ದ ಸಂಬಂಧಗಳು' ವೆಲ್ಲೆಸ್ಲಿಯಲ್ಲಿ ಟಿಪ್ಪುವಿನ ವಿಚಾರದಲ್ಲಿ ಮತ್ತಷ್ಟು ದ್ವೇಷ ಭಾವನೆಗಳನ್ನು ಬೆಳೆಸಿದವು. ಟಿಪ್ಪು ಬ್ರಿಟಿಷರ ವಿರುದ್ಧವಾಗಿದ್ದ ಫ್ರೆಂಚರ ಸಹಕಾರ ಪಡೆಯಲು ಪ್ರಯತ್ನಿಸಿ ರಾಯಭಾರಿಯನ್ನು ಕಳುಹಿಸಿದ್ದು ಬ್ರಿಟಿಷರಿಗೆ ಅಸಮಾಧಾನವನ್ನು ತಂದಿತು. ಟಿಪ್ಪು ಮತ್ತು ಫ್ರೆಂಚರ ನಡುವಿನ ಸ್ನೇಹ ಮುಂದಕ್ಕೆ ತಮ್ಮ ಅಧಿಪತ್ಯಕ್ಕೆ ಮುಳುವಾಗಬಹುದೆಂಬ ಭಾವನೆಗಳು ಬ್ರಿಟಿಷರಲ್ಲಿ ಬೆಳೆಯಿತು. ಹೊಸ ಷರತ್ತಗಳನ್ನು ಒಳಗೊಂಡಿರುವ ಸಹಾಯಕ ಸೈನ್ಯ ಪದ್ಧತಿಯನ್ನು ಟಿಪ್ಪುವಿನ ಮೇಲೆ ಹೇರಲಾಯಿತು. ಆದರೆ ಟಿಪ್ಪು ಅಮಾನವೀಯ ಸಹಾಯಕ ಸೈನ್ಯ ಪದ್ಧತಿಯನ್ನು ಅದರ ಷರತ್ತುಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿದನು. ಇದರಿಂದಾಗಿ ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧವು ಪ್ರಾರಂಭವಾಯಿತು. 1799ರಲ್ಲಿ ಯುದ್ಧ ಆರಂಭವಾಯಿತು. ಅಭೇದ್ಯವಾದ ಕೋಟೆಯನ್ನು ಬ್ರಿಟಿಷರು ಭೇದಿಸಿದರು. ಎರಡೂ ಸೈನ್ಯಗಳು ವೀರಾವೇಶದಿಂದ ಕಾದಾಡಿದವು. ಟಿಪ್ಪು ತನ್ನ ಸೈನ್ಯವನ್ನು ಹುರಿದುಂಬಿಸುತ್ತಾ ಹೋರಾಡಿ 1799ರಲ್ಲಿ ಹತನಾದನು.

27) ಯಾವ ವರ್ಷ ಬ್ರಿಟಿಷ್ ಸರ್ಕಾರವು ಮೈಸೂರಿನ ಸಿಂಹಾಸನವನ್ನು ಮೈಸೂರಿನ ಅರಸರಿಗೆ(ಒಡೆಯರಿಗೆ) ಬಿಟ್ಟುಕೊಟ್ಟರು?

ಉತ್ತರ:- ಬ್ರಿಟಿಷ್ ಸರಕಾರವು 1881ರಲ್ಲಿ ಮೈಸೂರಿನ ಸಿಂಹಾಸನವನ್ನು ಹತ್ತನೆಯ ಚಾಮರಾಜೇಂದ್ರ ಒಡೆಯರಿಗೆ ವಹಿಸಿತು

26) ಮೈಸೂರಿನ ಸಿಂಹಾಸನವನ್ನು ಅರಸರಿಗೆ ಬಿಟ್ಟುಕೊಟ್ಟಾಗ ದಿವಾನರಾಗಿ ಯಾರನ್ನು ನೇಮಿಸಲಾಗಿತ್ತು?

ಉತ್ತರ:- ಸಿ. ರಂಗಾಚಾರು

27) ಹತ್ತನೆಯ ಚಾಮರಾಜೇಂದ್ರ ಒಡೆಯರ ಕಾಲದಲ್ಲಿ ಆದ ಎರಡು ಅಭಿವೃದ್ಧಿ ಕಾರ್ಯಗಳನ್ನು ಬರೆಯಿರಿ

ಉತ್ತರ:- ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸಿದರು. 1881ರಲ್ಲಿ ಕೋಲಾರದ ಚಿನ್ನದಗಣಿ, 1882ರಲ್ಲಿ ಬೆಂಗಳೂರು-ಮೈಸೂರು ರೈಲು ಮಾರ್ಗವನ್ನು ಆರಂಭಿಸಿದರು

28) ದಿವಾನ್ ರಂಗಾಚಾರ್ಲು ಕಾಲದಲ್ಲಿ ಮೈಸೂರಿನಲ್ಲಿ ಆದ ಒಂದೆರಡು ಅಭಿವೃದ್ಧಿ ಕಾರ್ಯಗಳನ್ನು ತಿಳಿಸಿ

ಉತ್ತರ:- ಮೈಸೂರು ಪ್ರಜಾಪ್ರತಿನಿಧಿ ಸಭೆಯನ್ನು ಪ್ರಾರಂಭಿಸಿದರು. 1881ರಲ್ಲಿ ಕೋಲಾರದ ಚಿನ್ನದಗಣಿ, 1882ರಲ್ಲಿ ಬೆಂಗಳೂರು-ಮೈಸೂರು ರೈಲು ಮಾರ್ಗವನ್ನು ಆರಂಭಿಸಿದರು

29) ದಿವಾನ್ ಕೆ. ಶೇಷಾದ್ರಿ ಅಯ್ಯರ್ ಕಾಲದಲ್ಲಿ ಮೈಸೂರಿನಲ್ಲಿ ಆದ ಅಭಿವೃದ್ಧಿ ಕಾರ್ಯಗಳನ್ನು ಬರೆಯಿರಿ

ಉತ್ತರ:- ರಾಜ್ಯದ ವಿವಿಧ ಅಧಿಕಾರ ಸ್ಥಾನಗಳಲ್ಲಿ ಕೆಲಸ ಮಾಡಿದ ಇವರಿಗೆ ದೇಶದ ಸಮಸ್ತ ಸಮಸ್ಯೆಗಳ ಅರಿವು ಇದ್ದಿತು. ಅವರು ದೇಶದ ಹಣಕಾಸಿನ ಸ್ಥಿತಿಯನ್ನು ಉತ್ತಮಗೊಳಿಸಿದರು. ಹಲವು ಹೊಸ ರೈಲುಮಾರ್ಗಗಳ ರಚನೆಗೆ ಕಾರಣೀಕರ್ತರಾದರು. ದೇಶದ ಆಡಳಿತ ಸೇವೆಗಾಗಿ ಪ್ರತಿಭಾವಂತ ಯುವಕರನ್ನು ಆಯ್ಕೆಮಾಡಲು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಆರಂಭಿಸಿದರು. ನೀರಾವರಿ ವ್ಯವಸಾಯಕ್ಕೆ ಹೆಚ್ಚಿನ ಗಮನ ಕೊಟ್ಟರು. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಗಮನ ನೀಡಲು ಮೈಸೂರಿನಲ್ಲಿ ಮಹಾರಾಣಿ ಬಾಲಿಕಾ ಪ್ರೌಢಶಾಲೆಯನ್ನು ಸ್ಥಾಪಿಸಿದರು.

30) ಮೈಸೂರಿಗೆ ಬಂದಿದ್ದ ವಿವೇಕಾನಂದರಿಗೆ ಆಶ್ರಯ ನೀಡಿ ಅವರು ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ಹೋಗಲು ಸಹಾಯ ಮಾಡಿದವರು ಯಾರು?

ಉತ್ತರ:- ಚಾಮರಾಜೇಂದ್ರ ಒಡೆಯರ್

31) "ಅಭಿನವ ಕಾಳಿದಾಸ" ಯಾರನ್ನು ಕರೆಯಲಾಗಿತ್ತು?

ಉತ್ತರ:- ಬಸಪ್ಪಶಾಸ್ತ್ರಿ

32) ಮೈಸೂರು ರಾಜ್ಯಗೀತೆ "ಕಾಯೋಶ್ರೀ ಗೌರಿ"ಯನ್ನು ರಚಿಸಿದವರು ಯಾರು?

ಉತ್ತರ:- ಬಸಪ್ಪಶಾಸ್ತ್ರಿ

33) ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆ ಏನು?

ಉತ್ತರ:- ಇವರ ಕಾಲದಲ್ಲಿ ಅಭಿವೃದ್ಧಿ ಕಾರ್ಯವು ಹೆಚ್ಚಿತು. ಚಿನ್ನದ ಗಣಿ ಸುಧಾರಣೆ, ಕಾಲೇಜು ಸ್ಥಾಪನೆ, ಮಾರಿಕಣಿವೆ ಜಲಾಶಯ ನಿರ್ಮಾಣ, ರೈಲು ಮಾರ್ಗ ನಿರ್ಮಾಣ, ಆಸ್ಪತ್ರೆ ಸ್ಥಾಪನೆ ಹಾಗೂ ಕಾವೇರಿ ಜಲಪಾತವನ್ನು ಉಪಯೋಗಿಸಿಕೊಂಡು ಶಿವನಸಮುದ್ರದಲ್ಲಿ ಜಲ ವಿದ್ಯುತ್ ಕೇಂದ್ರವನ್ನು ಸ್ಥಾಪಿಸುವ ಕಾರ್ಯಗಳು ಆರಂಭವಾದವು. ಈ ವಿದ್ಯುತ್ ಕೇಂದ್ರದಿಂದ ಕೋಲಾರದ ಚಿನ್ನದ ಗಣಿಗೂ ನಂತರ ಬೆಂಗಳೂರಿಗೂ ವಿದ್ಯುತ್ ಸರಬರಾಜು ಮಾಡಲಾಯಿತು. ಭಾರತದಲ್ಲಿ ವಿದ್ಯುತ್ ಪಡೆದ ನಗರಗಳಲ್ಲಿ ಬೆಂಗಳೂರೇ ಮೊದಲನೆಯದು.

. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಇದರಿಂದ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ಕಿತು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಾಯಿತು. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು 1905ರಲ್ಲಿ ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು. ನೀರಾವರಿ ಸೌಲಭ್ಯಗಳನ್ನೊದಗಿಸಲು ವಿಶೇಷ ಗಮನ ಕೊಡಲಾಯಿತು. ಬೆಳಗೊಳದ ಹತ್ತಿರ ಕಾವೇರಿ ನದಿಗೆ ಅಣೆಕಟ್ಟು ಒಂದನ್ನು ಕಟ್ಟಲಾಯಿತು. ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು. ಅನೇಕ ದೊಡ್ಡ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತು. ಅವುಗಳಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ಸಿಮೆಂಟ್ ಕಾರ್ಖಾನೆ, ಕಾಗದ ಕಾರ್ಖಾನೆ, ಮಂಡ್ಯದ ಸಕ್ಕರೆ ಕಾರ್ಖಾನೆ, ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ, ಬೆಂಗಳೂರಿನ ಸಾಬೂನು ಕಾರ್ಖಾನೆ, ಬೆಳಗೊಳದ ರಾಸಾಯನಿಕ ವಸ್ತುಗಳ ಮತ್ತು ಕೃತಕ ಗೊಬ್ಬರಗಳ ಕಾರ್ಖಾನೆ ಮುಂತಾದವುಗಳು. ನ್ಯಾಯ ವಿಧಾಯಕ ಸಭೆಯನ್ನು ರಚಿಸಲಾಯಿತು. ರಾಜ್ಯಾಂಗದ ಬದಲಾವಣೆಯಲ್ಲಿ ಇದೊಂದು ದೊಡ್ಡ ಹೆಜ್ಜೆಯಾಯಿತು. ಕೃಷ್ಣರಾಜ ಒಡೆಯರು ಸರಳರೂ, ಸಾತ್ವಿಕ ಸ್ವಭಾವದವರೂ, ಸಮರ್ಥ ಆಡಳಿತಗಾರರೂ ಮತ್ತು ವಿದ್ಯಾಪಕ್ಷಪಾತಿಗಳೂ ಆಗಿದ್ದರು. ಅವರಿಗೆ ಲಲಿತಕಲೆಗಳಲ್ಲಿ ತುಂಬಾ ಅಭಿರುಚಿ ಇತ್ತು. ಸಂಗೀತ ವಿದ್ವಾಂಸರುಗಳಿಗೆ ಪ್ರೋತ್ಸಾಹ ನೀಡಿದ್ದರು

34) ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಕಾರ್ಯನಿರ್ವಹಿಸಿದ ಮಹನೀಯರನ್ನು ಹೆಸರಿಸಿ

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC MATHS

VECTOR ALGEBRA

(........Contd)

(2) If $\vec{a}=a_1\hat{i}+a_2\hat{j}+a_3\hat{k}$; $\vec{b}=b_1\hat{i}+b_2\hat{j}+b_3\hat{k}$, then the two vectors $\vec{a}$, $\vec{b}$ are collinear iff

$$b_1\hat{i}+b_2\hat{j}+b_3\hat{k}=\lambda(a_1\hat{i}+a_2\hat{j}+a_3\hat{k})$$
$$=(\lambda a_1)\hat{i}+(\lambda a_2)\hat{j}+(\lambda a_3)\hat{k}$$
$$\Rightarrow b_1=\lambda a_1,\ b_2=\lambda a_2,\ b_3=\lambda a_3$$
$$\Rightarrow \frac{b_1}{a_1}=\frac{b_2}{a_2}=\frac{b_3}{a_3}=\lambda.$$

Problems:-

1. Find the values of x, y and z so that vectors $\vec{a}=x\vec{i}+2\vec{j}+z\vec{k}$ & $\vec{b}=2\vec{i}+y\vec{j}+\vec{k}$ are equal.

Soln :- Since $\vec{a}=x\vec{i}+2\vec{j}+z\vec{k}$ and $\vec{b}=2\vec{i}+y\vec{j}+\vec{k}$ are equal

∴ their corresponding components are equal.

$\therefore x=2, y=2, z=1$

2. Let $\vec{a}=\vec{i}+2\vec{j}$ and $\vec{b}=2\vec{i}+\vec{j}$.

Is $|\vec{a}|=|\vec{b}|$? Are the vectors $\vec{a}$ and $\vec{b}$ equal?

Soln :- $|\vec{a}|=\sqrt{(1)^2+(2)^2}=\sqrt{1+4}=\sqrt{5}$;

$$|\vec{b}|=\sqrt{(2)^2+(1)^2}=\sqrt{4+1}=\sqrt{5}$$
$$\therefore |\vec{a}|=|\vec{b}|$$

But the vectors are not equal.

[∵ their corresponding components are not equal]

3. Find unit vector in the direction of vector $\vec{a}=3\hat{i}-2\hat{j}+6\hat{k}$

Soln :- The unit vector in the direction of $\vec{a}=3\hat{i}-2\hat{j}+6\hat{k}$ is given by-

$$\frac{\vec{a}}{|\vec{a}|}=\frac{3\hat{i}-2\hat{j}+6\hat{k}}{\sqrt{3^2+(-2)^2+6^2}}=\frac{3\hat{i}-2\hat{j}+6\hat{k}}{\sqrt{9+4+36}}=\frac{1}{7}$$
$$=(3\hat{i}-2\hat{j}+6\hat{k})$$
$$\frac{\vec{a}}{|\vec{a}|}=\frac{1}{7}(3\hat{i}-2\hat{j}+6\hat{k})$$

4.(a) Find a vector in the direction of vector $\vec{a}=\hat{i}-2\hat{j}$ that has magnitude 7 units.

Soln:- The unit vector in the direction of the given vector $\vec{a}$ is-

$$\hat{a}=\frac{1}{|\vec{a}|}\vec{a}=\frac{1}{\sqrt{(1)^2+(-2)^2}}(\hat{i}-2\hat{j})$$
$$=\frac{1}{\sqrt{5}}\hat{i}-\frac{2}{\sqrt{5}}\hat{j}$$

∴ the vector having magnitude equal to 7 in the direction of $\vec{a}$, is

$$7\hat{a}=7\left(\frac{1}{\sqrt{5}}\hat{i}-\frac{2}{\sqrt{5}}\hat{j}\right)$$
$$=\frac{7}{\sqrt{5}}\hat{i}-\frac{14}{\sqrt{5}}\hat{j}$$

5. Find the unit vector in the direction of the sum of the vectors

$\vec{a}=2\vec{i}+2\vec{j}-5\hat{k}$ and $\vec{b}=2\hat{i}+\hat{j}+3\hat{k}$

Soln:- The sum of the given vectors is

$$\vec{a}+\vec{b}\ (=\vec{c}\ \text{say})=\left(2\hat{i}+2\hat{j}-5\hat{k}\right)+\left(2\hat{i}+\hat{j}+3\hat{k}\right)$$
$$=4\hat{i}+3\hat{j}-2\hat{k}$$

and $|\vec{c}|=\sqrt{4^2+3^2+(-2)^2}=\sqrt{16+9+4}=\sqrt{29}$

Hence, the required unit vector is $\hat{c}$

$$\hat{c}=\frac{1}{|\vec{c}|}(\vec{c})=\frac{1}{\sqrt{29}}(4\hat{i}+3\hat{j}-2\hat{k})$$
$$=\frac{4}{\sqrt{29}}\hat{i}+\frac{3}{\sqrt{29}}\hat{j}-\frac{2}{\sqrt{29}}\hat{k}$$

6. Write the direction ratios of the vector $\vec{a}=\hat{i}+2\hat{j}-2\hat{k}$ and hence calculate its direction cosines.

Soln:- The direction ratios a, b, c of a vector $\vec{r}=x\hat{i}+y\hat{j}+z\hat{k}$ are just the respective components x, y and z of the vector.

For the given vector a = 1, b = 2, c = -2.

∴ direction ratios are 1, 2, -2.

Further if *l*, *m*, *n* are the direction cosines of the given vector, then

$$l=\frac{a}{|\vec{r}|}$$
$$\therefore l=\frac{1}{\sqrt{1+4+4}}=\frac{1}{3};$$
$$m=\frac{b}{|\vec{r}|}=\frac{2}{3};\quad n=\frac{c}{|\vec{r}|}=-\frac{2}{3}.$$

Hence, the direction cosines are $\frac{1}{3},\frac{2}{3},-\frac{2}{3}$

Vector joining two points

Let $P_1(x_1, y_1, z_1)$ and $P_2(x_2, y_2, z_2)$ be any two points.



Then the vector joining P_1 and P_2 is the vector $\overrightarrow{P_1P_2}$

Join OP_1, OP_2 where O is the origin. By the triangle law, from ΔOP_1P_2,

(Contd……)

ಸಮಾರೋಪದಲ್ಲಿ ಕನ್ನಡ ಕಾಳಜಿ

ಸರ್ಕಾರಗಳ ವಿರುದ್ಧ ಸಿಪಿಕೆ ಅಸಮಾಧಾನ; ಪಬ್ಲಿಕ್ ಶಾಲೆ ಆರಂಭ ಯತ್ನಕ್ಕೆ ಎಚ್‌ಡಿಕೆ ಕ್ಷಮೆಯಾಚನೆ

• ವಿಕ್ರಂ ಕಾಂತಿಕೆರೆ

ಮಂಡ್ಯದಲ್ಲಿ ಭಾನುವಾರ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ‘ಕರ್ನಾಟಕ ರತ್ನ ದೇವೇಗೌಡರು’ ಕೃತಿಯನ್ನು ಆದಿಚುಂಚನಗಿರಿ ಸಂಸ್ಥಾನಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಬಿಡುಗಡೆ ಮಾಡಿದರು. ಶಾಸಕ ದಿನೇಶ್ ಗೂಳಿಗೌಡ, ಜಿಪಂ ಸಿಇಒ ಶೇಖ್ ತನ್ವೀರ್ ಆಸಿಫ್, ವಿನಯ ಗುರೂಜಿ, ಜಿಲ್ಲಾಧಿಕಾರಿ ಕುಮಾರ, ಸಚಿವ ಎನ್‌.ಚಲುವರಾಯಸ್ವಾಮಿ, ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮತ್ತು ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಪಾಲ್ಗೊಂಡರು

ಸಾಹಿತ್ಯ ಸಮ್ಮೇಳನದ ಮೂರೂ ದಿನಗಳಲ್ಲಿ ಪದೇ ಪದೇ ಕೇಳಿಬಂದ ಕನ್ನಡ ಶಾಲೆಗಳ ಕುರಿತ ಕಾಳಜಿಯು ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆಯಲ್ಲಿ ನಡೆದ ಸಮಾರೋಪ ಸಮಾರಂಭದಲ್ಲೂ ಮಾರ್ದನಿಸಿತು. ಕನ್ನಡ ಭಾಷೆಯ ಉಳಿವಿನ ಚಿಂತನೆ ಕುರಿತ ಮಾತುಗಳೂ ಕೇಳಿಬಂದವು.

ಕಾವ್ಯಾತ್ಮಕ ಶೈಲಿಯಲ್ಲಿ ಸಮಾರೋಪ ಭಾಷಣ ಮಾಡಿದ ಸಾಹಿತಿ ಸಿ.ಪಿ ಕೃಷ್ಣಕುಮಾರ್, ‘ಸುವರ್ಣ ಕರ್ನಾಟಕದ ಸಂಭ್ರಮದ ನಡುವೆಯೂ ಸಾಲುಸಾಲು ಸವಾಲುಗಳು ಇದ್ದು ‘ಕಂಗ್ಲಿಷ್’ನಿಂದಾಗಿ ಕನ್ನಡನಾಡು ಕಂಗಾಲಾಗಿದೆ. ರಾಜ್ಯದಲ್ಲಿ ಯಾವ ಸರ್ಕಾರವೂ ಕನ್ನಡದ ಬಗ್ಗೆ ಇಚ್ಛಾಶಕ್ತಿ ತೋರಿಸಿಲ್ಲ. ಕೇಂದ್ರದ ಪಕ್ಷಪಾತ ಧೋರಣೆ ಮತ್ತು ಕನ್ನಡಿಗರ ಆಸಕ್ತಿ ಕೊರತೆಯೂ ಕನ್ನಡ ದುರ್ಬಲಗೊಳ್ಳಲು ಕಾರಣ’ ಎಂದರು.

ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ‘ಕನ್ನಡ ಶಾಲೆಗಳಿಗೆ ಸರ್ಕಾರಗಳಿಂದ ಪ್ರೋತ್ಸಾಹ ಸಿಗುತ್ತಿಲ್ಲ, ನಾನು ಮುಖ್ಯಮಂತ್ರಿಯಾಗಿದ್ದಾಗ 166 ಪ್ರಥಮ ದರ್ಜೆ ಕಾಲೇಜು, 500 ಜೂನಿಯರ್ ಕಾಲೇಜು, 1400 ಹೈಸ್ಕೂಲ್‌ಗಳನ್ನು ಆರಂಭಿಸಿದ್ದು ಪ್ರತಿ ಶಾಲೆಯ ಕಟ್ಟಡಕ್ಕೆ ₹2 ಕೋಟಿ ಅನುದಾನ ನೀಡಲಾಗಿತ್ತು, ಶಿಕ್ಷಕರ ನೇಮಕಾತಿಗೂ ಆದ್ಯತೆ ನೀಡಲಾಗಿತ್ತು’ ಎಂದರು. ‘ಭವಿಷ್ಯದ ಆತಂಕದಿಂದಾಗಿ ಪಾಲಕರು ಮಕ್ಕಳನ್ನು ಇಂಗ್ಲಿಷ್ ಶಾಲೆಗೆ ಕಳುಹಿಸಲು ಬಯಸುತ್ತಾರೆ. ನಾನು ಕೂಡ ಪಬ್ಲಿಕ್ ಶಾಲೆ ಆರಂಭಿಸಲು ಪ್ರಯತ್ನ ಮಾಡಿದ್ದೆ. ಅದಕ್ಕಾಗಿ ಸಮ್ಮೇಳನದ ಅಧ್ಯಕ್ಷರಾದ ಗೊ.ರು.ಚನ್ನಬಸಪ್ಪ ಅವರಲ್ಲಿ ಕ್ಷಮೆ ಕೋರುತ್ತೇನೆ’ ಎಂದು ಅವರು ಹೇಳಿದರು.

‘ಭಾಷೆ ಉಳಿಯಬೇಕಾದರೆ ಸಾಹಿತ್ಯ ಓದಬೇಕು. ಸಾಹಿತ್ಯದ ಸಂಗವಿಲ್ಲದೆ ಈಗ ಸಂಬಂಧಗಳು ಹಾಳಾಗುತ್ತಿವೆ. ಕನ್ನಡ ಚಿತ್ರರಂಗವೂ ಈ ಕುರಿತು ಚಿಂತನೆ ನಡೆಸಬೇಕು’ ಎಂದರು.

ಸರ್ಕಾರದ ಗಮನಕ್ಕೆ ಬರಲಿ: ‘ಸಮ್ಮೇಳನದ ನಿರ್ಣಯಗಳನ್ನು ಸರ್ಕಾರದ ಗಮನಕ್ಕೆ ತರಬೇಕು, ಅನುಷ್ಠಾನದ ಬಗ್ಗೆ ಮುಂದಿನ ಸಮ್ಮೇಳನದಲ್ಲಿ ಮಾಹಿತಿ ನೀಡಬೇಕು’ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಅವರಿಗೆ ಸೂಚಿಸಿದರು.

‘ಸರ್ಕಾರಕ್ಕೆ ಕನ್ನಡ ಶಾಲೆಗಳನ್ನು ಅಭಿವೃದ್ಧಿ ಮಾಡುವ ಉಮೇದು ಇಲ್ಲ. ಶಾಲೆಗಳನ್ನು ಮುಚ್ಚಲು ಹೆದರುತ್ತಿರುವುದರಿಂದ ಉಳಿದುಕೊಂಡಿದೆ’ ಎಂದು ದೂರಿದರು. ಅದಕ್ಕೆ ಉತ್ತರಿಸಿದ ಜಿಲ್ಲ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ, ‘ನಿರ್ಣಯಗಳ ಬಗ್ಗೆ ಚರ್ಚಿಸಲು ನಾಲ್ಕು ದಿನಗಳಲ್ಲಿ ಮುಖ್ಯಮಂತ್ರಿ ಯವರನ್ನು ಭೇಟಿ ಮಾಡಲಾಗುವುದು’ ಎಂದು ತಿಳಿಸಿದರು.

ಬಳ್ಳಾರಿಯಲ್ಲಿ ಮುಂದಿನ ಸಾಹಿತ್ಯ ಸಮ್ಮೇಳನ

ಮಂಡ್ಯ: ಅಖಿಲ ಭಾರತ 87ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಕ್ಕರೆ ನಾಡು ಮಂಡ್ಯದಲ್ಲಿ ಭಾನುವಾರ ತೆರೆ ಬಿದ್ದಿದ್ದು ಮುಂದಿನ ಸಮ್ಮೇಳನ ಬಳ್ಳಾರಿಯಲ್ಲಿ ನಡೆಯಲಿದೆ.

ಭಾನುವಾರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಈ ವಿಷಯವನ್ನು ಪ್ರಕಟಿಸಿದರು.

ನಗರದ ಹೋಟೆಲ್‌ನಲ್ಲಿ ಬೆಳಿಗ್ಗೆ ನಡೆದ ಕಸಾಪ ಜಿಲ್ಲಾ ಘಟಕಗಳ ಪ್ರತಿನಿಧಿಗಳ ಸಭೆಯಲ್ಲಿ ಮುಂದಿನ ಸಮ್ಮೇಳನದ ಸ್ಥಳವನ್ನು ನಿಗದಿ ಮಾಡಲಾಗಿದೆ. ಚಿಕ್ಕಮಗಳೂರು ಮತ್ತು ನವದೆಹಲಿಯಲ್ಲಿ ಸಮ್ಮೇಳನ ಆಯೋಜಿಸುವ ಕುರಿತು ಚರ್ಚೆ ನಡೆದಿದ್ದು ಬಳ್ಳಾರಿ ಜಿಲ್ಲೆಯನ್ನು ಅಂತಿಮಗೊಳಿಸಲಾಯಿತು ಎಂದು ಹೇಳಲಾಗಿದೆ.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿ ಭಾನುವಾರ ನಡೆದ ‘ಸ್ತ್ರೀ ಅಂದರೆ ಅಷ್ಟೆ ಸಾಕೆ?’ ಗೋಷ್ಠಿಯಲ್ಲಿ ಲೇಖಕಿ ತಾರಿಣಿ ಶುಭದಾಯಿನಿ, ಸುಮತಿ ಜೆ., ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ, ಸಾಹಿತಿ ಹೇಮಾ ಪಟ್ಟಣಶೆಟ್ಟಿ, ಶುಭಶ್ರೀ ಪ್ರಸಾದ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

‘ಪುರುಷ ಹೇರಿದ ಆದರ್ಶಗಳ ಭಾರಕ್ಕೆ ನಲುಗಿದ ಹೆಣ್ಣು’

• ಸಿದ್ದು ಆರ್‌.ಜಿ.ಹಳ್ಳಿ

‘ಸ್ತ್ರೀ ಎಂದರೆ ಇಂತಿಂಥ ಗುಣಗಳಿರಬೇಕು ಎಂದು ಪುರುಷರು ಆದರ್ಶಗಳನ್ನು ಹೇರುತ್ತಾರೆ. ಭ್ರೂಣ ಪತ್ತೆ ಪ್ರಕರಣಗಳು ಹೆಚ್ಚುತ್ತಲೇ ಇವೆ. ಬಯಸಿದ ಹೆಣ್ಣು ಸಿಗದಿದ್ದಾಗ ಆ್ಯಸಿಡ್ ದಾಳಿ ನಡೆಸುತ್ತಾರೆ. ಶೀಲದ ಅಸ್ತ್ರ ಹೂಡಿ ಬೆದರಿಸುತ್ತಾರೆ. ದೆಹಲಿಯಲ್ಲಿ ವೈದ್ಯೆ ಮೇಲೆ ಪೈಶಾಚಿಕ ಕೃತ್ಯ ನಡೆಸಿದ್ದಾರೆ. ಮಣಿಪುರದಲ್ಲಿ ನಡುರಸ್ತೆಯಲ್ಲಿ ಹೆಣ್ಣನ್ನು ಬೆತ್ತಲಾಗಿಸಿ, ಅವಮಾನ ಮಾಡಿದ್ದಕ್ಕೆ ಇಡೀ ನಾಗರಿಕ ಸಮಾಜ ತಲೆತಗ್ಗಿಸಬೇಕು..’

ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯಲ್ಲಿ ಭಾನುವಾರ ನಡೆದ ‘ಸ್ತ್ರೀ ಅಂದರೆ ಅಷ್ಟೆ ಸಾಕೇ?’ ಗೋಷ್ಠಿಯಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಕಂಡುಕೊಳ್ಳಬೇಕಾದ ಪರಿಹಾರಗಳು ಅನಾವರಣಗೊಂಡವು.

‘ಪುರುಷ ಪ್ರಧಾನ ಸಮಾಜ ಹೊರಿಸಿರುವ ಆದರ್ಶಗಳ ಭಾರಕ್ಕೆ ಹೆಣ್ಣು ನಲುಗಿ ಹೋಗಿದ್ದಾಳೆ. ಎಲ್ಲ ರಂಗಗಳಲ್ಲೂ ಹೆಣ್ಣಿನ ಮೇಲೆ ದಬ್ಬಾಳಿಕೆ, ಶೋಷಣೆ ನಡೆಯುತ್ತಲೇ ಇದೆ. ಸ್ತ್ರೀ ತಲ್ಲಣಗಳಿಗೆ ನೂರೆಂಟು ಆಯಾಮಗಳಿವೆ’ ಎಂದು ಕವಯತ್ರಿ ಶುಭಶ್ರೀ ಪ್ರಸಾದ್ ಹೇಳಿದರು.

ಹತ್ಯೆ ಮಾಡುವ ಅಧಿಕಾರ: ಲೇಖಕಿ ತಾರಿಣಿ ಶುಭದಾಯಿಣಿ ಮಾತನಾಡಿ, ‘ತಪ್ಪು ಮಾಡಿದ ಹೆಣ್ಣಿಗೆ ಶಿಕ್ಷೆ ನೀಡುವ ಅಧಿಕಾರವನ್ನು ಪುರುಷ ಪ್ರಧಾನ ಸಮಾಜ ಸೃಷ್ಟಿಸಿಕೊಂಡಿದೆ. ನ್ಯಾಯದ ಹೆಸರಿನಲ್ಲಿ ‘ಪಂಚಾಯಿತಿ’ ನಡೆಸುವವರೆಲ್ಲರೂ ಗಂಡಸರೇ ಆಗಿದ್ದಾರೆ. ರೂಢಿಗತ ಮೌಲ್ಯ ಮೀರುವ ಹೆಣ್ಣನ್ನು ‘ಶುದ್ಧೀಕರಣ’ ಹೆಸರಿನಲ್ಲಿ ಹತ್ಯೆ ಮಾಡಲಾಗುತ್ತಿದೆ. ಮರ್ಯಾದೆ ಹತ್ಯೆ ಹೆಸರಿನಲ್ಲಿ ನಡೆಯುವ ಈ ಕೃತ್ಯಗಳನ್ನು ತಡೆಗಟ್ಟಬೇಕು’ ಎಂದರು.

> **ದೇಶದಲ್ಲಿ 6 ಕೋಟಿ ಹೆಣ್ಣು ಭ್ರೂಣ ಹತ್ಯೆಗಳಾಗಿರುವುದು ಕಳವಳಕಾರಿ. ಕಿರುಕುಳವಾದಾಗ ಹೆಣ್ಣುಮಕ್ಕಳು ಪೊಲೀಸರಿಗೆ ದೂರು ನೀಡಿ, ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಿ**
> **ನಾಗಲಕ್ಷ್ಮಿ ಚೌಧರಿ,**
> ರಾಜ್ಯ ಮಹಿಳಾ ಆಯೋಗ

> **ಗಂಡು ಆಳ್ವಿಕೆ ವ್ಯವಸ್ಥೆಯಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಹೆಣ್ಣು ಅನ್ಯಾಯವನ್ನು ಹೇಳಿಕೊಳ್ಳಲು ಬಾಯಿ ಇಲ್ಲದಂತಾಗಿದೆ**
> **ಹೇಮಾ ಪಟ್ಟಣಶೆಟ್ಟಿ**
> ಕವಯತ್ರಿ

ಸಮ್ಮಾನ, ಪ್ರತಿಭಟನೆ ಜಂಟಿಯಾನ

ಒಂದನೇ ಪುಟದಿಂದ..

ಗಡಿನಾಡ ಕನ್ನಡಿಗರು ಶಿಕ್ಷಣ–ಉದ್ಯೋಗದಲ್ಲಿ ಮೀಸಲಾತಿ ಅವಕಾಶಗಳಿಗಾಗಿ ಪ್ರತಿಭಟಿಸಿದರು. ‘ಮಹಾರಾಷ್ಟ್ರ, ಕೇರಳ ಕನ್ನಡಿಗರಿಗೆ ಇರುವ ಮೀಸಲಾತಿ ನಮಗೇಕೆ ಇಲ್ಲ’ ಎಂದು ಪ್ರಶ್ನಿಸಿ ‘ಸರ್ಕಾರದ ತಾರತಮ್ಯ ನೀತಿ’ಯನ್ನು ಪ್ರಶ್ನಿಸಿದರು.

ಕಲ್ಪವೃಕ್ಷವಾಗದ ಕೈ: ಸಮ್ಮೇಳನದ ಪ್ರಧಾನ ವೇದಿಕೆಯ ಮುಂಭಾಗ ನಿಂತ ಗಡಿನಾಡ ಕನ್ನಡಿಗರಾದ ಕೆ.ಆರ್‌.ನಾಗರಾಜಶೆಟ್ಟಿ, ಎಚ್‌. ವೈ.ಶೇಷಾದ್ರಿ ಹಾಗೂ ಜೊತೆಗಾರರು, ‘ಕನ್ನಡಕ್ಕಾಗಿ ಕೈ ಎತ್ತಿದ್ದೇವೆ, ನಮ್ಮ ಕೈ ಇನ್ನೂ ಕಲ್ಪವೃಕ್ಷವಾಗಿಲ್ಲ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು. ‘ಆಂಧ್ರ ಪ್ರದೇಶದ ಗಡಿನಾಡ ಕನ್ನಡಿಗರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡಿ’, ‘ನಮ್ಮ ತನು, ಮನ, ಭಾಷೆ, ಬದುಕು ಕನ್ನಡ. ಆದರೆ ನಾವೇಕೆ ಕನ್ನಡಿಗರಲ್ಲ?’, ‘ಹೊರರಾಜ್ಯದಲ್ಲಿದ್ದರೂ ನಾವು ಕನ್ನಡವನ್ನು ಕಾಪಾಡುತ್ತಿದ್ದೇವೆ, ನಾವೇಕೆ ನಿಮಗೆ ಕಾಣುತ್ತಿಲ್ಲ?’, ‘ಸ್ವಾಮೀ, ನಾವೂ ಕನ್ನಡಿಗರೇ, ನಮ್ಮನ್ನು ಗುರುತಿಸಿ’ ಎಂಬ ಫಲಕಗಳನ್ನು ಪ್ರದರ್ಶಿಸಿದರು.

ಉತ್ಸಾಹ ತುಂಬಿದ ಗೊರುಚ: 94ರ ವಯಸ್ಸಿನಲ್ಲೂ ಗೋಷ್ಠಿಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ, ಸಂಪನ್ಮೂಲ ವ್ಯಕ್ತಿಗಳೊಂದಿಗೆ ವೇದಿಕೆಯಲ್ಲೇ ಸಮಾಲೋಚಿಸಿ, ಗೋಷ್ಠಿಗಳ ಗುಣಮಟ್ಟ ವೃದ್ಧಿಗೂ ಸದ್ದಿಲ್ಲದೆ ಕೊಡುಗೆ ನೀಡಿದ್ದು ವಿಶೇಷ.

ವಹಿವಾಟಿಗೆ ತೊಡಕು: ನೂರಾರು ಪುಸ್ತಕ ಮಳಿಗೆ, ವಾಣಿಜ್ಯ ಮಳಿಗೆಗಳನ್ನು ಸ್ಥಾಪಿಸಿದ್ದ ಪರಿಷತ್ತು, ಇಂಟರ್‌ನೆಟ್ ವ್ಯವಸ್ಥೆಯನ್ನು ಕಲ್ಪಿಸದೇ ಇದ್ದುದು ಆನ್‌ಲೈನ್ ಹಣ ಸಂದಾಯ ಹಾಗೂ ಖರೀದಿ ವಹಿವಾಟಿಗೆ ಕೊಂಚ ತೊಡಕಾಗಿತ್ತು.

ವಿಶ್ವ ಸಮ್ಮೇಳನ ಆಯೋಜನೆ 5 ನಿರ್ಣಯಗಳ ಮಂಡನೆ

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾನುವಾರ ನಡೆದ ಬಹಿರಂಗ ಅಧಿವೇಶನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಪಟೇಲ್ ಪಾಂಡು ಅವರು ಐದು ನಿರ್ಣಯಗಳನ್ನು ಮಂಡಿಸಿದರು

1) ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022ರ ಎಲ್ಲ ಉಪ– ಬಂಧಗಳು ಮತ್ತು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮವನ್ನು ಸಮಗ್ರವಾಗಿ ಕೂಡಲೇ ಅನುಷ್ಠಾನಗೊಳಿಸಬೇಕು. ಅಧಿನಿಯಮದ ರಾಜ್ಯ ಮಟ್ಟದ ಸಮಿತಿಯ ಉಪಾಧ್ಯಕ್ಷರನ್ನಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರನ್ನು ನೇಮಿಸಲು ತಿದ್ದುಪಡಿ ತರಬೇಕು
2) ರಾಜ್ಯದ ಎಲ್ಲ ಸರ್ಕಾರಿ ಕನ್ನಡ ಶಾಲೆಗಳಿಗೆ ಕಟ್ಟಡ, ವಾಚನಾಲಯ, ಆಟದ ಮೈದಾನ ಸೇರಿದಂತೆ ಮೂಲಸೌಕರ್ಯಗಳನ್ನು ಒದಗಿಸಬೇಕು. ಶಿಕ್ಷಕರ ಹುದ್ದೆಗಳ ಭರ್ತಿಗೆ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು. ಕನ್ನಡೇತರ ಶಾಲೆಗಳಿಗೆ ಕನ್ನಡ ಶಿಕ್ಷಕರನ್ನು ಕಡ್ಡಾಯವಾಗಿ ನೇಮಿಸಬೇಕು
3) ಕನ್ನಡ ಅನ್ನದ ಭಾಷೆಯಾಗಲು, ಕನ್ನಡಿಗರ ಉದ್ಯೋಗಕ್ಕೆ ತಡೆಯಾಗಿ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸರ್ಕಾರ ಸಮರ್ಪಕವಾಗಿ ಎದುರಿಸಬೇಕು. ಸರೋಜಿನಿ ಮಹಿಷಿ ವರದಿಯನ್ನು ಅನುಷ್ಠಾನಗೊಳಿಸಬೇಕು
4) ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ ಅತಿ ಶೀಘ್ರದಲ್ಲಿ ನಡೆಸಬೇಕು
5) ರಾಷ್ಟ್ರಕವಿಯನ್ನು ಅತಿ ಶೀಘ್ರ ಘೋಷಿಸಬೇಕು

ಒಂದು ಬಾಯಿಗೆ ಹಾಲು, ಮತ್ತೊಂದಕ್ಕೆ ವಿಷ ಕೊಟ್ಟರೆ ಸಾವು ಖಚಿತ

‘ಅಲ್ಪಸಂಖ್ಯಾತ, ಬಹುಸಂಖ್ಯಾತ ಗಂಡಭೇರುಂಡದಂತೆ’

‘ಅಲ್ಪಸಂಖ್ಯಾತ, ಬಹುಸಂಖ್ಯಾತ ಎಂಬುದು ಗಂಡಭೇರುಂಡದಂತೆ. ಒಂದು ಬಾಯಲ್ಲಿ ಹಾಲು, ಇನ್ನೊಂದು ಬಾಯಲ್ಲಿ ವಿಷ ಕೊಟ್ಟರೆ ವಿಷವಷ್ಟೇ ಒಳಗೆ ಹೋಗಿ ಸಾವುಂಟಾಗುತ್ತದೆ. ಸಮಾಜದಲ್ಲೂ ವಿಷ ಹೆಚ್ಚಾಗಿದೆ’ ಎಂದು ಸಂಸ್ಕೃತಿ ಚಿಂತಕ ಕೆ.ಎಂ. ಅಬೂಬಕ್ಕರ್ ಸಿದ್ದಿಕ್, ಸಮಕಾಲೀನ ಸಂದರ್ಭದಲ್ಲಿ ಕೋಮುಸೌಹಾರ್ದಕ್ಕೆ ಎದುರಾದ ಆತಂಕಗಳತ್ತ ಗಮನ ಸೆಳೆದರು

ಕರ್ನಾಟಕ ಚಕ್ರವರ್ತಿ ಚಿಕ್ಕದೇವರಾಯ ಒಡೆಯರ್ ವೇದಿಕೆಯಲ್ಲಿ ಭಾನುವಾರ, ‘ಸಮಾನತೆ ಸಾರಿದ ದಾರ್ಶನಿಕರು’ ಕುರಿತ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕುತ್ಸಿತ ಬುದ್ಧಿಯ ಜನರಿಂದ ಸಮಾಜದಲ್ಲಿ ಅಪನಂಬಿಕೆ, ಒಡಕು ಉಂಟಾಗಿದೆ’ ಎಂದು ಬೇಸರಿಸಿದರು.

‘ದಾರ್ಶನಿಕರ ತತ್ವ ಸಿದ್ಧಾಂತಗಳು ಇಂದಿಗೂ ಜೀವಂತವಿದ್ದು, ಅವುಗಳನ್ನು ಬಳಸಿಕೊಂಡು ಸಮಾನತೆಯ ಆಶಯ ಬಿಂಬಿಸಬೇಕು. ಧರ್ಮಗಳ ಗುರಿ ಸಮಾನತೆ. ದಾರ್ಶನಿಕರು ಕೂಡ ಅದನ್ನೇ ಹೇಳಿದ್ದಾರೆ. ಕುಲ–ಗೋತ್ರ ಕೇವಲ ಗುರುತು ಪತ್ತೆಗಷ್ಟೇ ಎಂಬುದನ್ನ ಕುರಾನ್ ಹಾಗೂ ಭಗವದ್ಗೀತೆ ಧ್ವನಿಸಿದೆ. ಮೇಲ್ವರ್ಗದಲ್ಲಿ ಜನಿಸಿದರೂ ಎಲ್ಲರನ್ನು ಸಮಾನವಾಗಿ ಕಂಡ ಬಸವಣ್ಣನ ಬದುಕು ದೊಡ್ಡ ಆದರ್ಶ’ ಎಂದರು.

‘ದಾರ್ಶನಿಕರಲ್ಲಿ ಸಾಮ್ಯತೆ ಇದೆ. ಕಳಬೇಡ ಕೊಲಬೇಡವೆಂದ ಬಸವಣ್ಣನ ಸೂತ್ರಗಳನ್ನು ಹೋಲುವ ಸಿದ್ಧಾಂತ ಕುರಾನ್‌ನಲ್ಲೂ ಇದೆ. ಪೈಗಂಬರರ ವಚನಗಳಲ್ಲೂ ಇದೆ. ಕರ್ನಾಟಕದಲ್ಲಿ ನಡೆದ ಸಮಾನತೆಯ ಕ್ಷಿಪ್ರ ಕ್ರಾಂತಿಯಲ್ಲಿ ಸೂಫಿ ಸಂತರು ಪ್ರಮುಖ ಪಾತ್ರ ವಹಿಸಿದ್ದರು’ ಎಂದರು.

‘ಸಾಂಸ್ಕೃತಿಕ ನಾಯಕ ಬಸವಣ್ಣ’ ಕುರಿತು ಮಾತನಾಡಿದ ಶಿವರುದ್ರ ಸ್ವಾಮೀಜಿ, ‘ಮನುಷ್ಯ, ಕತ್ತೆ, ನಾಯಿ, ಹಕ್ಕಿ ಇತ್ಯಾದಿ ಎಂಬ ಭೇದವೇ ಜಾತಿ. ಅದು ಬದಲಾಗುವುದಿಲ್ಲ. ಅದನ್ನು ತಿಳಿಯದೇ ಬದುಕುತ್ತಿರುವುದೇ ಅಸಮಾನತೆಗೆ ಕಾರಣ’ ಎಂದರು.

‘ಸಾಮರಸ್ಯ ಮೆರೆದ ದಾಸವರೇಣ್ಯರು’ ಕುರಿತು ಮಾತನಾಡಿದ ಎನ್‌.ಆರ್ ಲಲಿತಾಂಬ, ‘ದೇಶದಲ್ಲಿ ಈಚೆಗೆ ಸಾಮರಸ್ಯಕ್ಕೆ ಭಾರಿ ತೊಡಕುಂಟಾಗಿದೆ. ಅಧಿಕಾರ, ಸಂಪತ್ತಿನ ದಾಹದಿಂದ ಸೃಷ್ಟಿಯಾಗುತ್ತಿರುವ ಹಠಮಾರಿತನವು ರಾಜ್ಯದಲ್ಲಿ ಸಂಘರ್ಷಕ್ಕೆ ಪ್ರಮುಖ ಕಾರಣವಾಗುತ್ತಿದೆ’ ಎಂದರು.

ಚಿಂತಕ ಶಂಕರ ದೇವನೂರು ಅಧ್ಯಕ್ಷತೆ ವಹಿಸಿದ್ದರು.

‘ದೇವರಮನೆ ಮಕ್ಕಳೆಂದು ತಿಳಿಯಿರಿ’

‘ಸಮಾನತೆ ಸಾರಿದ ದಾರ್ಶನಿಕರು’ ಗೋಷ್ಠಿಯಲ್ಲಿ ಕೆ.ಎಂ. ಅಬೂಬಕ್ಕರ್ ಸಿದ್ದಿಕ್ ಮಾತನಾಡಿದರು ಪ್ರಜಾವಾಣಿ ಚಿತ್ರ

ಕುತ್ಸಿತ ಮನಸ್ಥಿತಿಯ ವ್ಯಕ್ತಿಗಳು ಅಥವಾ ರಾಜಕಾರಣಿಗಳು ಸೃಷ್ಟಿಸುತ್ತಿರುವ ಅಪನಂಬಿಕೆಯಿಂದಾಗಿ ಸಮಾಜದಲ್ಲಿ ಸಾಮರಸ್ಯ ಕಡಿಮೆಯಾಗುತ್ತಿದೆ. ಎಲ್ಲರೂ ದೇವರ ಮನೆಯ ಮಕ್ಕಳು ಎಂದು ತಿಳಿದುಕೊಂಡು ಬದುಕಿದರೆ ಸಮಾನತೆ ಸಾಧ್ಯವಾಗಲಿದೆ ಎಂದು ಅಬೂಬಕ್ಕರ್ ಸಿದ್ದಿಕ್ ಹೇಳಿದರು.

ದಾರ್ಶನಿಕರು ಸಾರಿದ ದರ್ಶನ ಬೇರೆ, ಪ್ರದರ್ಶನ ಬೇರೆ. ಈಗ ಪ್ರದರ್ಶನವೇ ಹೆಚ್ಚಾಗಿದೆ ಎಂದು ಶಿವರುದ್ರ ಸ್ವಾಮೀಜಿ ಹೇಳಿದರು. ದಾಸವರೇಣ್ಯರು ಹಾಡುಗಳ ಮೂಲಕ ಸಾಮರಸ್ಯಕ್ಕೆ ಯತ್ನಿಸಿದರು. ಅವರ ದೃಷ್ಟಿಯಲ್ಲಿ ಸಮರಸ ಭಾವವೇ ಸಾಮರಸ್ಯ. ಅದು ಸಮರ ಭಾವ ಅಗದಂತೆ ನೋಡಿಕೊಳ್ಳಬೇಕಾಗಿದೆ ಎಂದು ಎನ್‌.ಆರ್ ಲಲಿತಾಂಬ ಆಶಿಸಿದರು.

ಲಿಂಗತ್ವ ಅಲ್ಪಸಂಖ್ಯಾತರಿಗೆ ಗೋಷ್ಠಿ ಮೀಸಲಿಡಿ

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಒತ್ತಾಯ

• ಮೋಹನ್ ಕುಮಾರ ಸಿ.

ಕರ್ನಾಟಕ ಚಕ್ರವರ್ತಿ ಚಿಕ್ಕದೇವರಾಜ ಒಡೆಯರ್ ವೇದಿಕೆಯಲ್ಲಿ ಭಾನುವಾರ ನಡೆದ ‘ಪುನಶ್ಚೇತನವಾಗಬೇಕಾಗಿರುವ ಸಾಹಿತ್ಯ ಪ್ರಕಾರಗಳು’ ಗೋಷ್ಠಿಯಲ್ಲಿ ‘ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಸಾಹಿತ್ಯ’ ಕುರಿತು ಅಕ್ಕೈ ಪದ್ಮಶಾಲಿ ಮಾತನಾಡಿದರು —ಪ್ರಜಾವಾಣಿ ಚಿತ್ರ

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೂ ಪ್ರತ್ಯೇಕ ಪ್ರಾತಿನಿಧ್ಯ ನೀಡಬೇಕೆಂಬ ಆಗ್ರಹಕ್ಕೆ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ದನಿಗೂಡಿಸಿತು.

ಲಿಂಗತ್ವ ಅಲ್ಪಸಂಖ್ಯಾತರ ಪರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ, ‘88ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಮ್ಮ ಸಮುದಾಯದವರದ್ದೇ ವಿಶೇಷ ಗೋಷ್ಠಿ ಏರ್ಪಡಿಸಬೇಕು. ಅಧ್ಯಕ್ಷೆಯಾಗಿ ನಾನು ಮಾತನಾಡಬೇಕು. ಅದನ್ನು ನೀವು ಕೇಳಬೇಕು’ ಎಂದಾಗ ನೆರೆದ ಸಭಿಕರು ಚಪ್ಪಾಳೆ ಹೊಡೆದು ಬೆಂಬಲಿಸಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕರ್ನಾಟಕ ಚಕ್ರವರ್ತಿ ಚಿಕ್ಕದೇವರಾಜ ಒಡೆಯರ್ ವೇದಿಕೆಯಲ್ಲಿ ಭಾನುವಾರ ನಡೆದ ‘ಪುನಶ್ಚೇತನವಾಗಬೇಕಾಗಿರುವ ಸಾಹಿತ್ಯ ಪ್ರಕಾರಗಳು’ ಗೋಷ್ಠಿಯಲ್ಲಿ ‘ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಸಾಹಿತ್ಯ’ ಕುರಿತು ಮಾತನಾಡಿ, ‘ಸಮ್ಮೇಳನದಲ್ಲಿ ನಾಮ್‌ಕಾವಸ್ತೆ ಲಿಂಗತ್ವ ಅಲ್ಪಸಂಖ್ಯಾತರ ಪ್ರಾತಿನಿಧ್ಯ ನೀಡುವುದನ್ನು ನಾವು ಬಿಲ್‌ಕುಲ್ ಒಪ್ಪುವುದಿಲ್ಲ. ಹೀಗಾಗಿ ವಿಶೇಷ ಗೋಷ್ಠಿ ಏರ್ಪಡಿಸಲಿ’ ಎಂದರು.

‘ಹರಿಹರ ಪುತ್ರ ಅಯ್ಯಪ್ಪ, ಅರ್ಧನಾರೀಶ್ವರನಿಗೆ ನಮಸ್ಕರಿಸುತ್ತಾರೆ. ನಮ್ಮನ್ನು ಮಾತ್ರ ಬಹಿಷ್ಕರಿಸುತ್ತಾರೆ’ ಎಂದ ಅವರು, ಲಿಂಗತ್ವ ಅಲ್ಪಸಂಖ್ಯಾತ ಕವಯತ್ರಿ ಮಾಳವಿಕಾ ಅವರ ಕವಿತೆಯನ್ನು ಓದಿದ್ದು ವಿಶೇಷವಾಗಿತ್ತು.

‘ಯೋನಿ, ಗರ್ಭವೇ ಇಲ್ಲದಿದ್ದರೂ ನಾನು ಹೆಣ್ಣು ಎಂಬುದಕ್ಕೆ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯವೇ ಸಾಕ್ಷಿ. ವಿಶ್ವದಲ್ಲಿ 25ಕ್ಕೂ ಹೆಚ್ಚು ಲೈಂಗಿಕ ಅಲ್ಪಸಂಖ್ಯಾತ ಮಹಿಳೆಯರು ಮತ್ತು ಪುರುಷರು ತಮ್ಮ ಜೀವನ ಚರಿತ್ರೆ ಬರೆದಿದ್ದಾರೆ. ನಮಗೆ ಅಯ್ಯೋ ಪಾಪ ಎಂಬ ಕರುಣೆ ಬೇಕಿಲ್ಲ. ಎಲ್ಲರ ಪಕ್ಕದಲ್ಲಿ ಕೂರುವ ಸಮಾನ ಹಕ್ಕು ಬೇಕು. ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಸಶಕ್ತಗೊಳಿಸಲು ಕೆಲಸ ಮಾಡಬೇಕು’ ಎಂದರು.

‘ಲಿಂಗತ್ವ ಮಡಿವಂತಿಕೆಯನ್ನು ಒಡೆದುಹಾಕಬೇಕೆಂಬ ವಿಚಾರಗಳನ್ನು ಪದೇಪದೇ ಹೇಳದಿದ್ದರೆ ಯಾವುದೂ ಬದಲಾಗುವುದಿಲ್ಲ’ ಎಂದ ಅವರು, ತಮ್ಮ ಹೆಸರನ್ನು ತಪ್ಪಾಗಿ ಸ್ಕ್ರೀನ್‌ನಲ್ಲಿ ಪ್ರದರ್ಶಿಸಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

‘ಕಾಂಗ್ರೆಸ್ ಪ್ರಚಾರ ವೇದಿಕೆಯಾದ ಸಾಹಿತ್ಯ ಸಮ್ಮೇಳನ’

ಬೆಂಗಳೂರು: ‘ಮಂಡ್ಯದಲ್ಲಿ ನಡೆದ ಸಾಹಿತ್ಯ ಸಮ್ಮೇಳನವು ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಭಾಷೆ ವಿಷಯಗಳಿಗೆ ಪ್ರಾಮುಖ್ಯತೆ ಪಡೆಯದೇ ಕಾಂಗ್ರೆಸ್ ಸರ್ಕಾರದ ರಾಜಕೀಯ ಪ್ರಚಾರ ವೇದಿಕೆಯಾಗಿ ಮಾರ್ಪಟ್ಟಿದ್ದು ನೋವಿನ ಸಂಗತಿ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉದ್ಘಾಟನಾ ಭಾಷಣ ಕನ್ನಡದ ಬೆಳವಣಿಗೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಮಾತುಕತೆ ನಡೆಸುವ ಬದಲು ಕೇಂದ್ರ ಸರ್ಕಾರದ ತೆರಿಗೆ ಹಂಚಿಕೆ, ಮನುಸ್ಮೃತಿಯ ವಿವಾದ, ಹಿಂದಿ ಪ್ರಭಾವದ ವಿಚಾರಗಳತ್ತ ಮುಖ ಮಾಡಿತ್ತು. ರಾಜಕೀಯ ಚರ್ಚೆಗಳನ್ನು ಸಾಹಿತ್ಯದ ವೇದಿಕೆಗೆ ತಂದಿದ್ದು ಖಂಡನೀಯ’ ಎಂದು ತಿಳಿಸಿದ್ದಾರೆ.

‘ದಿವಾಳಿಯತ್ತ ಭಾರತ ಎಂಬ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆಯ ಉದ್ದೇಶವೂ ರಾಜಕೀಯ ಪ್ರೇರಿತವಾಗಿತ್ತು. ದಿವಾಳಿ ಎಂಬಂತೆ ದೇಶದ ಸ್ಥಿತಿಯನ್ನು ಬಿಂಬಿಸಿ, ಪ್ರಧಾನಿ ಮೋದಿಯವರಿಗೆ ಅಪಮಾನವಾಗುವಂತೆ ಬಿಂಬಿಸಿದ್ದಾರೆ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಬ್ರಿಟನ್ ಕನ್ನಡಿಗರ ಕೂಟದ ಅಶ್ವಿನ್ ಶೇಷಾದ್ರಿ ಪ್ರತಿಪಾದನೆ

‘ಭಾಷೆ ಸಂರಕ್ಷಣೆಗೆ ಚೀನಾ ಮಾದರಿ’

• ಜಯಸಿಂಹ.ಆರ್

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ ‘ವಿಶ್ವ ಕನ್ನಡ ಕೂಟಗಳ ಕೈಪಿಡಿ’ಯನ್ನು ಬಿಡುಗಡೆ ಮಾಡಿದರು —ಪ್ರಜಾವಾಣಿ ಚಿತ್ರ

‘ಕನ್ನಡ ಎದುರಿಸುತ್ತಿರುವ ಬಿಕ್ಕಟ್ಟುಗಳ ನಿವಾರಣೆಗೆ ಚೈನಾ ಸೇರಿದಂತೆ ಕೆಲವು ವಿದೇಶಗಳಲ್ಲಿ ಪರಿಹಾರಗಳಿವೆ. ಭಾಷೆ ಸಂರಕ್ಷಣೆಯಲ್ಲಿ ಚೈನಾ ಉತ್ತಮ ಮಾದರಿ’ ಎಂದು ಬ್ರಿಟನ್ ಕನ್ನಡಿಗರ ಕೂಟದ ಅಶ್ವಿನ್ ಶೇಷಾದ್ರಿ ಅಭಿಪ್ರಾಯಪಟ್ಟರು.

ರಾಜಮಾತೆ ಕೆಂಪನಂಜಮ್ಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆಯಲ್ಲಿ ಭಾನುವಾರ ‘ಜಾಗತಿಕ ಮಟ್ಟದಲ್ಲಿ ಕನ್ನಡ ಕಟ್ಟುವ ಬಗೆ’ ಗೋಷ್ಠಿಯಲ್ಲಿ ಮಾತನಾಡಿ, ‘ಚೀನಾ ಭಾಷೆಯ ಚಿತ್ರಲಿಪಿಯಲ್ಲಿರುವುದು 2 ಸಾವಿರ ಪದಗಳಷ್ಟೆ. ದೇಶದ ಎಲ್ಲೆಡೆಯೂ ಜನ ಅವನ್ನೇ ಬಳಸುತ್ತಾರೆ. ಕನ್ನಡದ ಬಳಕೆಯನ್ನೂ ಹೀಗೆ ಕಡ್ಡಾಯಗೊಳಿಸಿದರೆ ಭಾಷೆಯ ಉಳಿವು ಸಾಧ್ಯ’ ಎಂದರು.

‘ಅಮೆರಿಕದ ದಕ್ಷಿಣಕ್ಕಿರುವ ಮೆಕ್ಸಿಕೊ ಹಲವು ಶತಮಾನ ಸ್ಪಾನಿಷರ ಆಳ್ವಿಕೆಯಲ್ಲಿತ್ತು. ಆಡಳಿತ ಭಾಷೆಯೂ ಸ್ಪಾನಿಷ್. ಆದರೆ ಅಲ್ಲಿರುವ 68 ಪ್ರಮುಖ ಸ್ಥಳೀಯ ಭಾಷಾ ಸಮುದಾಯಗಳು ತಮ್ಮ ಭಾಷೆಯನ್ನು ಬಿಟ್ಟುಕೊಡುವುದಿಲ್ಲವೆಂದು ಚಳವಳಿ ನಡೆಸಿದವು. ಈಗ ಜನರ ಅರ್ಜಿ, ಪತ್ರಗಳನ್ನು ಸರ್ಕಾರವೇ ಸ್ಪಾನಿಷ್‌ಗೆ ಭಾಷಾಂತರಿಸುತ್ತದೆ. ಐರೋಪ್ಯ ದೇಶಗಳು, ನ್ಯೂಜಿಲೆಂಡ್, ಆಸ್ಟ್ರೇಲಿಯದಲ್ಲಿ ಸ್ಥಳೀಯ ಭಾಷೆಗಳ ಬಳಕೆ ಚಳವಳಿಯ ರೂಪ ಪಡೆದಿದೆ. ಇವೆಲ್ಲವೂ ನಮಗೆ ಸ್ಫೂರ್ತಿಯಾಗಬಲ್ಲವು’ ಎಂದು ವಿವರಿಸಿದರು.

ಕನ್ನಡ ಕಲಿಕಾ ಕೇಂದ್ರಗಳು: ‘ವಿದೇಶಗಳಲ್ಲಿ ಹಲವು ಕನ್ನಡ ಕಲಿಕಾ ಕೇಂದ್ರಗಳಿದ್ದು, 5,866 ವಿದ್ಯಾರ್ಥಿಗಳಿಗೆ 720 ಶಿಕ್ಷಕರು ಕನ್ನಡ ಕಲಿಸುತ್ತಿದ್ದಾರೆ’ ಎಂದು ದುಬೈ ಕನ್ನಡ ಶಾಲೆಯ ಅಧ್ಯಕ್ಷ ಶಶಿಧರ್ ನಾಗರಾಜಪ್ಪ ಮಾಹಿತಿ ನೀಡಿದರು.

‘ವಿದೇಶಗಳಲ್ಲಿ ಕನ್ನಡ ಶಾಲೆಗಳ ಸ್ಥಿತಿಗತಿಗಳು’ ಕುರಿತು ಮಾತನಾಡಿ, ‘ನಮ್ಮ ಮಕ್ಕಳು ಕನ್ನಡ ಮರೆಯಬಾರದೆಂದು ಶಾಲೆ ಆರಂಭಿಸಿದೆವು. 11 ವರ್ಷಗಳಲ್ಲಿ ಸಾವಿರಾರು ಮಕ್ಕಳಿಗೆ ಕನ್ನಡ ಕಲಿಸಿದ್ದೇವೆ. ಆದರೆ ಇಲ್ಲಿನವರು ಮಕ್ಕಳಿಗೆ ಕನ್ನಡ ಕಲಿಸಲು ಆಸಕ್ತಿ ತೋರದಿರುವುದು ವಿಷಾದನೀಯ’ ಎಂದರು.

ಜರ್ಮನಿಯ ಮ್ಯೂನಿಕ್‌ನ ಕನ್ನಡ ಕಲಿಕಾ ಕೇಂದ್ರದ ಶಿಕ್ಷಕಿ ರಶ್ಮಿ ನಾಗರಾಜ್, ‘ನಾವು ಆನ್‌ಲೈನ್ ಮತ್ತು ಆಫ್‌ಲೈನ್ ತರಗತಿಗಳ ಮೂಲಕ ಕನ್ನಡ ಕಲಿಸುತ್ತಿದ್ದು, ಜರ್ಮನಿಯ ಸಾಮಾನ್ಯ ಶಾಲಾ ಪ್ರಮಾಣಪತ್ರದಲ್ಲಿ ‘ಹಿಂದಿ ಭಾಷೆ ಕಲಿಕೆ’ ಎಂದು ನಮೂದಿಸುವ ವ್ಯವಸ್ಥೆ ಇದೆ. ಕನ್ನಡ ಭಾಷೆ ಕಲಿಕೆಗೂ ಈ ಸವಲತ್ತು ವಿಸ್ತರಿಸುವ ಬಗ್ಗೆ ಶಿಕ್ಷಣ ಇಲಾಖೆಯೊಂದಿಗೆ ಚರ್ಚಿಸುತ್ತಿದ್ದೇವೆ’ ಎಂದರು.

‘ಅನಿವಾಸಿ ಶ್ರಮಿಕ ಕನ್ನಡಿಗರ ನೆರವಿಗೆ ಧಾವಿಸಿ’

‘ಅನಿವಾಸಿ ಕನ್ನಡಿಗರನ್ನು ಅನ್ಯಗ್ರಹ ಜೀವಿಗಳು, ಶ್ರೀಮಂತರೆಂದು ನೋಡಲಾಗುತ್ತದೆ. ಆದರೆ ಕೆಲವು ಕೊಲ್ಲಿ ರಾಷ್ಟ್ರಗಳಲ್ಲಿ ಶ್ರಮಿಕ ವರ್ಗದವರ ಜೀವನ ಶೋಚನೀಯವಾಗಿದ್ದು, ನೆರವಿಗೆ ಸರ್ಕಾರ ಧಾವಿಸಬೇಕು.ಅವರ ಸ್ಥಿತಿ–ಗತಿ ಕುರಿತ ದಾಖಲೀಕರಣ ನಡೆಸಬೇಕು’ ಎಂದು ಕತಾರ್ ಕನ್ನಡಿಗರ ಕೂಟದ ಎಚ್‌.ಕೆ.ಮಧು ಕಳವಳ ವ್ಯಕ್ತಪಡಿಸಿದರು.

‘ಅವರಿಗೆ ಪ್ರತಿ ತಿಂಗಳೂ ವೇತನ ಸಿಗುವುದಿಲ್ಲ. ವಸತಿಯೂ ಶೋಚನೀಯ. ಎರಡು ವರ್ಷಕ್ಕೊಮ್ಮೆಯೂ ಕಂಪನಿಗಳು ಸ್ವದೇಶಕ್ಕೆ ಕಳಿಸುವುದಿಲ್ಲ’ ಎಂದರು.

ಹಿಂದಿ ಹೇರಿಕೆಗೆ ವಿರೋಧ

ಹಿಂದಿ ಹೇರಿಕೆಯ ವಿರುದ್ಧ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟನೆಯ ದಿನ ಆರಂಭವಾದ ಪ್ರತಿಭಟನಾ ದನಿಯು, ಕೊನೆಯ ದಿನವಾದ ಭಾನುವಾರದ ಕವಿಗೋಷ್ಠಿಯಲ್ಲೂ ಬಲವಾಗಿ ಕೇಳಿಬಂದಿತು.

ಕವಿಗೋಷ್ಠಿಯಲ್ಲಿ ಆಶಯ ನುಡಿಯಾಡಿದ ಕವಿ ಕೆ.ಪಿ.ಮೃತ್ಯುಂಜಯ, ‘ತ್ರಿಭಾಷಾ ಸೂತ್ರವು ಕನ್ನಡಿಗರನ್ನು ತ್ರಿಶೂಲದಂತೆ ಇರಿಯುತ್ತಿದೆ ಎಂದು ಕುವೆಂಪು ಹೇಳಿದ್ದರು. ಅದು ಈ ಕಾಲಕ್ಕೆ ನಿಜವಾಗಿಹೋಗಿದೆ. ತ್ರಿಭಾಷಾ ಸೂತ್ರದ ಹೆಸರಿನಲ್ಲಿ ಹಿಂದಿಯನ್ನು ಹೇರಲಾಗುತ್ತಿದೆ. ಈಚೆಗೆ ಇದೇ ಸೂತ್ರದ ಅಡಿಯಲ್ಲಿ ಇಂಗ್ಲಿಷ್–ಹಿಂದಿ–ಸಂಸ್ಕೃತ ಬಂದು ಕುಳಿತಿವೆ. ಕನ್ನಡವನ್ನು ಹೊರಗಟ್ಟಲಾಗಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಹಿಂದಿ ಹೇರಿಕೆ ಮೊದಲಿನಿಂದ ಇದ್ದರೂ ಕೇಂದ್ರದಲ್ಲಿ ಈಗ ಅಧಿಕಾರದಲ್ಲಿರುವ ಪಕ್ಷ ಸರ್ಕಾರ ರಚಿಸಿದಾಗಿನಿಂದ ಹೇರಿಕೆ ತೀವ್ರಗೊಂಡಿದೆ. ಅದನ್ನು ಪ್ರಬಲವಾಗಿ ವಿರೋಧಿಸಿ, ರಾಜ್ಯ ಸರ್ಕಾರದ ಗಮನ ಸೆಳೆಯಬೇಕು. ತ್ರಿಭಾಷಾ ಸೂತ್ರವನ್ನು ರದ್ದುಮಾಡುವವರೆಗೂ ಹೋರಾಡಬೇಕು. ಇಲ್ಲದಿದ್ದರೆ ಕನ್ನಡಕ್ಕೆ ಉಳಿಗಾಲವಿಲ್ಲ’ ಎಂದು ಪ್ರತಿಪಾದಿಸಿದರು.

‘ಜಾಗತಿಕ ಮಟ್ಟದಲ್ಲಿ ಕನ್ನಡ ಕಟ್ಟುವ’ ಬಗೆ ಕುರಿತು ಮಾತನಾಡಿದ ಬ್ರಿಟನ್ ಕನ್ನಡ ಕೂಟದ ಅಶ್ವಿನ್ ಪ್ರಸಾದ್, ‘ದಶಕಗಳ ಹಿಂದೆ ನಾವು ಬೆಂಗಳೂರು ಬಿಟ್ಟಾಗ, ಅಲ್ಲಿ ಕನ್ನಡವೇ ಪ್ರಧಾನವಾಗಿತ್ತು. ಈಗ ಎಲ್ಲವೂ ಬದಲಾಗಿದೆ. ಬೆಂಗಳೂರಿನ ಯಾವ ಹೋಟೆಲ್‌ಗೆ ಹೋದರೂ, ‘ಕ್ಯಾ ಚಾಹಿಯೇ’ ಎನ್ನುವವರೇ ಇದ್ದಾರೆ. ಎಲ್ಲ ರಂಗಗಳಲ್ಲೂ ಹಿಂದಿ ಬಂದು ಕೂತಿದೆ’ ಎಂದರು.

ಹೊರನಾಡು ಕನ್ನಡಿಗ ಕಮಲಾಕರ ಕಡವೆ ಮಾತನಾಡಿ, ‘ಕನ್ನಡಿಗರು ಎಲ್ಲರೊಂದಿಗೂ ಸುಲಭವಾಗಿ ಬೆರೆಯುತ್ತಾರೆ. ಹೊರಗಿನವರ ಭಾಷೆಯಲ್ಲೇ ಅವರನ್ನು ಮಾತನಾಡಿಸುತ್ತಾರೆ. ಅದನ್ನೇ ಕಾರಣವಾಗಿ ಇರಿಸಿಕೊಂಡು ಕನ್ನಡಿಗರು ನಿರಭಿಮಾನಿಗಳು ಎಂದು ಕರೆಯಲಾಗುತ್ತದೆ. ಕನ್ನಡ ಉಳಿಸಿಕೊಳ್ಳುವಲ್ಲಿ ಇದೂ ತೊಡಕಾಗಿರಬಹುದು’ ಎಂದು ಗೋಷ್ಠಿಯೊಂದರಲ್ಲಿ ಹೇಳಿದರು.

ಶನಿವಾರ ನಡೆದಿದ್ದ ‘ಯುವಜನತೆ ಮತ್ತು ಸಬಲೀಕರಣ’ ಗೋಷ್ಠಿಯಲ್ಲೂ ಹಿಂದಿ ಹೇರಿಕೆ ಬಗ್ಗೆ ಚರ್ಚೆಯಾಗಿತ್ತು.

ಕರಪತ್ರ ವಿತರಿಸಿ ಅಭಿಯಾನ

ಕೆನ್ನೆಯ ಮೇಲೆ ಕನ್ನಡ ಬಾವುಟ ಬರೆಸಿಕೊಂಡ ಕನ್ನಡಾಭಿಮಾನಿ —ಪ್ರಜಾವಾಣಿ ಚಿತ್ರ

ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳ ಬಳಿ, ಸಮ್ಮೇಳನದ ಆವರಣದಲ್ಲಿ ಹಲವು ಯುವಕರು ಮತ್ತು ಕೆಲ ಸಂಘಟನೆಗಳು ಹಿಂದಿ ಹೇರಿಕೆಯನ್ನು ವಿರೋಧಿಸಿ ಕರಪತ್ರ ವಿತರಿಸಿ ಕಿರು ಅಭಿಯಾನವನ್ನು ನಡೆಸಿದವು.

ಪುಸ್ತಕ ಮಳಿಗೆಗಳ ಬಳಿ ರೀಲ್ಸ್ ಮಾಡುತ್ತಿದ್ದ ಕೆಲ ಇನ್‌ಫ್ಲುಯೆನ್ಸರ್‌ಗಳು ಶಾಲಾ ಮಕ್ಕಳನ್ನು ಸೇರಿಸಿಕೊಂಡು, ‘ಹಿಂದಿ ಹೇರಿಕೆ ನಿಲ್ಲಲಿ, ನಿಲ್ಲಲಿ. ಹಿಂದಿ ಪರೀಕ್ಷೆ ಬೇಡ. ಕನ್ನಡವೇ ಇರಲಿ’ ಎಂದು ಘೋಷಣೆ ಕೂಗಿಸಿದರು. ತಿಂಡಿ–ತಿನಿಸು, ಆಟಿಕೆಗಳನ್ನು ಮಾರುತ್ತಿದ್ದ ಕೆಲ ಹಿಂದಿ ವ್ಯಾಪಾರಿಗಳಿಗೆ ಕನ್ನಡದಲ್ಲಿ ವ್ಯವಹರಿಸುವ ಬಗೆಯನ್ನು ಕೆಲವರು ಹೇಳಿಕೊಡುತ್ತಿದ್ದರು.

> **ಹಿಂದಿ ರಾಷ್ಟ್ರಭಾಷೆ ಎಂದು ಸುಳ್ಳು ಹೇಳುವುದನ್ನು ನಿಲ್ಲಿಸಬೇಕು. ಆಸಕ್ತಿ ಇದ್ದವರು ಕಲಿಯಲಿ, ಆದರೆ ಅದನ್ನು ಹೇರಬಾರದು**
> **ರಾಕೇಶ್ ಎಚ್‌.ಎಸ್.**
> ದ್ವಿತೀಯ ಪಿಯು ವಿದ್ಯಾರ್ಥಿ, ಮಂಡ್ಯ

❦ ಸುಭಾಷಿತ ❦

ಇಂದಿಗೆ ಇಂದಿನದೇ ಆದರ್ಶ ಬೇಕು. ಹಿಂದಿನ ಸಮಾಜ ಹಾಗೂ ಚರಿತ್ರೆಯ ಪರಿವೆಯಿಲ್ಲದೆ, ಅಂದಿನ ಬರಿಯ ಪುಸ್ತಕ ನೀತಿಗೆ ಇಂದಿಗೂ ಅಂಟಿಕೊಳ್ಳುವುದರಲ್ಲಿ ಫಲವಿಲ್ಲ.

-ಶಿವರಾಮ ಕಾರಂತ

ಸಂಸತ್ ಆವರಣದಲ್ಲಿ ತಳ್ಳಾಟ ನಿಷ್ಪಕ್ಷಪಾತ ತನಿಖೆ ನಡೆಯಲಿ

ಬಿ.ಆರ್. ಅಂಬೇಡ್ಕರ್ ಅವರ ಕುರಿತು ಸಂಸತ್ತಿನಲ್ಲಿ ನೀಡಲಾದ ಹೇಳಿಕೆಯೊಂದು ದೊಡ್ಡ ವಿವಾದಕ್ಕೆ ಕಾರಣವಾಗಿದೆ. ಸಂಸತ್ತಿನ ಹೊರಗೆ ನೂಕಾಟ, ತಳ್ಳಾಟವೂ ನಡೆದಿದೆ. ಅವರು ತಳ್ಳಿದರು, ಇವರು ನೂಕಿದರು, ತೀರಾ ಹತ್ತಿರಕ್ಕೆ ಬಂದು ಕಿರುಚಿದರು ಎಂದೆಲ್ಲ ತೀರಾ ಬಾಲಿಶವಾಗಿ ಆರೋಪ, ಪ್ರತ್ಯಾರೋಪ ಮಾಡಲಾಗಿದೆ. ಅಂಬೇಡ್ಕರ್ ಅವರ ಕುರಿತು ತನಗೆ ಭಾರಿ ಗೌರವ ಇದೆ ಎಂಬಂತೆ ಕಾಂಗ್ರೆಸ್ ಬಿಂಬಿಸಿಕೊಳ್ಳುತ್ತಿದೆ; ಆದರೆ, ಸಂವಿಧಾನಶಿಲ್ಪಿಗೆ ನೀಡಬೇಕಾದ ಗೌರವವನ್ನು ಅದು ಯಾವತ್ತೂ ನೀಡಿಲ್ಲ ಎಂಬರ್ಥದಲ್ಲಿ ಟೀಕಿಸುವಾಗ ಗೃಹ ಸಚಿವ ಅಮಿತ್ ಶಾ ಆಡಿದ ಮಾತು ನಂತರದ ಸರಣಿ ಬೆಳವಣಿಗೆಗಳಿಗೆ ಕಾರಣವಾಯಿತು. ಆದರೆ, ಟೀಕೆ ಮಾಡುವಾಗ ಬಳಸಿದ ಪದಗಳು ಅವರು ಮತ್ತು ಅವರು ಪ್ರತಿನಿಧಿಸುವ ಪಕ್ಷ ಕೂಡ ಅಂಬೇಡ್ಕರ್ ಕುರಿತು ಬಿಂಬಿಸಿರುವ ಭಾವನೆಯು ಹುಸಿಯಾಗಿಯೇ ಇದೆ ಎಂಬುದನ್ನು ಬಯಲಾಗಿಸಿತು; ಕಾಂಗ್ರೆಸ್ ಮೇಲೆ ಆರೋಪಿಸುತ್ತಿರುವ ಕೃತ್ರಿಮತೆ ಬಿಜೆಪಿಯದ್ದೂ ಆಗಿದೆ ಎಂಬುದನ್ನೂ ಸೂಚಿಸಿತು. ಅಂಬೇಡ್ಕರ್ ಅವರ ಹೆಸರನ್ನು ಪಠಿಸಿದಷ್ಟು ಬಾರಿ ದೇವರ ಹೆಸರು ಪಠಿಸಿದರೆ ಏಳೇಳು ಜನ್ಮಕ್ಕೂ ಸ್ವರ್ಗ ಲಭಿಸೀತು ಎಂದು ಶಾ ಅವರು ಹೇಳಿದ್ದು ವಿರೋಧ ಪಕ್ಷಗಳಿಗೆ ಸಿಕ್ಕ ಸುವರ್ಣಾವಕಾಶ. ಸಂವಿಧಾನಶಿಲ್ಪಿಗೆ ಅವಮಾನ ಮಾಡಲಾಗಿದೆ ಎಂದು ವಿರೋಧ ಪಕ್ಷಗಳು ಭಾರಿ ಹುಯಿಲೆಬ್ಬಿಸಿದವು. ತಮ್ಮ ಮಾತನ್ನು ಸಂದರ್ಭದಿಂದ ಬೇರ್ಪಡಿಸಿ ನೋಡಲಾಗುತ್ತಿದೆ ಎಂದು ಶಾ ಹೇಳಿಕೊಂಡಿದ್ದಾರೆ. ಪದಗಳಿಗೆ ಅರ್ಥ ಇರುತ್ತದೆ, ಹಾಗೆಯೇ ಮಾರ್ದನಿಯೂ ಇರುತ್ತದೆ. ರಾಜಕಾರಣದಲ್ಲಿ ಕೆಲವೊಮ್ಮೆ ಅವು ಅಸ್ತ್ರವೂ ಆಗಿಬಿಡುತ್ತವೆ.

ಎಷ್ಟೇ ಬಾಲಿಶ ಅಥವಾ ಉತ್ಪ್ರೇಕ್ಷೆ ಇರಲಿ, ಎಲ್ಲ ಆರೋಪಗಳ ಕುರಿತು ತನಿಖೆ ನಡೆಯಬೇಕು. ತನಿಖೆಯ ಪ್ರಕ್ರಿಯೆಯಲ್ಲಿ ಸೇಡಿನ ಮನೋಭಾವ ನುಸುಳದಂತೆ ಎಚ್ಚರಿಕೆ ವಹಿಸಬೇಕು

ಅಂಬೇಡ್ಕರ್ ಕುರಿತು ಯಾವುದೇ ಪಕ್ಷ ತೋರುತ್ತಿರುವ ಗೌರವವು ಹುಸಿ ಮತ್ತು ಸೋಗಿನದ್ದು ಎಂದು ಬೇರೊಂದು ಪಕ್ಷವು ಆರೋಪಿಸಿದರೆ, ಅದೇ ಟೀಕೆಗೆ ತನ್ನನ್ನು ಕೂಡ ಒಡ್ಡಿಕೊಳ್ಳಬೇಕಾಗುತ್ತದೆ. ದಲಿತ ಸಮುದಾಯವನ್ನೇ ಮುಖ್ಯವಾಗಿ ನೆಚ್ಚಿಕೊಂಡಿರುವ ಬಿಎಸ್‌ಪಿಯಂತಹ ಪಕ್ಷಗಳು ಕೂಡ ಅಂಬೇಡ್ಕರ್ ಪ್ರತಿಪಾದಿಸಿದ ಮೌಲ್ಯಗಳಿಗೆ ಪೂರ್ಣ ಬದ್ಧತೆಯನ್ನು ಪ್ರದರ್ಶಿಸಿಲ್ಲ. ಅಂಬೇಡ್ಕರ್ ಅವರು ಜೀವಿಸಿದ್ದಾಗ ಇದ್ದ ಎಲ್ಲ ರೀತಿಯ ರಾಜಕಾರಣಗಳ ಬಗೆಗೂ ಅವರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಗಾಂಧೀಜಿಯ ಜೊತೆಗೂ ಅವರು ಭಿನ್ನಮತ ಹೊಂದಿದ್ದರು. ಕಾಂಗ್ರೆಸ್ ಜೊತೆಗೆ ಕೆಲವು ವಿಚಾರಗಳಲ್ಲಿ ಸಹಮತ, ಕೆಲವು ವಿಷಯಗಳಲ್ಲಿ ಭಿನ್ನಮತ ತೋರಿದ್ದರು. ಹಿಂದೂ ಸಂಪ್ರದಾಯವಾದಕ್ಕೆ ಬಲವಾದ ವಿರೋಧ ವ್ಯಕ್ತಪಡಿಸಿದ್ದರು. ಹಿಂದೂ ಸಂಹಿತೆ ಮಸೂದೆ ಸೇರಿ ಹಿಂದೂ ಸಂಪ್ರದಾಯಬದ್ಧತೆಯ ಹಲವು ವಿಚಾರಗಳಲ್ಲಿ ಅವರಿಗೆ ಸಹಮತ ಇರಲಿಲ್ಲ. ಹಿಂದೂ ಸಂಹಿತೆ ಮಸೂದೆಗೆ ಸಂಬಂಧಿಸಿ ಹತಾಶರಾಗಿಯೇ ಅವರು ಕೇಂದ್ರ ಸಚಿವ ಸಂಪುಟಕ್ಕೆ ರಾಜೀನಾಮೆಯನ್ನೂ ನೀಡಿದ್ದರು. ಮಸೂದೆಗೆ ಸಂಬಂಧಿಸಿ ಹಿಂದೂ ಸಂಪ್ರದಾಯವಾದಿಗಳ ನಿಲುವು ಅವರಿಗೆ ಸರಿ ಕಂಡಿರಲಿಲ್ಲ. ಹಿಂದೂ ಸಂಪ್ರದಾಯಸ್ಥರು ಮತ್ತು ಸಾವರ್ಕರ್ ಅವರಂತಹ ನಾಯಕರೊಂದಿಗೆ ಹಲವು ವಿಚಾರಗಳಲ್ಲಿ ಅವರಿಗೆ ಭಿನ್ನಾಭಿಪ್ರಾಯ ಇತ್ತು. ಅಂಬೇಡ್ಕರ್ ಅವರು ಮೂಲಭೂತವಾಗಿ ಒಬ್ಬ ಸಮಾಜ ಸುಧಾರಕ. ಅವರ ದೃಷ್ಟಿಕೋನವು ಹಲವು ವಿಚಾರಗಳಲ್ಲಿ ರಾಜಕಾರಣದೊಂದಿಗೆ ಹೊಂದಿಕೆ ಆಗುತ್ತಿರಲಿಲ್ಲ. ಜಾತ್ಯತೀತ ಮತ್ತು ಸಮಾನತೆಯ ಸಂವಿಧಾನವನ್ನು ಕೊಟ್ಟದ್ದಕ್ಕೆ ಈ ದೇಶವು ಅವರಿಗೆ ಕೃತಜ್ಞವಾಗಿರಬೇಕು. ಬಿಜೆಪಿಗೆ ಅಂಬೇಡ್ಕರ್ ಅವರನ್ನು ಒಪ್ಪಿಕೊಳ್ಳಲು ಸಾಧ್ಯವಾಗಿದ್ದು ತೀರಾ ಇತ್ತೀಚೆಗೆ. ರಾಜಕಾರಣದಲ್ಲಿ ಅವರನ್ನು ಮತ ಆಕರ್ಷಿಸಬಲ್ಲ ಒಂದು ಸಂಕೇತವಾಗಿ ಮಾತ್ರ ಪಕ್ಷಗಳು ಬಳಸಿಕೊಳ್ಳುತ್ತಿವೆ. ಸಮಾಜ ಸುಧಾರಕ ಮತ್ತು ಸಂವಿಧಾನಶಿಲ್ಪಿಯಾಗಿ ಅವರ ಪಾತ್ರವನ್ನು ಎಲ್ಲ ಪಕ್ಷಗಳವರೂ ಹೊಗಳುತ್ತಾರೆ. ಆದರೆ, ಈ ಪಕ್ಷಗಳ ನಿಜವಾದ ಉದ್ದೇಶವು ಅವರ ಹೆಸರನ್ನು ಬಳಸಿಕೊಂಡು ಮತಗಳನ್ನು ಸೆಳೆಯುವುದೇ ಆಗಿರುತ್ತದೆ.

ಸಂಸತ್ತಿನ ಆವರಣದಲ್ಲಿ ನಡೆದ ಗಲಾಟೆಯಲ್ಲಿ ತಮಗೆ ಗಾಯಗಳಾಗಿವೆ ಎಂದು ಬಿಜೆಪಿಯ ಇಬ್ಬರು ಸಂಸದರು ಹೇಳಿಕೊಂಡಿದ್ದಾರೆ. ಅವರನ್ನು ಆಸ್ಪತ್ರೆಗೂ ದಾಖಲಿಸಲಾಯಿತು. ಅವರನ್ನು ತಳ್ಳಿದ್ದಾರೆ ಎಂಬ ಆರೋಪದಲ್ಲಿ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಮೇಲೆ ಎಫ್‌ಐಆರ್ ಕೂಡ ದಾಖಲಾಗಿದೆ. ಸಂಸತ್ ಪ್ರವೇಶಿಸುವುದಕ್ಕೆ ಬಿಜೆಪಿ ಸಂಸದರು ಅಡ್ಡಿಪಡಿಸಿದ್ದಾರೆ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಗಾಯಗೊಳಿಸಲಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ಎಷ್ಟೇ ಬಾಲಿಶ ಅಥವಾ ಉತ್ಪ್ರೇಕ್ಷೆ ಇರಲಿ, ಎಲ್ಲ ಆರೋಪಗಳ ಕುರಿತು ತನಿಖೆ ನಡೆಯಬೇಕು. ಆದರೆ, ತನಿಖೆಯ ಪ್ರಕ್ರಿಯೆಯಲ್ಲಿ ಸೇಡಿನ ಮನೋಭಾವ ನುಸುಳದಂತೆ ಎಚ್ಚರಿಕೆ ವಹಿಸಬೇಕು. ಏಕೆಂದರೆ, ಇತ್ತೀಚಿನ ದಿನಗಳಲ್ಲಿ ರಾಜಕಾರಣದಲ್ಲಿ ಸೇಡಿನ ಮನೋಭಾವವು ತುಂಬಿ ತುಳುಕುತ್ತಿದೆ.

ದಿನದ ಟ್ವೀಟ್

ಕೆಪಿಎಸ್‌ಸಿ ಅವಾಂತರಕ್ಕೆ ಕೊನೆ ಎಂದು?

ಮತ್ತದೇ ರಾಗ, ಕೆಪಿಎಸ್‌ಸಿ ನಿರೀಕ್ಷಣಾ ಜಾಮೀನು ಪಡೆದುಕೊಳ್ಳುತ್ತಿದೆ. ಕನ್ನಡದಲ್ಲಿ ಅರ್ಥವಾಗದಿದ್ದರೆ ಇಂಗ್ಲಿಷಲ್ಲಿ ಅರ್ಥ ಮಾಡಿಕೊಳ್ಳಬೇಕಂತೆ. ಕನ್ನಡದಲ್ಲಿ ಪರೀಕ್ಷೆ ತೆಗೆದುಕೊಂಡವರಿಗೆ ಕನ್ನಡದಲ್ಲೇ ಅರ್ಥ ಆಗದಿದ್ದ ಮೇಲೆ ಇಂಗ್ಲಿಷಲ್ಲಿ ಅರ್ಥವಾಗಬಹುದೆಂದು ನಿರೀಕ್ಷಿಸುವ ಈ ಹೇಳಿಕೆ ನೋಡಿ ಅಳಬೇಕೋ ನಗಬೇಕೋ ಅರ್ಥವಾಗುತ್ತಿಲ್ಲ.

(ಈ ತಿಂಗಳಾಂತ್ಯದಲ್ಲಿ ನಡೆಯಲಿರುವ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಯ ಪೂರ್ವಭಾವಿ ಮರುಪರೀಕ್ಷೆಯಲ್ಲಿ, ಕನ್ನಡದಲ್ಲಿರುವ ಪ್ರಶ್ನೆಗಳ ಬಗ್ಗೆ ಗೊಂದಲವಾದರೆ ಇಂಗ್ಲಿಷ್‌ನಲ್ಲಿರುವ ಪ್ರಶ್ನೆಗಳನ್ನು ನೋಡಿ ಅರ್ಥೈಸಿಕೊಳ್ಳುವಂತೆ ಅಭ್ಯರ್ಥಿಗಳಿಗೆ ಕೆಪಿಎಸ್‌ಸಿ ನೀಡಿರುವ ಸೂಚನೆಗೆ ಪ್ರತಿಕ್ರಿಯೆ)

ಕವಿರಾಜ್, ಗೀತರಚನೆಕಾರ

ಕಿಡಿನುಡಿ

ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕ ಲಿಂಗವೆಂದು ವಿಭಜಿಸಿರುವುದೇ ಅಸಮಂಜಸ. ನಮ್ಮನ್ನು ಮೂರನೇ ಲಿಂಗಕ್ಕೆ ಸೇರಿಸುತ್ತಾರೆ. ನಾವು ಜಡವಲ್ಲ, ಜೀವವಿದೆ. ಯಾಕೆ ನಮ್ಮನ್ನು ಬೇರ್ಪಡಿಸುವಿರಿ? ನಾವು ಕೂಡ ಕೆಂಪು ರಕ್ತದ ಮನುಷ್ಯರಲ್ಲವೇ?

ಅಕ್ಕೈ ಪದ್ಮಶಾಲಿ, ಲಿಂಗತ್ವ ಅಲ್ಪಸಂಖ್ಯಾತರ ಪರ ಹಕ್ಕುಗಳ ಹೋರಾಟಗಾರ್ತಿ

25 ವರ್ಷಗಳ ಹಿಂದೆ

ಗುರುವಾರ, 23-12-1999

• ಸಚಿವರ ಮೇಲೆ ಎರಗಲು ಯತ್ನ ಪ್ರಧಾನಿ ತಡೆ

ನವದೆಹಲಿ, ಡಿ. 22– ಕೃಷಿ ಸಚಿವ ನಿತೀಶ್ ಕುಮಾರ್ ಮೇಲೆರಗಲು ಮುನ್ನುಗ್ಗಿದ ಸಮಾಜವಾದಿ ಪಕ್ಷದ ಸದಸ್ಯರೊಬ್ಬರ 'ವರ್ತನೆ' ಲೋಕಸಭೆಯಲ್ಲಿ ಇಂದು ಕೋಲಾಹಲ ಉಂಟುಮಾಡಿ, ಕಲಾಪವನ್ನು ಒಂದು ಗಂಟೆ ಮುಂದೂಡಲಾಯಿತು.

ನಿತೀಶ್ ಕುಮಾರ್ ಮೇಲೆ ಬೀಳಲು ಮುಂದಾದ ಸಮಾಜವಾದಿ ಪಕ್ಷದ ಸದಸ್ಯರನ್ನು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಸ್ವತಃ ತಮ್ಮ ಸ್ಥಾನದಿಂದ ಎದ್ದು ಬಂದು ತಡೆಯಬೇಕಾಯಿತು.

• ಪಟೇಲ್ ಆಪ್ತರಿಗೆಲ್ಲ ಬಿಡಿ ನಿವೇಶನದ 'ಭಕ್ಷೀಸು'

ಬೆಂಗಳೂರು, ಡಿ. 22– ನಗರದಲ್ಲಿ ಬಿಡಿಎ ಮೂಲಕ ಬಿಡಿ ನಿವೇಶನ ಪಡೆಯಲು ಅರ್ಹರಾದ ಸಾರ್ವಜನಿಕ ವ್ಯಕ್ತಿಗಳು ಎಂದರೆ ಯಾರು? ಈ ಮಾನದಂಡ, ಅಂಥ ನಿವೇಶನ ಪಡೆಯುವವರ ಹೆಸರನ್ನು ಶಿಫಾರಸು ಮಾಡುವವರ ಅಭಿರುಚಿಗೆ ತಕ್ಕಂತೆ ಬದಲಾಗುವ ಸಾಧ್ಯತೆ ಇದೆಯೇ? ಈ ಮಾನದಂಡಕ್ಕೆ ಮುಖ್ಯಮಂತ್ರಿಯವರ ಕಾರು ನಡೆಸುವ ಚಾಲಕ, ಜಮಾದಾರರು, ಅವರ ಕಚೇರಿ ಸಹಾಯಕರು, ಗುಮಾಸ್ತರು, ವಿಶೇಷ ಕರ್ತವ್ಯ ನಿರ್ವಹಿಸುವವರು ಒಳಪಡುತ್ತಾರೆಯೇ?

ಹಿಂದಿನ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಪ್ರಕಾರ ಹೌದು. ಹಾಗಾಗಿ ಅವರ ಕಾರು ಚಾಲಕ, ದಲಾಯತ್, ಸಹಾಯಕರು, ವಿಶೇಷ ಕರ್ತವ್ಯ ನಿರ್ವಹಿಸುವವರು, ಬಂಧುಗಳು ಬಿಡಿಎ ನಿವೇಶನ ಹಂಚಿಕೆಯ ನಿಯಮಾವಳಿಗಳ 'ಜಿ' ಪ್ರವರ್ಗಕ್ಕೆ (ಸಾರ್ವಜನಿಕ ಸೇವೆಯವರು) ಸೇರಿದ್ದಾರೆ. ಅದರಂತೆ ಇವರೆಲ್ಲರೂ ನಿವೇಶನ ಪಡೆದಿದ್ದಾರೆ.

50 ವರ್ಷಗಳ ಹಿಂದೆ

ಸೋಮವಾರ, 23-12-1974

• ಖಾಸಗಿ ಉದ್ಯಮ ಸಂಸ್ಥೆಗಳಲ್ಲೂ ನಿಮ್ನ ವರ್ಗ, ಗಿರಿಜನರಿಗೆ ಉದ್ಯೋಗ ಮೀಸಲಿಡಲು ಕರೆ

ಬೆಂಗಳೂರು, ಡಿ. 22– ನಿಮ್ನ ವರ್ಗ ಮತ್ತು ಗಿರಿಜನರಿಗೆ ಮೀಸಲಾಗಿಡುವ ನಿಯಮವನ್ನು ಖಾಸಗಿ ಉದ್ಯಮ ಸಂಸ್ಥೆಗಳಿಗೂ ಅನ್ವಯಿಸ-ಬೇಕೆಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಎಲ್.ಜಿ. ಹಾವನೂರ್ ಅವರು ಇಂದು ಇಲ್ಲಿ ಸಲಹೆ ಮಾಡಿದರು.

'ಖಾಸಗಿ ಉದ್ಯಮ ಸಂಸ್ಥೆಗಳವರು ತಮ್ಮ ಬಂಧು ಬಳಗದವರನ್ನೇ ನೇಮಿಸಿಕೊಳ್ಳುತ್ತಾರೆ. ನಿಮ್ನ ವರ್ಗದವರು ಒಡೆಯರಲ್ಲವಾದ್ದರಿಂದ ಅವರುಗಳಿಗೆ ಆ ಸಂಸ್ಥೆಗಳಲ್ಲಿ ಉದ್ಯೋಗ ಸಿಕ್ಕುತ್ತಿಲ್ಲ' ಎಂದರು.

ಕನ್ನಡದ ರಥ ಸಾಗುತ್ತಿದೆ... ಯಾರು ಯಾವಾಗ ಎತ್ತ ಎಳೆಯುತ್ತಾರೋ...

ಸಾಹಿತ್ಯ ಪರಿಷತ್ತು: ಪರಿವರ್ತನೆಯ ಹೊತ್ತು

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಮಂಡ್ಯದಲ್ಲಿ ನಡೆದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ತೆರೆಬಿದ್ದಿದೆ. ಮಾಧ್ಯಮಗಳು ತಮ್ಮ ಧೋರಣೆಗೆ ತಕ್ಕಂತೆ ಪುಟಗಳನ್ನು ಭರ್ತಿ ಮಾಡಿ ಮುಗಿಸಿವೆ. ಪುಸ್ತಕ ಪ್ರಕಾಶಕರು ಪ್ರತಿ ವರ್ಷದಂತೆ ಸಮ್ಮಿಶ್ರ ಭಾವದಲ್ಲಿ ಗಂಟುಮೂಟೆ ಕಟ್ಟಿದ್ದಾರೆ. ಸನ್ಮಾನಿತರು ಹಾರ, ಶಾಲು, ಸ್ಮರಣಿಕೆಗಳ ಹೊರೆಯನ್ನು ಮನೆಗೆ ಸಾಗಿಸಿಯಾಗಿದೆ. ಹಿಂಡುಹಿಂಡಾಗಿ ಆಗಮಿಸಿದ ನುಡಿಪ್ರೇಮಿಗಳು ಕನ್ನಡದ ತೇರು ಎಳೆದ ಭ್ರಮೆಬೆರೆತ ಸಂಭ್ರಮದೊಂದಿಗೆ ಹಿಂದಿರುಗಿದ್ದಾರೆ. ರಾಜಕಾರಣಿಗಳು ಎಂದಿನ ಹೇಳಿಕೆ, ಭಾಷಣ ಮತ್ತು ಸೋಗಲಾಡಿತನ ಮುಂದುವರಿಸಿದ್ದಾರೆ.

ಸಾಹಿತ್ಯದ ಸಂವೇದನೆ ಸೂಸಬೇಕಾದ ಜಾಗದಲ್ಲಿ ರಾಜಕಾರಣದ ಅಸೂಕ್ಷ್ಮ ಭಾವ ಮೆರೆಯಿತು, ಅರ್ಥಪೂರ್ಣ ಆಚರಣೆಯನ್ನು ಅದ್ದೂರಿತನ ಕಬಳಿಸಿತು. ಸಮ್ಮೇಳನದಲ್ಲಿ ಮಾತನಾಡಿದವರು, ಉಂಡವರು, ಕೊಂಡವರು, ಪಟಗಳಲ್ಲಿ ಮಿಂಚಿದವರು ಒಟ್ಟಾಗಿ ಬಿಟ್ಟುಹೋಗಿರುವ ತ್ಯಾಜ್ಯ ಸಾಗಿಸುವ ಹೆಚ್ಚುವರಿ ಹೊರೆ ಮಾತ್ರ ಸ್ಥಳೀಯ ಪೌರಕಾರ್ಮಿಕರ ಪಾಲಿಗೆ ಉಳಿದಿದೆ!

ಮತ್ತೊಂದೆಡೆ, ಕನ್ನಡ ಸಾಹಿತ್ಯ ಪರಿಷತ್ತು ಸಮ್ಮೇಳನದ ತರುವಾಯ ತನ್ನ ಸಾಂಪ್ರದಾಯಿಕತೆಗೆ ತಕ್ಕ ಹಾಗೆ ವಿವಾದ, ಗೊಂದಲ, ಸಂಘರ್ಷ, ಅವ್ಯವಸ್ಥೆ, ಟೀಕೆಟಿಪ್ಪಣಿಗಳ ದಣಿವು ಹೊತ್ತು ದೀರ್ಘ ವಿರಾಮಕ್ಕೆ ಜಾರಲು ಸಿದ್ಧವಾಗಿದೆ. ಪರಿಷತ್ತಿನ ವಿರಾಮದ ಅವಧಿಯು ಬಳ್ಳಾರಿಯಲ್ಲಿ ನಿಗದಿಯಾಗಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಮೀಪಿಸುವವರೆಗೆ ಮುಂದುವರಿದರೆ ಅಚ್ಚರಿಪಡಬೇಕಿಲ್ಲ. ಅದು ಸಹಜವೇ. ಆದರೆ ಪರಿಷತ್ತಿನ ಕಾರ್ಯವೈಖರಿ ಹಾಗೂ ಸಮ್ಮೇಳನದ ಸ್ವರೂಪದ ಬಗೆಗೆ ಮೌಲಿಕ ತಕರಾರು ಹೊಂದಿರುವ ವ್ಯಕ್ತಿಗಳು, ಸಂಸ್ಥೆಗಳು ವಹಿಸುವ ಮೌನವನ್ನು ಅಸಹಜ ಎನ್ನಬೇಕಾಗುತ್ತದೆ. ಈ ವರ್ಗ ಕಾಲಕಾಲಕ್ಕೆ ಸಾರ್ವಜನಿಕವಾಗಿ ಎತ್ತುವ ಪ್ರಶ್ನೆಗಳು ಬರೀ ತಾತ್ಕಾಲಿಕವೂ ಸಾಂದರ್ಭಿಕವೂ ಸಾಂಕೇತಿಕವೂ ಆಗಿ ದಾಖಲೆಗೆ ಸೀಮಿತವಾದರೆ ಹೇಗೆ?

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಂತಹ ನಾಡುನುಡಿ ಕುರಿತ ಚಿಂತನಾ, ಭಾವನಾ ಚಟುವಟಿಕೆಯೂ ರಾಜಕೀಯ ಪಕ್ಷಗಳು ಹಣ, ಅಧಿಕಾರದ ಮದದಿಂದ ದಿಢೀರಾಗಿ ಏರ್ಪಡಿಸುವ ಸ್ವಾರ್ಥದಾಹದ ಸಮಾವೇಶಗಳೂ ಒಂದೇ ಅನ್ನಿಸಬಾರದು. ಅರ್ಥಪೂರ್ಣ ಸಮ್ಮೇಳನ ಸಾಕಾರಗೊಳ್ಳಬೇಕೆಂದರೆ ನೈಜ ಕಳಕಳಿ ಮತ್ತು ತಾತ್ವಿಕ ತಳಹದಿ ಹೊಂದಿದ ವರ್ಷದುದ್ದದ ಚರ್ಚೆ, ಸಂವಾದ, ಸಿದ್ಧತೆ ಬೇಕಾಗುತ್ತದೆ. ವಿವಿಧ ಮಾಧ್ಯಮಗಳು, ಅದರಲ್ಲೂ ಮುಕ್ತ ವೇದಿಕೆಗಳಾಗಿ ತೆರೆದುಕೊಂಡಿರುವ ಸಾಮಾಜಿಕ ಮಾಧ್ಯಮಗಳು ಸಮ್ಮೇಳನ ಮುಗಿದ ಮರುದಿನದಿಂದಲೇ ಈ ದಿಸೆಯಲ್ಲಿ ತಮ್ಮದೇ ಆದ ಇತಿಮಿತಿಯಲ್ಲಿ ಕಾರ್ಯಪ್ರವೃತ್ತವಾಗುವುದು ಅಪೇಕ್ಷಣೀಯ. ಹತ್ತಾರು ಬಗೆಯಲ್ಲಿ ಬದಲಾವಣೆಗೆ ತುತ್ತಾಗುತ್ತಾ ಕೃತಕ ಬುದ್ಧಿಮತ್ತೆಯ ಯುಗ ಪ್ರವೇಶಿಸಿರುವ ಜಗದಲ್ಲಿಯೂ ಪರಿಷತ್ತು ಗತಕಾಲದ ಗರ್ಭಗುಡಿಯಿಂದ ಹೊರಬರುವುದಿಲ್ಲ ಎಂದರೆ ಆಗದು.

ಹಾಗೆ ನೋಡಿದರೆ, ಕನ್ನಡ ಸಾಹಿತ್ಯ ಪರಿಷತ್ತಿಗೆ ಸಂದರ್ಭಾನುಸಾರ ಪರೋಕ್ಷವಾಗಿ ಹೊಸದರ ಹುಟ್ಟಿಗೆ ಕಾರಣವಾಗುವ ಅಂತರ್ಗತ ಸ್ವಭಾವ ಇದ್ದಂತಿದೆ. 1979ರಲ್ಲಿ ಧರ್ಮಸ್ಥಳದಲ್ಲಿ ನಡೆದ 51ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ದಲಿತ ಸಾಹಿತ್ಯದ ಪ್ರಾತಿನಿಧ್ಯದ ಪ್ರಶ್ನೆ ಉದ್ಭವವಾಗಿತ್ತು. ಸಮ್ಮೇಳನದಲ್ಲಿ ದಲಿತ ಸಾಹಿತ್ಯದ ಗೋಷ್ಠಿ ಇರಲಿ ಎಂಬ ಚೆನ್ನಣ್ಣ ವಾಲೀಕಾರ ಮತ್ತು ಜಂಬಣ್ಣ ಅಮರಚಿಂತ ಅವರ ಬೇಡಿಕೆಗೆ ಕಸಾಪದ ಆಗಿನ ಅಧ್ಯಕ್ಷ ಹಂಪನಾ ಅವರು 'ಸಾಹಿತ್ಯದಲ್ಲಿ ದಲಿತ ಬಲಿತ ಎಂಬುದಿಲ್ಲ' ಎಂಬ ನಿಲುವು ತಾಳಿದ್ದರು. ಹೀಗೆ ಮುನ್ನೆಲೆಗೆ ಬಂದ ದಲಿತರ ಪ್ರಾತಿನಿಧ್ಯದ ಪ್ರಶ್ನೆಯು ಬಂಡಾಯ ಸಾಹಿತ್ಯ ಸಂಘಟನೆಯ ಉಗಮಕ್ಕೆ ಕಾರಣವಾಗಿದ್ದು ಇತಿಹಾಸ.

ಧರ್ಮಸ್ಥಳ ಸಮ್ಮೇಳನದ ಅಧ್ಯಕ್ಷೀಯ ಭಾಷಣದಲ್ಲಿ ಎಂ.ಗೋಪಾಲಕೃಷ್ಣ ಅಡಿಗ ಅವರು, 'ನಮ್ಮಲ್ಲಿ ಪ್ರತಿ ಸಂಸ್ಥೆಯೂ ಬಹು ಬೇಗ ಜಡವಾಗಿ ಹೋಗುವಂತೆ ಈ ಸಂಸ್ಥೆಯೂ (ಕಸಾಪ) ತೀರ ಜಡವಾಗಿ, ಈವರೆಗೆ ಮಾಡಿಕೊಂಡು ಬಂದದ್ದನ್ನೇ ಯಾಂತ್ರಿಕವಾಗಿ ಮಾಡುತ್ತಾ ಹೋಗುತ್ತಿದೆ. ಇದನ್ನು ನಿವಾರಿಸುವ ದಾರಿ ಯಾವುದು ಎಂದು ನಾವೆಲ್ಲರೂ ಯೋಚಿಸಬೇಕು' ಎಂದು ಹೇಳಿದ್ದರು. ನಲವತ್ತೈದು ವರ್ಷಗಳ ನಂತರವೂ ಆ 'ನಿವಾರಿಸುವ ದಾರಿ' ಗೋಚರಿಸದಿರುವುದು, ಆ ಬಗ್ಗೆ 'ನಾವೆಲ್ಲರೂ' ಯೋಚಿಸದಿರುವುದು ನಿರ್ಲಕ್ಷಿಸುವ ಸಂಗತಿಯಲ್ಲ.

ಹೋದ ವರ್ಷ ಹಾವೇರಿಯಲ್ಲಿ ನಡೆದ 86ನೇ ಸಮ್ಮೇಳನದ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಲೇಖಕರ ಪ್ರಾತಿನಿಧ್ಯದ ಪ್ರಶ್ನೆಯು ಚರ್ಚೆಯ ಕೇಂದ್ರ ಪ್ರವೇಶಿಸಿತು. ಅಂತಿಮವಾಗಿ ಬೆಂಗಳೂರಿನಲ್ಲಿ ಪ್ರತಿರೋಧದ ಸಾಹಿತ್ಯ ಸಮ್ಮೇಳನ ನಡೆದದ್ದನ್ನೂ ನಾಡು ಕಂಡಿದೆ. ಇದೀಗ ಮುಕ್ತಾಯಗೊಂಡ ಮಂಡ್ಯ ಸಾಹಿತ್ಯ ಸಮ್ಮೇಳನದ ಸನ್ನಿವೇಶ ಆಹಾರದ ಸಂಸ್ಕೃತಿ, ಹಕ್ಕು, ಸಮಾನತೆ ಕುರಿತ ಅರ್ಥಪೂರ್ಣ ಸಂಘರ್ಷದ ಹುಟ್ಟಿಗೆ ಕಾರಣವಾಗಿದ್ದು ಒಳ್ಳೆಯ ಬೆಳವಣಿಗೆ. ಆಹಾರ ಸಂಸ್ಕೃತಿ ವಿವಾದದಲ್ಲಿ ಪ್ರಜ್ಞಾವಂತ ಯುವಪೀಳಿಗೆಯೇ ಮುಂದೆ ನಿಂತು ವಿಶಿಷ್ಟವಾಗಿ ದನಿ ಎತ್ತಿದ್ದಂತೂ ಹೊಸ ಭರವಸೆ ಹುಟ್ಟಿಸುವಂತಿದೆ. ಹೀಗೆ ಈ ಸಮ್ಮೇಳನ ಕೂಡ ತನ್ನ ಪರಂಪರೆಗೆ ತಕ್ಕ ಹಾಗೆಯೇ ಕೆಲವು ಮೂಲಭೂತ ವರ್ತನೆಗಳನ್ನು ವಿಮರ್ಶೆಯ ಮೂಸೆಗೆ ಒಡ್ಡುವ ಮೂಲಕ ಕನ್ನಡ ಸಾಂಸ್ಕೃತಿಕ ವಲಯವನ್ನು ಮತ್ತೊಮ್ಮೆ ಜಾಗೃತಗೊಳಿಸಿದೆ.



ಸಮ್ಮೇಳನದ ಗೋಷ್ಠಿಗಳಲ್ಲಿನ ಪ್ರಾತಿನಿಧ್ಯ, ಸನ್ಮಾನ, ವಸತಿ, ಊಟೋಪಚಾರದಂತಹ ತಕ್ಷಣದ ಸೀಮಿತ ವಿಷಯಗಳ ಜೊತೆಗೆಯೇ ಕಸಾಪ ಸಂಸ್ಥೆಯ ಧೋರಣೆ ಮತ್ತು ಅದು ರೂಪಿಸುವ ಸಮ್ಮೇಳನದ ಸ್ವರೂಪದಲ್ಲಿ ತಲಸ್ಪರ್ಶಿ ಬದಲಾವಣೆ ಪ್ರತಿಪಾದಿಸುವುದರ ಕಡೆ ಹೆಚ್ಚಿನ ಗಮನ ಹರಿಸುವುದು ಅತ್ಯಗತ್ಯ.

ಮೊದಲನೆಯದಾಗಿ, ಆಡಂಬರ ಮತ್ತು ಅರ್ಥಪೂರ್ಣತೆ ತದ್ವಿರುದ್ಧ ಪದಗಳು ಎಂಬ ಸ್ಪಷ್ಟತೆ ಸಂಘಟಕರಲ್ಲಿ ಮೂಡಬೇಕಾಗುತ್ತದೆ. ಆಡಂಬರದ ಬೊಕ್ಕಣದಲ್ಲಿ ರೊಕ್ಕ ತುಂಬಿದ್ದರೆ, ಅರ್ಥಪೂರ್ಣತೆಯ ಹಿನ್ನೆಲೆಯಲ್ಲಿ ವೈಚಾರಿಕತೆ ನೆಲಸಿರುತ್ತದೆ. ಅದ್ದೂರಿತನಕ್ಕೆ ಹಣವಂತರ, ಅರ್ಥಪೂರ್ಣ ಆಚರಣೆಗೆ ವಿಚಾರವಂತರ ಅಗತ್ಯವಿರುತ್ತದೆ. ಸಂಘಟಕರ ಉದ್ದೇಶ 'ಸ್ವಾಗತ ಸಮಿತಿ' ಆಯ್ಕೆಯ ಹಂತದಲ್ಲಿಯೇ ನಿರ್ಧಾರವಾಗುತ್ತದೆ. ಇಲ್ಲಿಯೇ ಸರ್ಕಾರದ ನೆರವು, ಭಾಗವಹಿಸುವಿಕೆ, ದಾರಿ ತಪ್ಪಿಸುವಿಕೆಯ ಸರಣಿ ಏರ್ಪಡುವುದು. ಇದು ಕಸಾಪ ಸಂಸ್ಥೆಯ ಸ್ವಾಯತ್ತತೆಯ ಪ್ರಮಾಣ ನಿರ್ಣಯವಾಗುವ ಘಟ್ಟ ಕೂಡ. ಪರಿಷತ್ತು ಮತ್ತು ಸಮ್ಮೇಳನ ಸ್ವರೂಪದ ಬುನಾದಿಯನ್ನೇ ಅಲುಗಾಡಿಸುವ ಮೂಲಭೂತ ರಚನೆಗೆ ಕೈ ಹಾಕುವ ಎದೆಗಾರಿಕೆಯನ್ನು ಸದ್ಯದ ಸಂದರ್ಭದಲ್ಲಿ ನಿರೀಕ್ಷಿಸುವುದು ಕಷ್ಟ ಎಂಬುದು ಕಟು ವಾಸ್ತವವಾದರೂ ಅಸಾಧ್ಯವಲ್ಲ.

ಹಣಕಾಸಿನ ಆಯಾಮವನ್ನು ಬದಿಗಿಟ್ಟು ಅಳವಡಿಸಿಕೊಳ್ಳಬಹುದಾದ ಸುಧಾರಣೆ, ಬದಲಾವಣೆಗಳೂ ಬಹಳಷ್ಟು ಇವೆ. ಬಹುಮುಖ್ಯವಾಗಿ, ರಾಜಶಾಹಿಯ ಪಳೆಯುಳಿಕೆಯಂತೆ ಜಾರಿಯಲ್ಲಿರುವ ಸಮ್ಮೇಳನಾಧ್ಯಕ್ಷರ ರಥಯಾತ್ರೆಯನ್ನು ಇತಿಹಾಸಕ್ಕೆ ಸೇರಿಸಬೇಕು. ಹಾಗೆಯೇ ಮಹಿಳೆಯರಿಂದ ಪೂರ್ಣಕುಂಭ ಸ್ವಾಗತ ಏರ್ಪಡಿಸುವ ಸಂಪ್ರದಾಯ ಅವಮಾನಕಾರಿ ಮತ್ತು ಅಮಾನವೀಯ ಎಂಬುದನ್ನು ಬೇಗ ಅರಿತಷ್ಟೂ ಒಳಿತು. ಮಂಡ್ಯ ಸಮ್ಮೇಳನದಲ್ಲಿ ಕೆಲವು ಮಹಿಳೆಯರು ಪೂರ್ಣಕುಂಭದ ಬದಲು ಪುಸ್ತಕಗಳನ್ನು ಹೊತ್ತು ಸಾಗುವ ಮೂಲಕ ಈ ಸಂಪ್ರದಾಯವನ್ನು ಭಾಗಶಃ ಮುರಿದಿರುವುದು ಸ್ವಾಗತಾರ್ಹ.

ಪ್ರೊ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಮಂಡ್ಯ ಸಾಹಿತ್ಯ ಸಮ್ಮೇಳನದ ಪ್ರಧಾನ ವೇದಿಕೆಯಲ್ಲಿಯೇ ಹೇಳಿದಂತೆ, 'ರಾಜಕಾರಣಿಗಳು ಅಕ್ಷರ ಶತ್ರುಗಳು' ಎಂಬುದರಲ್ಲಿ ಅನುಮಾನವೇ ಇಲ್ಲ. ಆದಾಗ್ಯೂ ನುಡಿಮೇಳದಲ್ಲಿ ರಾಜಕಾರಣಿಗಳಿಗೇಕೆ ಅಷ್ಟೊಂದು ಮಹತ್ವ?

ನೆರೆಯ ಮಹಾರಾಷ್ಟ್ರದಲ್ಲಿ ನಡೆಯುವ ಮರಾಠಿ ಸಾಹಿತ್ಯ ಸಮ್ಮೇಳನದ ವೇದಿಕೆಯಲ್ಲಿ ರಾಜಕಾರಣಿಗಳಿಗೆ ಅವಕಾಶವಿಲ್ಲ. ಅವರು ಸಾಮಾನ್ಯ ಜನರಂತೆ ಸಭಿಕರ ಸಾಲಿನಲ್ಲಿ ಕುಳಿತು ಸಾಹಿತಿಗಳ ಮಾತನ್ನು ಆಲಿಸುತ್ತಾರೆ. ಅದೇ ರೀತಿ ಕರ್ನಾಟಕದ ಮುಖ್ಯಮಂತ್ರಿ ಆದಿಯಾಗಿ ರಾಜಕಾರಣಿಗಳು ಸಾಹಿತ್ಯ ಸಮ್ಮೇಳನದಲ್ಲಿ ಸಭಿಕರಾಗಿ ಕುಳಿತುಕೊಳ್ಳಬಾರದೇ...?

ಓದುವವರ ಸಂಖ್ಯೆ ಕ್ಷೀಣಿಸಿದೆ, ಯುವಜನರ ಆಸಕ್ತಿಗಳು ಬದಲಾಗಿವೆ ಎಂಬ ಆರೋಪದ ನಡುವೆಯೂ ಹೊಸಪೀಳಿಗೆಯ ಸಾಹಿತ್ಯಕ ಚಟುವಟಿಕೆಗಳು, ಕೊಡುಗೆಗಳು ಗಮನಾರ್ಹವಾಗಿವೆ. ವಿವಿಧ ವೃತ್ತಿ, ಪ್ರದೇಶ, ಸಾಮಾಜಿಕ ಹಿನ್ನೆಲೆಯ ಈ ಯುವಪಡೆಯಲ್ಲಿ ತಾಂತ್ರಿಕ ಪರಿಣತರೂ ಇದ್ದಾರೆ. ಸಾಕಷ್ಟು ಬಳಲಿರುವ ಹಿರಿಯರು ಇವರನ್ನು ಒಳಗೊಳ್ಳುವ, ಇವರಿಗೆ ದಾರಿ ಬಿಡುವ ದೊಡ್ಡ ಮನಸ್ಸು ಮಾಡಬೇಕಷ್ಟೇ!

ಚುರುಮುರಿ

ಸಂಸ್ಕೃತಿ ರಕ್ಷಕರು

• ಸುಮಂಗಲಾ

'ಪೊಲೀಸು ಕಾನ್‌ಸ್ಟೆಬಲ್‌ಗಳನ್ನು ಜುಜುಬಿ ಅಂತ ಹಂಗಿಸಬಾರದು, ತಿಳಕೋ' ಎಂದಿತು ಬೆಕ್ಕಣ್ಣ.

ನನಗೆ ತಲೆಬುಡ ತಿಳಿಯಲಿಲ್ಲ.

'ಭೋಪಾಲಿನಲ್ಲಿ ಸಾರಿಗೆ ಇಲಾಖೆಯ ನಿವೃತ್ತ ಕಾನ್‌ಸ್ಟೆಬಲ್ ಒಬ್ಬರ ಮನ್ಯಾಗೆ 40 ಕೆ.ಜಿ. ಬೆಳ್ಳಿ ಗಟ್ಟಿ, ಇನ್ನೂರು ರೂಪಾಯಿ ನೋಟಿನ ಕಂತೆಗಟ್ಟಲೆ ಕಟ್ಟುಗಳು ಸಿಕ್ಕಾವಂತೆ. ಕಾನ್‌ಸ್ಟೆಬಲ್ ಎಷ್ಟ್ ತೂಕದ ಆಸಾಮಿ ನೋಡು' ಎಂದಿತು ಬೆಕ್ಕಣ್ಣ.

'ಅದೇನ್ ಮಹಾ ಬಿಡಲೇ... ಭೋಪಾಲ್ ಸಮೀಪ ಕಾಡೊಳಗೆ ಒಂದ್ ಕಾರಿನಾಗೆ 52 ಕೆ.ಜಿ. ಚಿನ್ನದ ಬಿಸ್ಕೀಟು, 10 ಕೋಟಿ ರೊಕ್ಕ ಸಿಕ್ಕೈತಂತೆ' ಎಂದೆ.

'ದಿನಾ ಚಾ ಜೊತಿಗಿ ಎರಡು ಪಾರ್ಲೇಜಿ ಬಿಸ್ಕೀಟು ತಿನ್ನೋರು ನಾವು, 52 ಕೆ.ಜಿ. ಪಾರ್ಲೇಜಿ ತಿನ್ನೋದಕ್ಕೆ ನಮಗೆ ಎಷ್ಟ್ ತಿಂಗಳು ಬೇಕಾಗತೈತಿ. 52 ಕೆ.ಜಿ. ಚಿನ್ನದ ಬಿಸ್ಕೀಟು ಅಂವನ ಎಷ್ಟ್ ತಲೆಮಾರು ಕೂತು ತಿನ್ನಬೌದು!' ಎಂದು ಬೆಕ್ಕಣ್ಣ ಅಚ್ಚರಿಪಟ್ಟಿತು.

'ಅದ್ಸರಿ... ನಾ ಚುರುಮುರಿ ಸಾಹಿತಿ ಅದೀನಿ, ನಾನೂ ಮಂಡ್ಯ ಸಾಹಿತ್ಯ ಸಮ್ಮೇಳನಕ್ಕೆ ಹೋಗತೀನಿ ಅಂತ ಕುಣಿತಿದ್ದೋನು ಈಗ ಬಿಸ್ಕೀಟು ಲೆಕ್ಕ ಮಾಡತಾ ಕೂತೀಯಲ್ಲ' ಎಂದೆ.

'ಭಯಂಕರ ಗದ್ದಲ ಇರತೈತಂತ ಹೋಗಲಿಲ್ಲ. ಮತ್ತೆ ಪ್ರತಿ ವರ್ಷ ಸಮ್ಮೇಳನದಾಗೆ ಏನೇನೋ ಠರಾವು ಮಂಡಿಸತಾರಲ್ಲ, ಅವು ಜಾರಿ ಆಗತಾವೇನು?' ಎಂದು ಘನಗಂಭೀರವಾಗಿ ಕೇಳಿತು.

'ನೋ ಕಮೆಂಟ್ಸ್'.

'ಎಲ್ಲಾ ಪುರುಷ ರಾಜಕಾರಣಿಗಳು ಮಹಿಳೆಯರಿಗೆ ಗೌರವದಿಂದ ಸಿರಿಗನ್ನಡದಲ್ಲಿ ಮಾತಾಡಬೇಕು. ಅಸಭ್ಯವಾಗಿ ಮಾತಾಡೋರಿಗೆ ಹೆಣ್ಣುಮಕ್ಕಳು ವೋಟು ಹಾಕಂಗಿಲ್ಲ ಅಂತ ಈ ಸಲ ಠರಾವು ಮಂಡಿಸಬೇಕು'.

'ಯಾವುದೇ ರಾಜಕಾರಣಿ ಅಸಭ್ಯವಾಗಿ ಮಾತಾಡಿದ್ರೆ, ಅವರ ಪಕ್ಷದ ಮಹಿಳೆಯರೇ ಅಂವಾ ಹಂಗಂದಿಲ್ಲ, ಅಂವಾ ಭಯಂಕರ ಸಂಸ್ಕೃತಿ ರಕ್ಷಕ ಅಂತ ಸಮರ್ಥನೆಗೆ ನಿಲ್ಲತಾರೆ. ಠರಾವು ಯಾರು ಕೇಳೋರು?'

'ಮನುಷ್ಯಪ್ರಾಣಿ ಬಿಟ್ಟರೆ ಬೇರೆ ಯಾವ ಗಂಡುಪ್ರಾಣಿಗಳೂ ಹೆಣ್ಣುಪ್ರಾಣಿ ಬಗ್ಗೆ ಹಿಂಗೆ ಕೀಳಾಗಿ ನಡ್ಕೊಳಂಗಿಲ್ಲ' ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

ಸಂಗತ

ಗಣಿತ... ಮೆಲ್ಲೋಣ ಹುರಿಗಡಲೆಯಂತೆ

ಗಣಿತ ಕಲಿಕೆ ಕಬ್ಬಿಣದ ಕಡಲೆಯಂತೆ ಎಂಬ ಮಾತನ್ನು ಬದಿಗೊತ್ತಿ, ಸುಲಭ ಹಾಗೂ ಆಕರ್ಷಕ ವಿಧಾನಗಳ ಮೂಲಕ ಅದನ್ನು ಕಲಿಸುವ ಪ್ರಯತ್ನ ಆಗಬೇಕಾಗಿದೆ

• ಶ್ರೀಗುರು

ಉದ್ಯೋಗಾವಕಾಶ ಕಲ್ಪಿಸುವುದಕ್ಕಾಗಿ ವಿದ್ಯಾರ್ಥಿಗಳ ಸಂದರ್ಶನ ಮಾಡಲು ಕ್ಯಾಂಪಸ್‌ಗೆ ಬಂದಿದ್ದ ತಾಂತ್ರಿಕ ಕಂಪನಿಯೊಂದರ ಅಧಿಕಾರಿ, ಹಾಲ್‌ನಲ್ಲಿ ಕುಳಿತಿದ್ದ ವಿದ್ಯಾರ್ಥಿಗಳನ್ನು ಉದ್ದೇಶಿಸಿ 'ಮ್ಯಾತ್ಸ್ ಅಪ್ಲಿಕೇಶನ್ ಚೆನ್ನಾಗಿ ಗೊತ್ತಿರುವವರು ಮಾತ್ರ ಕೈ ಎತ್ತಿ' ಎಂದರು. ಅಲ್ಲಿ ಸೇರಿದ್ದ ನೂರು ವಿದ್ಯಾರ್ಥಿಗಳಲ್ಲಿ ಕೈಯೆತ್ತಿದವರು ಹತ್ತು- ಹನ್ನೆರಡು ಮಂದಿ ಮಾತ್ರ. ಅಷ್ಟು ಮಂದಿಯನ್ನು ಸಂದರ್ಶನದ ಕೊಠಡಿಗೆ ಆಹ್ವಾನಿಸಿ 'ಸರ್, ಮ್ಯಾತಮ್ಯಾಟಿಕ್ಸ್ ಈಸ್ ವೆರಿ ಇಂಪಾರ್ಟೆಂಟ್ ಫಾರ್ ಅವರ್ ಕಂಪನಿ ಜಾಬ್ಸ್, ನೆಕ್ಸ್ಟ್ ಟೈಮ್ ನಾವು ಕ್ಯಾಂಪಸ್ ರಿಕ್ರೂಟ್ಮೆಂಟ್‌ಗೆ ಬರುವ ಹೊತ್ತಿಗೆ ಮ್ಯಾತಮ್ಯಾಟಿಕ್ಸ್ ಕಲಿಸುವುದರ ಕಡೆ ಗಮನ ಕೊಡಿ' ಎಂದು ಅಧ್ಯಾಪಕರಾದ ನಮಗೆ ಸಲಹೆ ನೀಡಿದರು.

'ಏನ್ರಪ್ಪಾ ನಿಮ್ಮ ಸಮಸ್ಯೆ' ಎಂದು ಉಳಿದ ವಿದ್ಯಾರ್ಥಿಗಳನ್ನು ಕೇಳಿದೆ. 'ನಮಗೆ ಗಣಿತ ಬರಲ್ಲ ಅಂತಲ್ಲ, ಆದರೆ ಗಣಿತದ ಕ್ರಮಗಳನ್ನು ಅಪ್ಲೈ ಮಾಡುವುದು ಹೇಗೆ ಎಂಬುದು ಗೊತ್ತಿಲ್ಲ. ಆದ್ದರಿಂದ ನಾವು ಕೈ ಎತ್ತಲಿಲ್ಲ' ಎಂದರು. ದೇಶದ ಬಹುತೇಕ ವಿದ್ಯಾರ್ಥಿಗಳು ಗಣಿತದ ವಿಷಯದಲ್ಲಿ ಇಂಥದೊಂದು ಸಂದಿಗ್ಧ ಮತ್ತು ಅನನುಕೂಲವನ್ನು ಅನುಭವಿಸಿಯೇ ಇರುತ್ತಾರೆ. ಶಾಲೆ ಕಾಲೇಜುಗಳಲ್ಲಿ ಗಣಿತವನ್ನು ಒಂದು ವಿಷಯವನ್ನಾಗಿ ಕಲಿಸಲಾಗುತ್ತದೆಯೇ ವಿನಾ ಅದನ್ನು ದೈನಂದಿನ ಜೀವನದ ಸಮಸ್ಯೆಗಳಿಗೆ ಹೇಗೆ ಅನ್ವಯಿಸಬಹುದು ಎಂಬುದನ್ನು ಹೇಳಿಕೊಡುವುದಿಲ್ಲ. ಕಾರಣವಿಷ್ಟೇ, ಬಹಳಷ್ಟು ಸಂದರ್ಭಗಳಲ್ಲಿ, ಕಲಿಸುವವರೇ ಇದನ್ನು ಕಲಿತಿರುವುದಿಲ್ಲ!

ವಿಜ್ಞಾನ- ತಂತ್ರಜ್ಞಾನದ ಎಲ್ಲ ಕ್ಷೇತ್ರಗಳಲ್ಲೂ ಗಣಿತ ಬಳಕೆಯಾಗುತ್ತಿದೆ. ದೊಡ್ಡ ಸಂಬಳದ ಕೆಲಸ ಬೇಕು ಎನ್ನುವವರು ಗಣಿತವನ್ನು ಕಲಿಯಲೇಬೇಕಾದ ಸಂದರ್ಭ ಸೃಷ್ಟಿಯಾಗಿದೆ. ಈ ನಡುವೆ ರಾಜ್ಯದ 22 ಲಕ್ಷ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನ ಬೋಧಿಸಲು ಇರುವ ಶಿಕ್ಷಕರ ಸಂಖ್ಯೆ ಬರೀ 9,000 ಎಂಬ ಆಘಾತಕಾರಿ ಮಾಹಿತಿ ಹೊರಬಿದ್ದಿದೆ. ಗಣಿತವನ್ನು ಸರಿಯಾಗಿ ಕಲಿಸುವುದು ಒಂದು ಕಡೆ ಇರಲಿ, ಕಲಿಸಲು ಅಗತ್ಯ ಸಂಖ್ಯೆಯ ಶಿಕ್ಷಕರೇ ಇಲ್ಲದಿದ್ದರೆ ಪ್ರೌಢಶಿಕ್ಷಣಕ್ಕೆ ಕಾಲಿಡುವ ವಿದ್ಯಾರ್ಥಿಗಳಿಂದ ನಾವು ಏನನ್ನು ನಿರೀಕ್ಷಿಸಬಹುದು? 2000 ಇಸವಿಯಿಂದ ಹೈಸ್ಕೂಲು ಮತ್ತು ಪದವಿಪೂರ್ವ ಶಿಕ್ಷಣ ಕಲಿಯುವ 15 ವರ್ಷ ವಯೋಮಾನದ ವಿದ್ಯಾರ್ಥಿಗಳ ಗಣಿತ, ವಿಜ್ಞಾನ ಕಲಿಕೆ ಮತ್ತು ಇಂಗ್ಲಿಷ್ ಭಾಷೆಯ ಪಠ್ಯವನ್ನು ಓದುವ ಕ್ಷಮತೆಯನ್ನು ಪರೀಕ್ಷಿಸಲು ಅಂತರರಾಷ್ಟ್ರೀಯ ಮಟ್ಟದ ಪಿಸ (ಪಿಐಎಸ್‌ಎ- ಪ್ರೋಗ್ರ್ಯಾಮ್ ಫಾರ್ ಇಂಟರ್‌ನ್ಯಾಷನಲ್ ಸ್ಟೂಡೆಂಟ್ ಅಸೆಸ್‌ಮೆಂಟ್) ಎಂಬ ಪರೀಕ್ಷೆಯನ್ನು ಒಇಸಿಡಿ (ಆರ್ಗನೈಜೇಷನ್ ಫಾರ್ ಎಕನಾಮಿಕ್ ಕಾರ್ಪೊರೇಷನ್ ಆ್ಯಂಡ್ ಡೆವಲಪ್‌ಮೆಂಟ್) ಒಕ್ಕೂಟವು ನಡೆಸುತ್ತಿದೆ.

2009ರಲ್ಲಿ ನಾವು ಪ್ರಥಮ ಬಾರಿಗೆ ಪರೀಕ್ಷೆಯಲ್ಲಿ ಇತರ 74 ದೇಶಗಳೊಂದಿಗೆ ಭಾಗವಹಿಸಿದ್ದೆವು. ಶೈಕ್ಷಣಿಕವಾಗಿ ಮುಂದುವರಿದ ಹಿಮಾಚಲಪ್ರದೇಶ ಮತ್ತು ತಮಿಳುನಾಡಿನ 5,000 ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಆಯ್ಕೆ ಮಾಡಲಾಗಿತ್ತು. ಫಲಿತಾಂಶ ಹೊರಬಿದ್ದಾಗ ಚೀನಾ, ಸಿಂಗಪುರ, ಹಾಂಗ್‌ಕಾಂಗ್‌ನ ವಿದ್ಯಾರ್ಥಿಗಳು ಕ್ರಮವಾಗಿ ಮೊದಲ ಮೂರು ಸ್ಥಾನಗಳಲ್ಲಿದ್ದರು. ನಮ್ಮ ವಿದ್ಯಾರ್ಥಿಗಳು 73ನೇ ಸ್ಥಾನ ಗಳಿಸಿದ್ದರು. ವಿಶ್ವಮಟ್ಟದಲ್ಲಿ ಮುಖಭಂಗ ಅನುಭವಿಸಿದ ನಾವು 'ಪರೀಕ್ಷೆಗೆ ನಿಗದಿ ಮಾಡಿದ ಸಿಲಬಸ್‌ನಿಂದ ಹೊರತಾದ ಪ್ರಶ್ನೆಗಳಿದ್ದವು' ಎಂಬ ಕಾರಣ ನೀಡಿ 2011 ಮತ್ತು 2015ರ ಪರೀಕ್ಷೆಗಳಲ್ಲಿ ಭಾಗವಹಿಸಲೇ ಇಲ್ಲ. ಆಗ ನಮ್ಮ ವಿದ್ಯಾರ್ಥಿಗಳ ಗಣಿತ ಕಲಿಕಾ ಕ್ಷಮತೆಯನ್ನು ನಮ್ಮದೇ ಪರೀಕ್ಷಾ ವಿಧಾನದ ಮೂಲಕ ಪರೀಕ್ಷಿಸಲು ನಿರ್ಧರಿಸಿದ ಕೇಂದ್ರ ಸರ್ಕಾರವು 2015ರಿಂದ ನ್ಯಾಷನಲ್ ಅಚೀವ್‌ಮೆಂಟ್ ಸರ್ವೆ (ಎನ್‌ಎಎಸ್) ಎಂಬ ಪರೀಕ್ಷೆಯನ್ನು ರೂಪಿಸಿ, ಬಹುಪಾಲು ರಾಜ್ಯಗಳ ಹತ್ತನೇ ತರಗತಿ ಓದುತ್ತಿದ್ದ 2.7 ಲಕ್ಷ ವಿದ್ಯಾರ್ಥಿಗಳಿಗೆ ಐದು ತಿಂಗಳು ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಇಂಗ್ಲಿಷ್ ಮತ್ತು ಆಯಾ ರಾಜ್ಯದ ಮುಖ್ಯ ಭಾಷೆಯ ವಿಷಯಗಳ ಪರೀಕ್ಷೆ ನಡೆಸಿತು.

ಶಾಲಾ ಮಟ್ಟದ ಪರೀಕ್ಷೆಗಳಲ್ಲಿ ಶೇ 95ಕ್ಕೂ ಹೆಚ್ಚು ಅಂಕ ಗಳಿಸುತ್ತಿದ್ದ ವಿದ್ಯಾರ್ಥಿಗಳು ಎನ್‌ಎಎಸ್ ಪರೀಕ್ಷೆಗಳಲ್ಲಿ ಶೇ 50ರಷ್ಟು ಅಂಕಗಳನ್ನು ಗಳಿಸಲು ಸಹ ವಿಫಲವಾದದ್ದು ಕಂಡುಬಂತು. ಶಾಲೆಗಳಲ್ಲಿ ಪರಿಕಲ್ಪನೆಯ ವಿಧಾನದಲ್ಲಿ ವಿಷಯಗಳನ್ನು ಕಲಿಸಿಲ್ಲ, ಗಣಿತದ ಮೂಲ ಪ್ರಕ್ರಿಯೆಗಳ ಕುರಿತು ಮಕ್ಕಳಲ್ಲಿ ಸರಿಯಾದ ತಿಳಿವಳಿಕೆಗಳಿಲ್ಲ, ಅರ್ಥ ಮಾಡಿಕೊಳ್ಳದೆ ಕಂಠಪಾಠ ಮಾಡಿ ಕಲಿಯುವ ಕ್ರಮ ಇನ್ನೂ ಜಾರಿಯಲ್ಲಿದೆ ಎಂಬ ಅಂಶಗಳು ಆಗ ಬೆಳಕಿಗೆ ಬಂದವು.

ಗಣಿತ ಕಲಿಕೆಯನ್ನು ಸುಲಭ ಮತ್ತು ಆಕರ್ಷಕವಾಗಿಸಲು, ಕಲಿಸುವ ವಿಧಾನಗಳ ಬಗ್ಗೆ ಹೆಚ್ಚು ಕರಾರುವಾಕ್ಕಾದ ಸಂಶೋಧನೆಗಳು ಆಗಬೇಕಿದೆ. ವಿಶ್ವ ಮಾರುಕಟ್ಟೆಯಲ್ಲಿ ಟ್ರೆಂಡಿಂಗ್‌ನಲ್ಲಿರುವ ಮತ್ತು ಸ್ಥಳೀಯವಾಗಿ ಪ್ರಸಿದ್ಧಿಗೆ ಬರುತ್ತಿರುವ ನಾವೀನ್ಯದ ಕುರಿತು ಪಠ್ಯಪುಸ್ತಕಗಳಲ್ಲಿ ಪಾಠಗಳಿರಬೇಕು. ಗಣಿತವನ್ನು ವಿನೋದದ ಆಟದಂತೆ, ಸಂಗೀತದಂತೆ, ಚದುರಂಗದಂತೆ, ಚಿತ್ರಕಲೆಯಂತೆ ಕಲಿಯುವ ಅವಕಾಶಗಳಿವೆ. ಬರೀ ಕೆಲವು ಉದಾಹರಣೆಗಳು ಮತ್ತು ಸಮಸ್ಯೆಗಳನ್ನು ಪಟ್ಟಿ ಮಾಡುವ ಪಠ್ಯಪುಸ್ತಕಗಳು ಹೊಸ ಕಾಲದ ಅಗತ್ಯಕ್ಕೆ ತಕ್ಕಂತೆ ಅಪ್‌ಡೇಟ್ ಆಗಬೇಕು. ಶಿಕ್ಷಕರು ನೂತನ, ಸುಲಭ ಮತ್ತು ಅನ್ವಯಿಕ ಕ್ರಮಗಳನ್ನು ವಿದ್ಯಾರ್ಥಿಗಳಿಗೆ ಹೇಗೆ ಕಲಿಸಬೇಕು ಎಂಬುದರ ಬಗ್ಗೆ ಪ್ರತ್ಯೇಕ ಹಾಗೂ ಕಡ್ಡಾಯ ತರಬೇತಿ ಪಡೆಯಬೇಕು. ರಾಷ್ಟ್ರೀಯ ಗಣಿತ ದಿನಾಚರಣೆಯ (ಡಿ. 22) ಈ ಸಂದರ್ಭದಲ್ಲಿ, ಗಣಿತ ಕಲಿಕೆಯ ಉದ್ದೇಶ ಬದಲಾಗಬೇಕಿರುವ ಅಗತ್ಯದ ಕುರಿತು ಚಿಂತಿಸಬೇಕಿದೆ.

ವಾಚಕರ ವಾಣಿ

ಧೀಮಂತ ನಟನಿಗೆ ಸಂದ ಗೌರವ

ನಮ್ಮ ಧೀಮಂತ ಸಿನಿಮಾ ನಟರಲ್ಲಿ ರಾಜ್‌ಕಪೂರ್ ಒಬ್ಬರು. ನಟನಾಗಿ, ನಿರ್ದೇಶಕನಾಗಿ ಹಿಂದಿ ಚಿತ್ರರಂಗದಲ್ಲಿ ತಮ್ಮದೇ ಛಾಪು ಮೂಡಿಸಿದವರು. ಇಂತಹ ಕಲಾವಿದನ ಜನ್ಮಶತಮಾನೋತ್ಸವ ನಡೆಯುತ್ತಿರುವುದು ತುಂಬಾ ಸಂತೋಷದ ವಿಷಯ. ಈ ಪ್ರಯುಕ್ತ, ಮುಂದಿನ ಒಂದು ಇಡೀ ವರ್ಷ 40 ನಗರಗಳ ನೂರಾರು ಚಿತ್ರಮಂದಿರಗಳಲ್ಲಿ ಸಿನಿಪ್ರೇಮಿಗಳಿಗಾಗಿ ರಾಜ್‌ಕಪೂರ್ ಅವರ ಸಿನಿಮಾಗಳ ಪ್ರದರ್ಶನ ಏರ್ಪಡಿಸಿರುವುದು ಸ್ವಾಗತಾರ್ಹ.

ಇಂದಿರಾ ಶ್ರೀಧರ್, ಮಳಲಕೆರೆ

'ನೊಣ ತಿಂದ...' ನುಂಗಣ್ಣ!

ಕೊಪ್ಪಳ ಜಿಲ್ಲೆಯ ಸಹಕಾರಿ ಸಂಘಗಳ ಉಪನಿಬಂಧಕ ದಸ್ತಗಿರಿ ಅಲಿ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದು, ಲಂಚವಾಗಿ ಪಡೆದಿದ್ದ ₹ 500ರ ನಾಲ್ಕು ನೋಟುಗಳನ್ನು ನುಂಗಿದ್ದರಿಂದ ಅಧಿಕಾರಿಗಳು ಪೇಚಿಗೆ ಸಿಲುಕಿದ್ದಾಗಿ ವರದಿಯಾಗಿದೆ. ನುಂಗಿದ್ದ ನೋಟುಗಳು ಗಂಟಲಲ್ಲೇ ಸಿಲುಕಿಕೊಂಡಾಗ ತಕ್ಷಣವೇ ಎಚ್ಚೆತ್ತ ಪೊಲೀಸರು ವಿಡಿಯೊ ಚಿತ್ರೀಕರಣ ಮಾಡಿಕೊಂಡು, ಗಂಟಲಿಗೇ ಕೈಹಾಕಿ ಹಣ ತೆಗೆದಿರುವುದು ತಮಾಷೆಯೆನಿಸಿದರೂ ಅದು ಅಧಿಕಾರಿಗಳ ಸಮಯಪ್ರಜ್ಞೆಯನ್ನು ತಿಳಿಸುತ್ತದೆ.

ಕೆರೆ, ಬೆಟ್ಟ, ಅರಣ್ಯ, ರಾಜಕಾಲುವೆ, ಗೋಮಾಳ, ಸರ್ಕಾರಿ ಜಾಗ, ಆಟದ ಮೈದಾನ, ರಸ್ತೆ, ತೆರಿಗೆ ಹಣದಂತಹವನ್ನು ನುಂಗಿದರೂ ಸಿಕ್ಕಿಹಾಕಿಕೊಳ್ಳದೆ ಅರಗಿಸಿಕೊಂಡ ಅನೇಕ ಭ್ರಷ್ಟರು ನಮ್ಮ ನಡುವೆ ಇದ್ದಾರೆ. ಇಂತಹ ಕಾಲಘಟ್ಟದಲ್ಲಿ, ಅಕ್ಷರಶಃ ನೋಟುಗಳನ್ನೇ ನುಂಗಿ ಅರಗಿಸಿಕೊಳ್ಳಲಾಗದ ಇವರನ್ನು ಕಂಡು ನಗೆಯುಕ್ಕುತ್ತಿದೆ. 'ನೊಣ ತಿಂದು ಜಾತಿ ಕೆಡಿಸಿಕೊಂಡ' ಎಂಬ ಮಾತಿಗೆ ಇವರು ಉದಾಹರಣೆಯಂತೆಯೂ ಕಾಣುತ್ತಾರೆ. ಅಪರಾಧ ಸಣ್ಣದಾದರೇನು ದೊಡ್ಡದಾದರೇನು ಶಿಕ್ಷಾರ್ಹವೇ ಸರಿ. ಸಣ್ಣ ಮೀನುಗಳಿಗೆ ಮಾತ್ರ ಬಲೆ ಹಾಕಿ ಹಿಡಿದು ಬೀಗುವುದಕ್ಕಿಂತ ತಿಮಿಂಗಿಲಗಳಿಗೂ ಬಲೆ ಬೀಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಜಂಜಡದ ಬದುಕಿಗೆ ಧ್ಯಾನದ ತುರ್ತು

ವಿಶ್ವಸಂಸ್ಥೆಯು ಡಿಸೆಂಬರ್ 21 ಅನ್ನು ವಿಶ್ವ ಧ್ಯಾನ ದಿನವನ್ನಾಗಿ ಘೋಷಿಸಿರುವ ಸಂದರ್ಭದಲ್ಲಿ, ಧ್ಯಾನವು ಹೇಗೆ ಮನದ ಏಕಾಗ್ರತೆಗೆ ಕಾರಣವಾಗುತ್ತದೆ ಎಂಬ ಬಗ್ಗೆ ನಾವು ಚಿಂತಿಸಬೇಕಾಗಿದೆ. ಉಪನಿಷತ್ತಿನಲ್ಲಿ ಒಂದು ರುಕ್ವಾಕ್ಯ ಇದೆ. 'ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷ್ಯಯೋಹೋ' ಎಂದು. ಅದರ ತಾತ್ಪರ್ಯ ಹೀಗಿದೆ: ಮನಸ್ಸೇ ನಮ್ಮ ಬಂಧನ, ಮೋಕ್ಷ ಹಾಗೂ ಸುಖ–ದುಃಖಕ್ಕೆ ಕಾರಣವಾಗಿದೆ. ಸಕಲೇಂದ್ರಿಯಗಳಿಗೆ ಮನಸ್ಸು ಸಚೇತಕ ಶಕ್ತಿಯಾಗಿದೆ.

ಇದೇ ವಿಚಾರವನ್ನು ಕವಿ ಡಿ.ವಿ.ಗುಂಡಪ್ಪನವರು ತಮ್ಮ ಕೃತಿ 'ಮಂಕುತಿಮ್ಮನ ಕಗ್ಗ'ದಲ್ಲಿ ತುಂಬಾ ಸುಂದರವಾಗಿ ಮನ ಮುಟ್ಟುವಂತೆ ಸರಳೀಕರಿಸಿದ್ದಾರೆ. ಇಂದಿನ ಜಂಜಡದ, ತಳಮಳದ ಬದುಕಿನಲ್ಲಿ ನಮ್ಮ ಮನೋಸ್ಥಿತಿಯನ್ನು ಧ್ಯಾನವೆಂಬ ಯುಕ್ತಿ ಮಾರ್ಗದಲ್ಲಿ ನಿಭಾಯಿಸುವುದು ಅತ್ಯಂತ ಸಮರ್ಪಕ ಮತ್ತು ತುರ್ತು ಅಗತ್ಯವೂ ಆಗಿದೆ ಎನ್ನುವುದು ಈ ಹೊತ್ತಿನ ಆಶಯ.

ವಿ.ಕೆ.ವೆಂಕಟಸುಬ್ಬರಾವ್, ಹುಬ್ಬಳ್ಳಿ

ಜನಪ್ರತಿನಿಧಿಗಳು ಹೊಣೆಯರಿತು ನಡೆಯಲಿ

ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹಾಗೂ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರ ನಡುವೆ ವಿಧಾನಮಂಡಲದ ಅಧಿವೇಶನದ ಸಂದರ್ಭದಲ್ಲಿ ಬೆಳಗಾವಿಯಲ್ಲಿ ನಡೆದಿದೆ ಎನ್ನಲಾದ ಮಾತಿನ ಚಕಮಕಿ ರಾಜ್ಯದಾದ್ಯಂತ ಸದ್ದು ಮಾಡಿತು. ಇದರ ಪರ, ವಿರೋಧದ ಚರ್ಚೆಗಳು ಏನೇ ಇರಲಿ, ಜನಪ್ರತಿನಿಧಿಗಳು ಎನಿಸಿಕೊಂಡವರು ಅಧಿವೇಶನದ ಸಂದರ್ಭದಲ್ಲಿ ಸಂಯಮದಿಂದ ವರ್ತಿಸಬೇಕು. ಅವರ ನಡವಳಿಕೆಗಳನ್ನು ಇಡೀ ರಾಜ್ಯದ ಜನ ಗಮನಿಸುತ್ತಿರುತ್ತಾರೆ. ವಿಧಾನಮಂಡಲದ ಅಧಿವೇಶನಗಳಲ್ಲಿ ಅಸಭ್ಯವಾದ ಪದಗಳ ಬಳಕೆ, ಕೈಕೈ ಮಿಲಾಯಿಸುವುದು, ಅಸಂಸದೀಯ ನಡವಳಿಕೆಯಂತಹ ಹೀನ ಕೃತ್ಯಗಳು ಜನಪ್ರತಿನಿಧಿಗಳಿಗೆ ಶೋಭೆ ತರುವುದಿಲ್ಲ. ಇಂತಹ ನಡವಳಿಕೆ ಸರ್ವತಾ ಖಂಡನೀಯ.

ಇದರಲ್ಲಿ ಆ ಪಕ್ಷ, ಈ ಪಕ್ಷ ಎಂದು ಬೆರಳು ತೋರಿಸುವುದು ಕೂಡ ಸರಿಯಲ್ಲ. ಸದನದಲ್ಲಿ ಅಸಭ್ಯ ಚಿತ್ರ ವೀಕ್ಷಿಸುವುದೂ ಸೇರಿದಂತೆ, ರಾಜ್ಯದ ಸಂಸದೀಯ ಇತಿಹಾಸದಲ್ಲಿ ಇಂತಹ ಬಹಳಷ್ಟು ಕಹಿ ಪ್ರಕರಣಗಳು ನಡೆದಿದ್ದು, ವಿಧಾನಮಂಡಲದ ಘನತೆಯನ್ನು ಕುಗ್ಗಿಸಿವೆ ಎಂದು ವಿಷಾದಪೂರ್ವಕವಾಗಿ ಹೇಳಬೇಕಾಗಿದೆ. ಇನ್ನು ಮುಂದಾದರೂ ನಮ್ಮ ಜನಪ್ರತಿನಿಧಿಗಳು ವಿಧಾನಮಂಡಲದ ಅಧಿವೇಶನಗಳಲ್ಲಿ ಜವಾಬ್ದಾರಿಯಿಂದ ಹಾಗೂ ಸಂಯಮದಿಂದ ನಡೆದುಕೊಳ್ಳಲಿ.

ಕೆ.ವಿ.ವಾಸು, ಮೈಸೂರು

ನುಡಿಗಳ ನಡುವೆ ತಾರತಮ್ಯವೇಕೆ?

ಕ್ಯಾಲಿಫೋರ್ನಿಯಾದ ಸಾರಿಗೆ ಕಚೇರಿಯಲ್ಲಿ ಚಾಲನಾ ಪರೀಕ್ಷೆಯನ್ನು ಇಂಗ್ಲಿಷ್, ಸ್ಪ್ಯಾನಿಷ್, ವಿಯಟ್ನಾಮೀಸ್, ಮ್ಯಾಂಡರಿನ್, ಅರೇಬಿಕ್, ಪಂಜಾಬಿ... ನುಡಿಗಳಲ್ಲಿ ತೆಗೆದುಕೊಳ್ಳಬಹುದು ಎಂಬುದನ್ನು ಕಂಡು ಅಚ್ಚರಿಯಾಯಿತು. ಇದಷ್ಟೇ ಅಲ್ಲದೆ, ಇಲ್ಲಿನ ಕೆಲವು ಬ್ಯಾಂಕ್‌ಗಳ ಮುಂಗಟ್ಟೆಗಳಲ್ಲಿ 'ನಾವು ಸ್ಪ್ಯಾನಿಷ್‌ನಲ್ಲಿ ಅಥವಾ ಪಂಜಾಬಿಯಲ್ಲಿ ಸೇವೆ ನೀಡುತ್ತೇವೆ' ಎಂಬಂತಹ ಫಲಕ ಹಾಕಿರುತ್ತಾರೆ.

ಇದನ್ನೆಲ್ಲಾ ನೋಡಿ ನನಗೆ ನೆನಪಾಗಿದ್ದು, ಭಾರತ ದೇಶದ ಒಂದೇ ನುಡಿಯ (ಹಿಂದಿ) ಹೇರಿಕೆ. ಜನರಾಡುವ ನುಡಿಯಲ್ಲಿ ವ್ಯವಹರಿಸದೆ, 'ಹಿಂದಿಯಲ್ಲೇ ವ್ಯವಹರಿಸಿ' ಎಂದು ಸರ್ಕಾರವೇ ಜನರಿಗೆ ಕಟ್ಟಪ್ಪಣೆ ಹೊರಡಿಸುವಂತೆ ಇರುತ್ತದೆ. ಇದಕ್ಕೆ ನಿದರ್ಶನವೆಂದರೆ, ಬ್ಯಾಂಕ್‌ಗಳು, ರೈಲ್ವೆ ಕಚೇರಿಗಳಲ್ಲಿ ಹಿಂದಿಯೇತರ ಜನರ ಮೇಲೆ ದಬ್ಬಾಳಿಕೆ ಮಾಡಿ, ಹಿಂದಿ ಬಾರದಿದ್ದರೆ ಈ ದೇಶ ಬಿಟ್ಟು ಹೋಗಿ ಎಂದಿರುವ ಉದಾಹರಣೆಗಳಿವೆ. ಹತ್ತಾರು ನುಡಿಗಳನ್ನು ಆಡುವ ದೇಶದಲ್ಲಿ ಬರೀ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಸ್ಪರ್ಧಾ ಪರೀಕ್ಷೆಗಳನ್ನು ನಡೆಸುತ್ತಾರೆ. ಪ್ರಗತಿಗೆ ಅಮೆರಿಕ ಮಾದರಿ ಎನ್ನುವ ದೇಶ, ಅಲ್ಲಿನ ನುಡಿ ಸ್ವಾತಂತ್ರ್ಯವನ್ನು ಅನುಕರಿಸಿ, ಹಿಂದಿ ಹೇರುವುದನ್ನು ಮೊದಲು ನಿಲ್ಲಿಸಲಿ. ದೇಶದ ಎಲ್ಲಾ ನುಡಿಗಳನ್ನು ಬೆಳೆಸುವಲ್ಲಿ ನೆರವಾಗಲಿ.

ನಾಗರಾಜ ಮಾದೇಗೌಡ, ಕ್ಯಾಲಿಫೋರ್ನಿಯಾ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಿಎಂಎವೈ–ಜಿ

ಸಂಸದೀಯ ಸ್ಥಾಯಿ ಸಮಿತಿ ವರದಿ

ಆರ್ಥಿಕ ನೆರವು ಹೆಚ್ಚಿಸದಿದ್ದರೆ 'ಎಲ್ಲರಿಗೂ ಸೂರು' ಕನಸಾದೀತು

'ಸ್ವಂತ ಮನೆ ಹೊಂದಬೇಕು' ಎಂಬ ಕನಸು ಪ್ರತಿ ಕುಟುಂಬಕ್ಕೂ ಇರುತ್ತದೆ. ಸರ್ಕಾರದ ನೆರವು ಇಲ್ಲದಿದ್ದರೆ ಬಡವರು, ನಿವೇಶನರಹಿತರಿಗೆ ಈ ಕನಸು ಸಾಕಾರವಾಗುವುದು ಕಷ್ಟ. ಭಾರತದಲ್ಲಿ ವಸತಿರಹಿತರ ಸಂಖ್ಯೆ ದೊಡ್ಡದಿದೆ. ದೇಶದ ಗ್ರಾಮೀಣ ಭಾಗದ ಬಡವರಿಗೆ ವಸತಿ ಸೌಕರ್ಯ ಕಲ್ಪಿಸಲು ನೆರವಾಗುವುದಕ್ಕಾಗಿ ಕೇಂದ್ರ ಸರ್ಕಾರ ಪಿಎಂಎವೈ–ಜಿ ಅನುಷ್ಠಾನಗೊಳಿಸಿದೆ. 'ಎಲ್ಲರಿಗೂ ಸೂರು' ಎಂಬುದು ಇದರ ಆಶಯ. ಹಣದುಬ್ಬರ ಹೆಚ್ಚುತ್ತಿರುವ ಈ ಹೊತ್ತಿನಲ್ಲಿ ಯೋಜನೆ ಅಡಿ ಸರ್ಕಾರ ನೀಡುತ್ತಿರುವ ಆರ್ಥಿಕ ನೆರವು ಮನೆ ಕಟ್ಟಲು ಸಾಕಾಗುತ್ತಿಲ್ಲ. ಇದರಿಂದ ಯೋಜನೆ ಅನುಷ್ಠಾನ ವಿಳಂಬವಾಗುತ್ತಿದೆ ಎಂದು ಸಂಸದೀಯ ಸ್ಥಾಯಿ ಸಮಿತಿಯೊಂದು ಪ್ರತಿಪಾದಿಸಿದೆ

● ಸೂರ್ಯನಾರಾಯಣ ವಿ.

ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯಕ್ಕೆ ಸಂಬಂಧಿಸಿದ ಸಂಸತ್ತಿನ ಸ್ಥಾಯಿ ಸಮಿತಿಯು ಸಚಿವಾಲಯದ ಅಧೀನದಲ್ಲಿ ಬರುವ ವಿವಿಧ ಯೋಜನೆಗಳಿಗೆ ಸಂಬಂಧಿಸಿದ ತನ್ನ ವರದಿಯನ್ನು ಇದೇ 12ರಂದು ಸಂಸತ್ತಿನಲ್ಲಿ ಮಂಡಿಸಿದೆ. ಇಲಾಖೆ ಅನುಷ್ಠಾನಗೊಳಿಸುತ್ತಿರುವ 'ಪ್ರಧಾನ ಮಂತ್ರಿ ಆವಾಸ್ ಯೋಜನೆ-ಗ್ರಾಮೀಣ' (ಪಿಎಂಎವೈ–ಜಿ) ಬಗ್ಗೆಯೂ ತನ್ನ ವರದಿಯಲ್ಲಿ ಪ್ರಸ್ತಾಪಿಸಿದೆ.

'ಎಲ್ಲರಿಗೂ ಸೂರು' ಎಂಬ ಘೋಷಣೆಯ ಅಡಿಯಲ್ಲಿ ಗ್ರಾಮೀಣ ಭಾರತದ ವಸತಿರಹಿತರಿಗೆ ಮತ್ತು ಬಡವರಿಗೆ ಕನಿಷ್ಠ ಸೌಕರ್ಯಗಳನ್ನು ಹೊಂದಿರುವ ಮನೆಗಳನ್ನು ನಿರ್ಮಿಸುವ ಕೇಂದ್ರ ಸರ್ಕಾರದ ಈ ಯೋಜನೆಯ ಪ್ರಗತಿ, ಅದರಲ್ಲಿನ ಕೊರತೆಗಳನ್ನು ಸಮಿತಿಯು ತನ್ನ ವರದಿಯಲ್ಲಿ ವಿವರಿಸಿದೆ. ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕೈಗೊಳ್ಳಬೇಕಾದ ಕ್ರಮಗಳನ್ನೂ ಅದು ಶಿಫಾರಸು ಮಾಡಿದೆ.

'ಪಿಎಂಎವೈ–ಜಿ'ಯ ಉದ್ದೇಶ ಈಡೇರಬೇಕಾದರೆ, ಸರ್ಕಾರವು ಫಲಾನುಭವಿಗಳಿಗೆ ನೀಡುತ್ತಿರುವ ಆರ್ಥಿಕ ನೆರವನ್ನು ಹೆಚ್ಚಿಸಬೇಕು ಎಂದು ಕಾಂಗ್ರೆಸ್ ಸಂಸದ ಸಪ್ತಗಿರಿ ಶಂಕರ್ ಉಲಾಕಾ ನೇತೃತ್ವದ ಈ ಸಮಿತಿ ಪ್ರಬಲವಾಗಿ ಪ್ರತಿಪಾದಿಸಿದೆ.

'ಪ್ರತಿ ಮನೆ ನಿರ್ಮಾಣಕ್ಕೆ ಸರ್ಕಾರ ನೀಡುತ್ತಿರುವ ಹಣಕಾಸು ನೆರವು ಈಗ ₹1.20 ಲಕ್ಷ/₹1.30 ಲಕ್ಷ ಇದೆ. ಹಲವು ವರ್ಷಗಳಿಂದ ಇಷ್ಟೇ ಮೊತ್ತವನ್ನು ನೀಡಲಾಗುತ್ತಿದೆ. ಹಣದುಬ್ಬರ ಹೆಚ್ಚಳದಿಂದಾಗಿ ಕಟ್ಟಡ ನಿರ್ಮಾಣಕ್ಕೆ ಬಳಸುವ ಸಾಮಗ್ರಿಗಳ ಬೆಲೆ, ಸಾಗಣೆ ವೆಚ್ಚ, ಕೆಲಸಗಾರರ ಕೂಲಿ ಜಾಸ್ತಿಯಾಗಿದೆ. ಸರ್ಕಾರ ಈಗ ನೀಡುತ್ತಿರುವ ನೆರವಿನಿಂದ ಬಡ ಫಲಾನುಭವಿಗೆ ಎಲ್ಲ ಸೌಕರ್ಯಗಳನ್ನು ಹೊಂದಿರುವ ಮನೆಯನ್ನು ನಿರ್ಮಿಸುವುದು ಅತ್ಯಂತ ಕಠಿಣ ಸವಾಲು. ಸರ್ಕಾರವು ಆರ್ಥಿಕವಾಗಿ ಬಡ ಫಲಾನುಭವಿಯ 'ಕೈ ಹಿಡಿಯದೇ ಇದ್ದರೆ', 'ಎಲ್ಲರಿಗೂ ಸೂರು' ಎಂಬ ಪರಿಕಲ್ಪನೆ ಸಫಲವಾಗದು' ಎಂದು ಸ್ಥಾಯಿ ಸಮಿತಿ ತನ್ನ ಶಿಫಾರಸಿನಲ್ಲಿ ಹೇಳಿದೆ.

ಹಣ ಇಲ್ಲ ಎಂಬ ಕಾರಣಕ್ಕೆ ಹಲವು ಮನೆಗಳ ನಿರ್ಮಾಣ ಅರ್ಧದಲ್ಲೇ ನಿಂತಿರುವುದನ್ನು ಉಲ್ಲೇಖಿಸಿರುವ ಸಮಿತಿಯು, 'ಹಣದುಬ್ಬರ ಸೇರಿದಂತೆ ಈಗಿನ ಪರಿಸ್ಥಿತಿಗೆ ತಕ್ಕಂತೆ ಮನೆ ನಿರ್ಮಾಣಕ್ಕೆ ನೀಡಲಾಗುತ್ತಿರುವ ಆರ್ಥಿಕ ನೆರವಿನ ಮೊತ್ತವನ್ನು ಹೆಚ್ಚಿಸಬೇಕು' ಎಂದು ಶಿಫಾರಸು ಮಾಡಿದೆ.

ಆಧಾರ: ಸಂಸದೀಯ ಸ್ಥಾಯಿ ಸಮಿತಿ ವರದಿ

ಕೇಂದ್ರದ ಅನುದಾನ ಹಂಚಿಕೆ ಮತ್ತು ವೆಚ್ಚ (ಕೋಟಿ ₹ಗಳಲ್ಲಿ)



ಯೋಜನೆಯ ಪ್ರಗತಿ



ಏನಿದು ಪಿಎಂಎವೈ–ಜಿ?

ಇದು ಗ್ರಾಮೀಣ ಭಾರತದ ಬಡ, ವಸತಿರಹಿತ ಫಲಾನುಭವಿಗಳಿಗೆ ಮನೆ ಸೌಲಭ್ಯ ಕಲ್ಪಿಸುವ ಯೋಜನೆ. ದೇಶದ 'ಎಲ್ಲರಿಗೂ ಸೂರು' ಎಂಬ ಪರಿಕಲ್ಪನೆಯ ಅಡಿಯಲ್ಲಿ 2016ರ ಏಪ್ರಿಲ್ 1ರಿಂದ 'ಪ್ರಧಾನ ಮಂತ್ರಿ ಆವಾಸ್ ಯೋಜನೆ–ಗ್ರಾಮೀಣ' ಜಾರಿಗೆ ಬಂದಿದೆ.

2011ರ ಸಾಮಾಜಿಕ ಆರ್ಥಿಕ ಜಾತಿ ಗಣತಿ (ಎಸ್ಇಸಿಸಿ 2011) ಮತ್ತು 2018ರ ಅವಾಸ್ + ಸಮೀಕ್ಷೆಯ ಆಧಾರದಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಯೋಜನೆಯ ಅಡಿಯಲ್ಲಿ ಬಯಲು ಪ್ರದೇಶದ ರಾಜ್ಯಗಳ ಪ್ರತಿ ಫಲಾನುಭವಿಗೆ ಮನೆ ನಿರ್ಮಾಣಕ್ಕಾಗಿ ₹1.20 ಲಕ್ಷ ಮತ್ತು ಈಶಾನ್ಯ ರಾಜ್ಯಗಳು ಸೇರಿದಂತೆ ಗುಡ್ಡಗಾಡು ರಾಜ್ಯಗಳು, ನಕ್ಸಲ್ ಪೀಡಿತ/ಸಮಗ್ರ ಕ್ರಿಯಾ ಯೋಜನೆ (ಐಎಪಿ) ಜಿಲ್ಲೆಗಳ ಪ್ರತಿ ಫಲಾನುಭವಿಗೆ ₹1.30 ಲಕ್ಷ ಆರ್ಥಿಕ ನೆರವು ನೀಡಲಾಗುತ್ತದೆ.

ಅಡುಗೆ ಕೋಣೆ ಸೇರಿದಂತೆ ಬದುಕಲು ಅವಶ್ಯವಾದ ಎಲ್ಲ ಸೌಕರ್ಯಗಳನ್ನು ಒಳಗೊಂಡ, ಕನಿಷ್ಠ 25 ಚದರ ಮೀಟರ್ ವಿಸ್ತೀರ್ಣದ ಮನೆ ನಿರ್ಮಿಸುವುದು ಯೋಜನೆಯ ಆಶಯ.

ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯಸರ್ಕಾರಗಳ ಅನುದಾನ ಹಂಚಿಕೆ ಅನುಪಾತ 60:40ರಷ್ಟಿದೆ. ಅಂದರೆ, ಫಲಾನುಭವಿಗೆ ನೀಡಲಾಗುತ್ತಿರುವ ಆರ್ಥಿಕ ನೆರವಿನಲ್ಲಿ ಕೇಂದ್ರ ಸರ್ಕಾರ ಶೇ 60ರಷ್ಟು ಭರಿಸಿದರೆ, ರಾಜ್ಯ ಸರ್ಕಾರ ಶೇ 40ರಷ್ಟು ಭರಿಸಬೇಕು. ಈಶಾನ್ಯ ಮತ್ತು ಗುಡ್ಡಗಾಡು ರಾಜ್ಯಗಳಿಗೆ ಸಂಬಂಧಿಸಿದಂತೆ ಈ ಅನುಪಾತ 90:10 ರಷ್ಟಿದೆ. ಎಲ್ಲ ಕೇಂದ್ರಾಡಳಿತ ಪ್ರದೇಶಗಳ ಫಲಾನುಭವಿಗಳಿಗೆ ಕೇಂದ್ರ ಸರ್ಕಾರವೇ ಪೂರ್ಣ ಆರ್ಥಿಕ ನೆರವು ನೀಡುತ್ತದೆ.

ಹಣಕಾಸಿನ ನೆರವಿನೊಂದಿಗೆ ಶೌಚಾಲಯ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರ ₹12 ಸಾವಿರ ನೀಡುತ್ತದೆ ಅಥವಾ ಸ್ವಚ್ಛ ಭಾರತ ಮಿಷನ್-ಗ್ರಾಮೀಣ, ನರೇಗಾ ಯೋಜನೆಯಡಿಯಲ್ಲೂ ಶೌಚಾಲಯ ನಿರ್ಮಾಣಕ್ಕೆ ಅನುಕೂಲ ಕಲ್ಪಿಸಲಾಗುತ್ತದೆ. ಜೊತೆಗೆ, ನರೇಗಾ ಅಡಿಯಲ್ಲಿ ಮನೆ ನಿರ್ಮಾಣಕ್ಕೆ 90/95 ಮಾನವ ದಿನಗಳ ಕೂಲಿಯನ್ನು ನೀಡುವುದಕ್ಕೂ ಅವಕಾಶ ಇದೆ.

ಮನೆ ನಿರ್ಮಿಸಲು ತಾಂತ್ರಿಕ ನೆರವನ್ನೂ ಸರ್ಕಾರ ನೀಡುತ್ತದೆ. ಒಂದು ವೇಳೆ ಫಲಾನುಭವಿ ಬಯಸಿದಲ್ಲಿ ಹಣಕಾಸು ಸಂಸ್ಥೆಗಳಿಂದ ₹70 ಸಾವಿರದವರೆಗೆ ಸಾಲವನ್ನು ಕೊಡಿಸುತ್ತದೆ.

ನಿವೇಶನ ರಹಿತರು

ಭಾರತ		ಕರ್ನಾಟಕ
5,73,311	ನಿವೇಶನ ರಹಿತ ಫಲಾನುಭವಿಗಳ ಸಂಖ್ಯೆ	55,436
3,60,837	ನಿವೇಶನ/ಆರ್ಥಿಕ ನೆರವು ಪಡೆದ ಫಲಾನುಭವಿಗಳು	15,436
2,12,474	ನಿವೇಶನ/ಹಣಕಾಸು ನೆರವು ಸಿಗದ ಫಲಾನುಭವಿಗಳು	40,000

ನಿವೇಶನ ಹಂಚಿಕೆಗೆ ನೀತಿ ರೂಪಿಸಿ

ಯೋಜನೆ ಅಡಿಯಲ್ಲಿ 5,73,311 ನಿವೇಶನರಹಿತ ಫಲಾನುಭವಿಗಳನ್ನು ಗುರುತಿಸಲಾಗಿದೆ. ಈ ಪೈಕಿ 3,60,837 (ಶೇ 59) ಮಂದಿಗೆ ಮನೆ ನಿರ್ಮಾಣಕ್ಕೆ ನಿವೇಶನ ಸೌಲಭ್ಯ ಕಲ್ಪಿಸಲಾಗಿದೆ. ಇನ್ನೂ 2,12,474 ಬಡವರಿಗೆ ನಿವೇಶನ ನೀಡಬೇಕಾಗಿದೆ. ಮನೆಗಳ ನಿರ್ಮಾಣ ವಿಳಂಬವಾಗುತ್ತಿರುವುದಕ್ಕೆ ನಿವೇಶನಗಳು ಇಲ್ಲದಿರುವುದು ಕೂಡ ಒಂದು ಕಾರಣ. ಈ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಿ ಮನೆ ನಿರ್ಮಿಸಲು ಅನುಕೂಲ ಕಲ್ಪಿಸುವ ದಿಸೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯವು ಹೊಸ ನೀತಿಯನ್ನು ರೂಪಿಸಬೇಕು ಎಂದೂ ಸಮಿತಿ ಶಿಫಾರಸು ಮಾಡಿದೆ.

ಮನೆ ನಿರ್ಮಾಣ: ತಲುಪದ ಗುರಿ

ಯೋಜನೆಯನ್ನು ಘೋಷಿಸುವ ಸಂದರ್ಭದಲ್ಲಿ 2024ರ ಮಾರ್ಚ್ 31ರ ಹೊತ್ತಿಗೆ ದೇಶದಾದ್ಯಂತ 2.95 ಕೋಟಿ ಮನೆಗಳನ್ನು ನಿರ್ಮಿಸಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿತ್ತು. ಆದರೆ, ಕಳೆದ ಆರ್ಥಿಕ ವರ್ಷದ ಅಂತ್ಯಕ್ಕೆ 2.59 ಕೋಟಿ ಮನೆಗಳಷ್ಟೇ ಪೂರ್ಣವಾಗಿತ್ತು. ಈ ಗುರಿ ತಲುಪುವ ಗಡುವನ್ನು ಸರ್ಕಾರ ಒಂದು ವರ್ಷ ವಿಸ್ತರಿಸಿದೆ. ಅಕ್ಟೋಬರ್ 29ರವರೆಗಿನ ಅಂಕಿ ಅಂಶಗಳ ಪ್ರಕಾರ, 2.66 ಕೋಟಿ ಮನೆಗಳು ಪೂರ್ಣಗೊಂಡಿವೆ.

'ಫಲಾನುಭವಿಗಳು ನಿವೇಶನ ಹೊಂದಿಲ್ಲದೇ ಇರುವುದು, ಮನೆ ನಿರ್ಮಿಸಲು ಮನಸ್ಸು ಮಾಡದಿರುವುದು, ಸರ್ಕಾರ ನೀಡಿದ ಹಣವನ್ನು ಫಲಾನುಭವಿ ದುರ್ಬಳಕೆ ಮಾಡಿರುವುದು, ಶಾಶ್ವತ ವಲಸೆ, ಮೃತಪಟ್ಟ ಫಲಾನುಭವಿಗಳಿಗೆ ವಾರಸುದಾರರು ಇಲ್ಲದೇ ಇರುವುದರಿಂದ ಉಳಿದ ಮನೆಗಳ ನಿರ್ಮಾಣ ವಿಳಂಬವಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ ತಿಳಿಸಿರುವುದನ್ನು ಸಮಿತಿಯು ವರದಿಯಲ್ಲಿ ಉಲ್ಲೇಖಿಸಿದೆ.

'ಇನ್ನೂ 29 ಲಕ್ಷ ಮನೆಗಳು ಕಟ್ಟುವುದಕ್ಕೆ ಬಾಕಿ ಇವೆ. ಇದರೊಂದಿಗೆ ಹೆಚ್ಚುವರಿಯಾಗಿ 2 ಕೋಟಿ ಮನೆಗಳನ್ನು ನಿರ್ಮಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಹೀಗಿರುವಾಗ ನಿಗದಿತ ಗುರಿಯನ್ನು ತಲುಪಲು ಸರ್ಕಾರದ ವಿವಿಧ ಸಂಸ್ಥೆಗಳು ಮತ್ತು ಪಾಲುದಾರರು ಸಮನ್ವಯದಿಂದ ಕಾರ್ಯ ನಿರ್ವಹಿಸಬೇಕಾದ ಅಗತ್ಯವಿದೆ. ಮನೆ ನಿರ್ಮಾಣಕ್ಕಾಗಿ ಕೌಶಲಭರಿತ ಮಾನವ ಸಂಪನ್ಮೂಲ, ಸಾಮಗ್ರಿಗಳು ಲಭ್ಯವಿರುವಂತೆ ನೋಡಿಕೊಳ್ಳಬೇಕಾಗಿದೆ' ಎಂದು ವರದಿ ಅಭಿಪ್ರಾಯ ಪಟ್ಟಿದೆ.

ಈ ವರ್ಷದ ಆಗಸ್ಟ್‌ನಲ್ಲಿ ಪ್ರಧಾನಿ ಮೋದಿ ನೇತೃತ್ವದ ಸಚಿವ ಸಂಪುಟವು ಪಿಎಂಎವೈ–ಜಿ ಅಡಿ ಮತ್ತೆ **2 ಕೋಟಿ** ಮನೆಗಳನ್ನು ನಿರ್ಮಿಸಲು ಅನುಮೋದನೆ ನೀಡಿದೆ. 2029ರ ವೇಳೆಗೆ ಒಟ್ಟಾರೆ 4.95 ಕೋಟಿಯಷ್ಟು ಮನೆಗಳನ್ನು ನಿರ್ಮಿಸುವ ಗುರಿಯನ್ನು ಹೊಂದಿದೆ.

'ಸರ್ಕಾರ ಹಾಕಿಕೊಂಡಿರುವ ಗುರಿಯಷ್ಟು ಮನೆಗಳನ್ನು ನಿರ್ಮಿಸಲು ಎಲ್ಲ ದಾರಿಗಳನ್ನು ಹುಡುಕುವಂತೆ ಈ ಯೋಜನೆ ಅನುಷ್ಠಾನದಲ್ಲಿ ತೊಡಗಿಕೊಂಡಿರುವ ಎಲ್ಲ ಸಂಸ್ಥೆಗಳಿಗೆ ಸೂಚಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯಕ್ಕೆ ಸ್ಥಾಯಿ ಸಮಿತಿ ಶಿಫಾರಸು ಮಾಡಿದೆ.

ಹೊರಬಂತು 'ಫಾರೆಸ್ಟ್' ಹಾಡು

ಚಿಕ್ಕಣ್ಣ, ರಂಗಾಯಣ ರಘು, ಗುರುನಂದನ್

ಚಿಕ್ಕಣ್ಣ, ಗುರುನಂದನ್, ಅನೀಶ್ ತೇಜೇಶ್ವರ್, ರಂಗಾಯಣ ರಘು ಮೊದಲಾದವರು ತಾರಾಗಣದಲ್ಲಿರುವ 'ಫಾರೆಸ್ಟ್' ಚಿತ್ರದ 'ಪೈಸಾ ಪೈಸಾ ಪೈಸಾ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಸಾಹಸದ ಜೊತೆಗೆ ಹಾಸ್ಯಮತ ಕಥಾಹಂದರ ಹೊಂದಿರುವ ಚಿತ್ರವನ್ನು ಚಂದ್ರಮೋಹನ್ ನಿರ್ದೇಶಿಸಿದ್ದಾರೆ.

'ಪೈಸಾ ಪೈಸಾ' ಗೀತೆಗೆ ಚೇತನ್ ಕುಮಾರ್ ಸಾಹಿತ್ಯವಿದ್ದು, ಚಂದನ್ ಶೆಟ್ಟಿ ಹಾಡಿದ್ದಾರೆ. ಧರ್ಮವಿಶ್ ಸಂಗೀತ ನಿರ್ದೇಶನವಿದೆ. 'ಕಾಡಿನಲ್ಲಿಯೇ ನಡೆಯುವ ಸಾಹಸಮಯ ಕಥೆಯಿದು. 2025ರ ಜನವರಿ 24ರಂದು ಚಿತ್ರ ತೆರೆಗೆ ಬರಲಿದೆ. ಈಗಾಗಲೇ ಬಿಡುಗಡೆಗೊಂಡಿರುವ ಟೀಸರ್, ಹಾಡುಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆಯುತ್ತಿದೆ' ಎಂದಿದ್ದಾರೆ ನಿರ್ದೇಶಕರು.

ಶರಣ್ಯ ಶೆಟ್ಟಿ, ಅರ್ಚನಾ ಕೊಟ್ಟಿಗೆ ಚಿತ್ರದ ಪ್ರಮುಖ ಪಾತ್ರದಲ್ಲಿದ್ದಾರೆ. ಎನ್.ಎಂ.ಕಾಂತರಾಜ್ ಬಂಡವಾಳ ಹೂಡಿದ್ದು, ಆನಂದ್‌ರಾಜಾ ವಿಕ್ರಮ್ ಹಿನ್ನೆಲೆ ಸಂಗೀತ, ರವಿಕುಮಾರ್ ಛಾಯಾಚಿತ್ರಗ್ರಹಣ, ಅರ್ಜುನ್ ಕಿಟ್ಟು ಸಂಕಲನವಿದೆ.

'ಎಫ್‌ಐಆರ್'ನಲ್ಲಿ ವಿಜಯ್ ರಾಘವೇಂದ್ರ

ವಿಜಯ ರಾಘವೇಂದ್ರ ಅಭಿನಯದ 'ಎಫ್‌ಐಆರ್ 6 to 6' ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಕೆ.ವಿ.ರಮಣರಾಜ್ ಆ್ಯಕ್ಷನ್ ಕಟ್ ಹೇಳಿದ್ದು, ಭಾಗ್ಯರಮೇಶ್ ನಿರ್ಮಾಣ ಮಾಡಿದ್ದಾರೆ.

'ಇದೊಂದು ಆ್ಯಕ್ಷನ್, ಥ್ರಿಲ್ಲರ್ ಸಿನಿಮಾ. ಇಡೀ ಚಿತ್ರವನ್ನು ನೈಟ್ ಎಫೆಕ್ಟ್‌ನಲ್ಲಿಯೇ ಚಿತ್ರೀಕರಣ ಮಾಡಿದ್ದೇವೆ. ಈ ಸಿನಿಮಾಗಾಗಿ ಸಾಕಷ್ಟು ರಾತ್ರಿ ನಿದ್ದೆ ಬಿಟ್ಟು ಕಷ್ಟಪಟ್ಟಿದ್ದೇವೆ. ಕಷ್ಟಪಟ್ಟು, ಇಷ್ಟಪಟ್ಟು ಮಾಡಿದ ಸಿನಿಮಾವಿದು. ಚಿತ್ರ ಬಿಡುಗಡೆಗೆ ಸಿದ್ಧವಿದೆ' ಎಂದರು ವಿಜಯ್ ರಾಘವೇಂದ್ರ.

ಸತೀಶ್ ಬಾಬು ಹಾಗೂ ಎಂ.ಎಸ್. ತ್ಯಾಗರಾಜ್ ಸಂಗೀತ ಚಿತ್ರಕ್ಕಿದೆ. ಸಿರಿ ರಾಜು, ಸ್ವಾತಿ, ಯಶಾ ಶೆಟ್ಟಿ ಚಿತ್ರದ ನಾಯಕಿಯರು.

'ಇದು ನನ್ನ ಎರಡನೆಯ ಚಿತ್ರ. ಯುವಕನೊಬ್ಬ ಒಂದು ಘಟನೆಯಲ್ಲಿ ಸಿಕ್ಕಿ ಹಾಕಿಕೊಂಡು ನಂತರ ಆ ಸಂದರ್ಭವನ್ನು ಹೇಗೆ ಎದುರಿಸುತ್ತಾನೆ ಎಂಬುದೇ ಕಥೆ. ಸಂಜೆ ಆರರಿಂದ ಬೆಳಗಿನ ಜಾವ ಆರು ಗಂಟೆವರೆಗೆ ನಡೆಯುವ ಕಥೆಯಿದು' ಎಂದರು ನಿರ್ದೇಶಕರು.

ವಿಜಯ್ ರಾಘವೇಂದ್ರ, ಸಿರಿ ರಾಜು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ದೇಶದಲ್ಲಿ** ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಸಂಬಂಧದ ಮಸೂದೆಯನ್ನು ಲೋಕಸಭೆಯಲ್ಲಿ ಅಂಗೀಕರಿಸಲಾಗಿದೆ ಎಂದು ಹೇಳುವ ಪೋಸ್ಟ್ ಅನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಲೋಕಸಭೆಯಲ್ಲಿ ಮಂಡಿಸಲಾದ ಮಸೂದೆಯ ಪರವಾಗಿ 269 ಮತಗಳು ಬಿದ್ದಿದ್ದರೆ ವಿರುದ್ಧವಾಗಿ 198 ಮತಗಳು ಬಿದ್ದಿವೆ ಎಂಬ ಅಂಕಿ ಅಂಶಗಳನ್ನೂ ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಇದು ಸುಳ್ಳು.

✓ **ದೇಶದಲ್ಲಿ** ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಸಂವಿಧಾನಕ್ಕೆ 129ನೇ ತಿದ್ದುಪಡಿ ಮಾಡುವ ಮಸೂದೆ–2024 ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನು ತಿದ್ದುಪಡಿ ಮಸೂದೆ–2024 ಅನ್ನು ಇದೇ 17ರಂದು ಲೋಕಸಭೆಯಲ್ಲಿ ಮಂಡಿಸಿದೆ. ಮಸೂದೆಗಳನ್ನು ಮಂಡಿಸಬೇಕೇ ಬೇಡವೇ ಎಂಬುದನ್ನು ಮತಕ್ಕೆ ಹಾಕಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿದ್ದವು. ಸಭಾಧ್ಯಕ್ಷರು ಅದನ್ನು ಮತಕ್ಕೆ ಹಾಕಿದ್ದರು. ಆಗ, ಮಸೂದೆ ಮಂಡಿಸಬೇಕು ಎಂಬ ಪರವಾಗಿ 269 ಮತಗಳು ಬಿದ್ದಿದ್ದವು. ಅದರ ವಿರುದ್ಧವಾಗಿ 198 ಸಂಸದರು ಮತ ಹಾಕಿದ್ದರು. ಮಸೂದೆ ಮಂಡನೆ ಪರವಾಗಿ ಹೆಚ್ಚು ಸಂಸದರು ಮತ ಹಾಕಿದ್ದರಿಂದ ಎರಡೂ ಮಸೂದೆಗಳನ್ನು ಮಂಡಿಸಲಾಗಿತ್ತು. ನಂತರ ಸಮಗ್ರ ಅಧ್ಯಯನಕ್ಕಾಗಿ ಅವುಗಳನ್ನು ಸಂಸತ್ತಿನ ಜಂಟಿ ಸಮಿತಿಗೆ (ಜೆಪಿಸಿ) ಒಪ್ಪಿಸಲಾಗಿದೆ. ಮಸೂದೆ ಮಂಡನೆ ವಿಚಾರವಾಗಿ ನಡೆದ ಮತದಾನದ ಅಂಕಿ ಅಂಶಗಳನ್ನು ಇಟ್ಟುಕೊಂಡು ಮಸೂದೆ ಅಂಗೀಕಾರವಾಗಿದೆ ಎಂದು ಜಾಲತಾಣಗಳಲ್ಲಿ ತಪ್ಪಾಗಿ ಪೋಸ್ಟ್ ಮಾಡಲಾಗಿದೆ.

ಗುಂಡಣ್ಣ

ನಿರೋಗ ಕಾಯವೇ ಪ್ರಥಮ ಸುಖ

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ | 93

ಶಿಕ್ಷಣದಲ್ಲಿ ನಾವು ಇತಿಹಾಸ ಕಲಿಸ್ತೀವಿ. ರಾಜ್ಯಶಾಸ್ತ್ರ, ರಸಾಯನ ಶಾಸ್ತ್ರ, ಭೌತಶಾಸ್ತ್ರ, ಅರ್ಥಶಾಸ್ತ್ರ, ವ್ಯವಹಾರ ಅಧ್ಯಯನ ಶಾಸ್ತ್ರ ಕಲಿಸ್ತೀವಿ. ಆದರೆ ಈ ಭೂಮಿಯ ಮೇಲೆ ಸುಖವಾಗಿ ಹ್ಯಾಂಗ್ ಬದುಕಬೇಕು ಅನ್ನೋದನ್ನೇ ನಾವು ಕಲಿಸಿಲ್ಲ.

ಒಬ್ಬ ಪಾಶ್ಚಿಮಾತ್ಯ ಚಿಂತಕ ಒಂದು ಮಾತನ್ನು ಸುಂದರವಾಗಿ ಬರೀತಾನೆ. 'ಮನುಷ್ಯ ಏರೋಪ್ಲೇನ್ ಕಂಡು ಹಿಡಿದ. ಹಕ್ಕಿಯಂತೆ ಹಾರಾಡೋದನ್ನು ಕಲಿತ. ಮೀನಿನಂತೆ ನೀರಿನಲ್ಲಿ ಈಜೋದನ್ನು ಕಲಿತ. ಮಂಗಳಕ್ಕೆ ಹೋಗಿ ಬಂದ. ಆದರೆ ತನ್ನ ಅಂಗಳದಲ್ಲಿ ಹೇಗೆ ಬದುಕಬೇಕು ಅನ್ನೋದೇ ಗೊತ್ತಾಗಲಿಲ್ಲ' ಅಂತ. ದೇವರು ಕೊಟ್ಟ ಈ ಕ್ಷಣ, ಈ ಸ್ಥಳದಲ್ಲಿ ಸುಖವಾಗಿ ಬದುಕಬೇಕಾಗಿತ್ತಲ್ಲ! ಹ್ಯಾಂಗ್ ಬದುಕಬೇಕು ಅಂದ್ರ ನಕ್ಕೋತ, ಕುಣಕೋತ ಸುಖವಾಗಿ ಬದುಕಬೇಕಿತ್ತಲ್ಲ. ಮನುಷ್ಯ ಹ್ಯಾಂಗ್ ಬದುಕಬೇಕು ಅಂದ್ರ, ನಿಮ್ಮ ಸಂತೋಷ ನೋಡಿ ಸಾವು ಕೂಡಾ ಹೊರಟು ಹೋಗಬೇಕು ಹಾಂಗ್ ಬದುಕಬೇಕು. ಅಳಕೋತ ಇದ್ದರೆ ಸಾವು ಕೂಡ 'ಇಲ್ಲೇ ಅಳಾಕತ್ತಿದಿ. ಇಲ್ಲಿ ಇದ್ದೇನು ಮಾಡತಿ. ಮ್ಯಾಲೆ ಬಾ' ಎಂದು ಕರಕೊಂಡು ಹೋಗತೈತಿ.

ಸಂತೋಷವಾಗಿ ಸುಖವಾಗಿ ಬದುಕಲೇ ಇಲ್ಲ ಮನುಷ್ಯ. ಸುಖವಾಗಿ ಬದುಕಲು ಎಲ್ಲರಿಗೂ ಇಚ್ಛೆ ಐತಿ. ಸುಖವಾಗಿ ಬದುಕಬೇಕಾದರೆ ಏನಿರಬೇಕು? ನಮಗೆ ಏನು ಅನಿಸುತ್ತದೆ ಅಂದ್ರ, 'ಅವರು ಹೋಳಿಗೆ ತುಪ್ಪದಲ್ಲಿ ಕೈತೊಳಿತಾರ. ಅವರು ಸುಖವಾಗಿದ್ದಾರೆ' ಅಂತ. ಅವನೂ ಹಾಂಗೇ ಇದ್ದ. ಬೆಳಿಗ್ಗೆ ನಾಸ್ತಾಕ್ಕೆ ಹೋಳಿಗೆ, ಮಧ್ಯಾಹ್ನ ಊಟಕ್ಕೆ ಹೋಳಿಗೆ, ರಾತ್ರಿ ಊಟಕ್ಕೂ ಹೋಳಿಗೆ ತಿನ್ನುತ್ತಿದ್ದ. ಒಂದಿನ ಗಪ್ಪಂತ ಬಿದ್ದ. ವೈದ್ಯರ ಬಳಿಗೆ ಕರಕೊಂಡು ಹೋದರು. ವೈದ್ಯರು ಹೇಳಿದರು, 'ಇನ್ನು ಮುಂದೆ, ಹೋಳಿಗೆ ಅಲ್ಲ, ಒಂದು ಚೂರು ಸಕ್ಕರೆ ಕೂಡ ತಿನ್ನಬ್ಯಾಡ. ಬರೀ ಹಾಗಲಕಾಯಿ ರಸಾನೆ ಕುಡಿಬೇಕು'. ತುಪ್ಪದಲ್ಲೇ ಕೈತೊಳಿತಾನ. ಆದರೆ ಸುಖ ಇಲ್ಲ.

ಮನುಷ್ಯಗೆ ಗೊತ್ತಿರಬೇಕು ಹೋಳಿಗೆ ಸುಖ ಕೊಡೋದಿಲ್ಲ, ಮನೆ, ಗಾರ್ಡನ್, ಹೋಂ ಥಿಯೇಟರ್, ವಾಹನ ಯಾವುದೂ ಸುಖ ಕೊಡೋದಿಲ್ಲ. ಆರೋಗ್ಯವಂತ ದೇಹ ಮಾತ್ರ ಸುಖ ಕೊಡುತ್ತೈತಿ ಎಂದು. ನಿರೋಗ ಕಾಯವೇ ಪ್ರಥಮ ಸುಖ. ಆರೋಗ್ಯವೇ ನಿಜವಾದ ಸಂಪತ್ತು. ಅದಕ್ಕಿಂತ ದೊಡ್ಡ ಸಂಪತ್ತು ಜಗತ್ತಿನಲ್ಲಿ ಬೇರೊಂದಿಲ್ಲ. ಈ ಜಗತ್ತಿನ ಯಾವುದೇ ವಿಷಯ ವಸ್ತುಗಳನ್ನು ಅನುಭವಿಸಬೇಕಾದರೆ ದೇಹದ ಆರೋಗ್ಯ ಸರಿಯಾಗಿರಬೇಕು. ಆರೋಗ್ಯ ಕೆಟ್ಟರೆ ಯಾವುದನ್ನೂ ಅನುಭವಿಸಲು ಆಗದು. ಕೋವಿಡ್ ಬಂದಾಗ ಎಷ್ಟು ಜನ ಸತ್ತರು! ಆದರೆ ಒಂದು ತಿಳಕೋಬೇಕು, ನಮ್ಮ ಮನೇಲಿದ್ದ ಯಾವುದೇ ಪ್ರಾಣಿಗಳಿಗೆ ಕೋವಿಡ್ ಬರಲಿಲ್ಲ. ನಾಯಿ, ಬೆಕ್ಕು, ಕುರಿ, ಆಕಳ ಸ್ಯಾನಿಟೈಸರ್ ಬಳಸಿದ್ದವೇನು? ಮಾಸ್ಕ್ ಹಾಕಿಕೊಂಡಿದ್ದವೇನು? ಕೋಳಿಗಳನ್ನು ವೆಂಟಿಲೇಟರ್‌ನಲ್ಲಿ ಇಟ್ಟಿದ್ದೆವಾ? ವೆಂಟಿಲೇಟರ್, ಮಾಸ್ಕ್, ಅಂತರ ಕಾಪಾಡುವಿಕೆ ಎಲ್ಲಾ ಮನುಷ್ಯರಿಗೆ ಅಷ್ಟೆ. ಯಾವುದೇ ಪಶು ಪಕ್ಷಿ ಪ್ರಾಣಿಗಳಿಗೆ ಇರಲಿಲ್ಲ. ಅವಕ್ಕೆಲ್ಲಾ ಆರೋಗ್ಯ ಇತ್ತು. ಮನುಷ್ಯನ ಆರೋಗ್ಯ ಮಾತ್ರ ಯಾಕೆ ಕೆಟ್ಟಿತು?

ಮನುಷ್ಯನ ದೇಹದ ಆರೋಗ್ಯವೂ ಸರಿ ಇಲ್ಲ. ಮನಸ್ಸಿನ ಆರೋಗ್ಯವೂ ಸರಿ ಇಲ್ಲ. ಯಾರ ದೇಹ ಸದೃಢವಾಗಿದೆ, ಯಾರ ಮನಸ್ಸು ಸಮಾಧಾನ ಐತಿ, ಯಾರ ಹೃದಯದಲ್ಲಿ ಪ್ರೇಮ ಐತಿ ಅವ ನಿಜವಾದ ಆರೋಗ್ಯವಂತ. ಇವು ಇಲ್ಲದ್ದಕ್ಕೆ ಮನುಷ್ಯಗೆ ರೋಗ ಬಂತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಡಿಸೆಂಬರ್ 23, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ಅಷ್ಟಮಿ ಗಂ. 17-08 ನಕ್ಷತ್ರ: ಉತ್ತರಫಲ್ಗುನಿ ಗಂ. 09-09 ಯೋಗ: ಸೌಭಾಗ್ಯ ಗಂ. 19-54 ಕರಣ: ಕೌಲವ ಗಂ. 17-08, ಧನು ಮಾಸದ 07 ನೇ ದಿನ, ಮಳೆನಕ್ಷತ್ರ: ಮೂಲ 3.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ : 06-53 ಸೂರ್ಯಾಸ್ತ : 06-06
ಮುಸ್ಲಿಂ ದಿನಾಂಕ : 20 ಜುಮಾದುಸ್ಸಾನಿ
ದಿನ ವಿಶೇಷ : ಅಷ್ಟಕ (ಪುಷ್ಪಾಷ್ಟಕ), ಅದೃಷ್ಟ ಸಂಖ್ಯೆ : 2, 6

ಮೇಷ: ಇನ್ನೊಬ್ಬರನ್ನು ಅವಹೇಳನ ಮಾಡುವ ಮನಸ್ಥಿತಿಯನ್ನು ಸರಿಪಡಿಸಿಕೊಳ್ಳುವುದು ವ್ಯಕ್ತಿತ್ವಕ್ಕೆ ಶೋಭೆ ತರಲಿದೆ. ವನಸ್ಪತಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಸಿಗಲಿದೆ. ಮಕ್ಕಳ ಶೈಕ್ಷಣಿಕ ಬೆಳವಣಿಗೆ ಸಮಾಧಾನಕರವಾಗಿರುವುದು.

ವೃಷಭ: ಮಂಗಳ ಕಾರ್ಯದ ಸಲುವಾಗಿ ಬಂಗಾರ ಖರೀದಿಸುವ ಬಗ್ಗೆ ಮನೆಯಲ್ಲಿ ಮಾತುಕತೆ ನಡೆಯುವುದು. ವಿದ್ಯಾಭ್ಯಾಸದಲ್ಲಿ ಅನೇಕ ತೊಂದರೆ ಎದುರಿಸಬೇಕಾಗುವುದು. ಉದ್ವೇಗದ ವಾತಾವರಣ ಎದುರಾಗಬಹುದು.

ಮಿಥುನ: ಯಾವುದೇ ವಿಚಾರದ ಬಗ್ಗೆ ದೀರ್ಘವಾಗಿ ಆಲೋಚಿಸಿ ತೀರ್ಮಾನಿಸಿದಲ್ಲಿ ಜಯ. ಹೊಟ್ಟೆಯುಬ್ಬರ ಅಥವಾ ಉದರಕ್ಕೆ ಸಂಬಂಧಿಸಿದ ಯಾವುದೇ ತೊಂದರೆಯಾದರೂ ಮನೆಮದ್ದನ್ನು ಬಳಸಿ.

ಕರ್ಕಾಟಕ: ಕಾಲಕ್ಕೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವುದು ಬಾಳಿನಲ್ಲಿ ಅನಿವಾರ್ಯ. ಅನಿರೀಕ್ಷಿತವಾಗಿ ಉಡುಗೊರೆ ದೊರಕುವ ಲಕ್ಷಣಗಳಿರುವುದು. ವ್ಯವಹಾರದ ಒತ್ತಡವಿದ್ದರೂ ರೀತಿ-ನೀತಿಗಳನ್ನು ಅನುಸರಿಸಿ.

ಸಿಂಹ: ಹೊಸ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಸರಿಯಾಗಿ ಯೋಚಿಸಿ ತೀರ್ಮಾನಿಸಿ. ಸಹೋದ್ಯೋಗಿಗಳ ಎಲ್ಲಾ ಸಲಹೆಗಳನ್ನೂ ನಿರಾಕರಣೆ ಮಾಡುವುದು ನಷ್ಟಕ್ಕೆ ಕಾರಣವಾಗುವುದು. ಖರ್ಚು-ವೆಚ್ಚಗಳ ಮೇಲೆ ಹಿಡಿತವಿರಲಿ.

ಕನ್ಯಾ: ಮರದ ವ್ಯವಹಾರ ಮಾಡುವವರಿಗೆ ಆರ್ಥಿಕ ಮುನ್ನಡೆ ತೋರಿ ಬರುತ್ತದೆ. ಮನೆಯ ಹೆಣ್ಣು ಮಕ್ಕಳ ಮದುವೆ ವಿಚಾರ ಪ್ರಸ್ತಾಪಕ್ಕೆ ಬರಲಿದೆ. ವೃತ್ತಿರಂಗದಲ್ಲಿ ನಕಾರಾತ್ಮಕ ಬೆಳವಣಿಗೆ ಕಳವಳ ಉಂಟುಮಾಡಲಿದೆ.

ತುಲಾ: ಕಾರ್ಯರಂಗದಲ್ಲಿ ಸತತ ಪ್ರಯತ್ನ ಮತ್ತು ಅನುಭವಸ್ಥರ ಸಹಯೋಗದಿಂದಾಗಿ ಪ್ರಗತಿ ನೋಡಬಹುದು. ಸಮಯಕ್ಕೆ ಸರಿಯಾಗಿ ಕಾರ್ಯ ಸಾಧಿಸಲು ಸ್ವಲ್ಪ ಪರಿಶ್ರಮ ವಹಿಸಬೇಕಾಗುವುದು. ಇಂದು ಸುದಿನ.

ವೃಶ್ಚಿಕ: ಕೆಲಸದಲ್ಲಿ ಅವಸರ ತೋರುವ ಸ್ವಭಾವದಿಂದ ಇತರರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಿ. ರಿಯಲ್ ಎಸ್ಟೇಟ್‌ದಾರರಿಗೆ ವ್ಯವಹಾರಗಳು ವೃದ್ಧಿಗೊಳ್ಳಲಿವೆ. ಆರೋಗ್ಯದ ತೊಂದರೆಗಳು ಕಡಿಮೆಯಾಗಲಿವೆ.

ಧನು: ಹಳೆಯ ಕೆಲಸಗಳನ್ನು ಪೂರ್ಣಗೊಳಿಸಿ, ನಂತರವಷ್ಟೆ ಹೊಸ ಕೆಲಸಗಳಿಗೆ ಕೈ ಹಾಕುವ ಯೋಚನೆಯನ್ನು ಮಾಡಿ. ಕೃಷಿ ಮತ್ತು ಹೈನು ಉತ್ಪನ್ನಗಳಲ್ಲಿ ಹೇರಳ ಲಾಭ ಗಳಿಸುವಿರಿ.

ಮಕರ: ಕಾರ್ಮಿಕರು ಕೊಡುವ ಸಲಹೆಯಿಂದ ಅನುಕೂಲವಾಗುವಂಥ ಸನ್ನಿವೇಶ ಒದಗಿ ಬರಲಿದೆ. ಕುಡಿಯುವ ನೀರಿನ ಶುದ್ಧತೆಯ ಬಗ್ಗೆ ಸೇವನೆಗೂ ಮೊದಲು ಗಮನಿಸಿ. ಆತ್ಮಾವಲೋಕನ ಮಾಡುವಿರಿ.

ಕುಂಭ: ಇನ್ನೊಬ್ಬರಿಗೆ ಸಹಾಯ ಮಾಡುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ. ಸಾಕು ಪ್ರಾಣಿಗಳಿಂದ ಸಣ್ಣ-ಪುಟ್ಟ ತೊಂದರೆಗಳು ಆಗುವವು. ಮಕ್ಕಳ ಸಂತೋಷದ ಸಂದರ್ಭದಲ್ಲಿ ಉಪಸ್ಥಿತಿ ಖುಷಿ ತರುವುದು.

ಮೀನ: ಕೆಲವೊಂದು ಅನಿರೀಕ್ಷಿತ ಹಾಗೂ ಉತ್ತಮ ಘಟನೆಗಳು ಈ ದಿನ ನಿಮ್ಮ ಬದುಕಿನಲ್ಲಿ ಜರುಗಲಿವೆ. ತಾಂತ್ರಿಕ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ ಹೆಚ್ಚಿನ ಪರಿಶ್ರಮ ಮತ್ತು ದೇವರ ಕೃಪಾ ಕಟಾಕ್ಷ ಪಡೆಯಬೇಕಾಗುವುದು.

ಪದಬಂಧ 5900

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ (3)
2. ಸೇನಾನಾಯಕನಿವನು (4)
4. ವೀರನಾರಾಯಣನ ದೇವಸ್ಥಾನವಿರುವ ಊರು(3)
7. ಸಭೆಯಲ್ಲಿ ಕುಳಿತಿರುವವನು (3)
8. ವಿನಾಯಕನ ಇನ್ನೊಂದು ಹೆಸರು (4)
9. ಜವಾನನ ಸುತ್ತ ನೆರೆದಿರುವ ಮಂದಿ (2)
10. ಉತ್ತರದವರ ಚಿಕ್ಕಪ್ಪ (2)
11. ಮಾನವುಳ್ಳ ಸುದ್ದಿ (4)
13. ಇರುಳಿಗೊಂದು ಪರ್ಯಾಯ ಪದ (3)
14. ನರಿ ಹತ್ತಿರವಿರುವ ಜೇನುತುಪ್ಪ (3)
16. ಓಟನ್ನು ನೀಡುವವನು (4)
17. ಕಣದೊಳಗೆ ನಡೆದ ಮದುವೆ (3)

ಮೇಲಿಂದ ಕೆಳಕ್ಕೆ
1. ಮಾರ್ಗದಲ್ಲಿ ದೂರವನ್ನು ಸೂಚಿಸಲು ದಾರಿ ಪಕ್ಕದಲ್ಲಿ ನೆಟ್ಟಿರುವ ಕಲ್ಲು (4)
2. ನದಿ ಸಮುದ್ರಗಳ ತೀರ (2)
3. ಕಿರೀಟಧಾರಣ ಮಹೋತ್ಸವ (5)
5. ಗಮನವಿಟ್ಟು ನೋಡಿ! ಆಕಾಶ ಇಲ್ಲಿ ಕಾಣುತ್ತಿದೆ! (3)
6. ಭಾಜ್ಯವನ್ನು ನಿಶ್ಶೇಷವಾಗಿ ಭಾಗಿಸುವ ಸಂಖ್ಯೆ (5)
9. ಮಂದಿಗೆಲ್ಲಾ ತಿಳಿದಿರುವಂಥದ್ದು (5)
10. ಕಾಡನ್ನು ಹೀಗೂ ಹೇಳುತ್ತಾರೆ (3)
12. ಹರಿಯ ಮುಂದಿರಿಸಿದ ಅಗಲವಾದ ತಟ್ಟೆ (4)
15. ಮುರಳಿಯ ಹತ್ತಿರವಿರುವ ಆಭರಣ (2)



5899ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಪುರೋಗಾಮಿ 4. ಸಂತ 5. ಸ್ವರಸಂಧಿ 7. ದಶಕ 9. ಮಶಕ 11. ರದನಿ 12. ಲ್ವತ್ಯಅ 14. ಅರಮನೆ 16. ಬಣ್ಣ 17. ಕಾರವಾರ

ಮೇಲಿಂದ ಕೆಳಕ್ಕೆ:
1. ಪುನರಾಗಮನ 2. ಗಾವುದ 3. ಕ್ಷೌರ 4. ಸಂಧಿ 5. ಸ್ವಕಪೋಲಕಲ್ಪನೆ 6. ಸಂವತ್ಸರ 8. ಶ್ರೀನಿವಾಸಪುರ 10. ಕರವೀರ 13. ಅಸುರ 14. ಅಣ್ಣ 15. ಮಗು

ಸುಡೊಕು 6285

9	6		8				1	
2							7	
		4	9		2	8		6
3		6				5		9
	7		3	2	4		8	
		1				3		7
4			6		1		9	
	3				5			8
6		8	2				5	4

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6284 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಐಪಿಒ: ₹1.6 ಲಕ್ಷ ಕೋಟಿ ಸಂಗ್ರಹ



ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಆರಂಭದಿಂದ ಇಲ್ಲಿಯವರೆಗೆ ಸಾರ್ವಜನಿಕ ಷೇರು ಹಂಚಿಕೆ (ಐಪಿಒ) ಮೂಲಕ ಕಂಪನಿಗಳು ₹1.6 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿವೆ.

ಆರ್ಥಿಕ ಬೆಳವಣಿಗೆ, ಅನುಕೂಲಕರ ಮಾರುಕಟ್ಟೆ ಪರಿಸ್ಥಿತಿಗಳು ಮತ್ತು ಸೆಬಿಯ ನಿಯಮಗಳಿಂದ ಬಂಡವಾಳ ಸಂಗ್ರಹದಲ್ಲಿ ಹೆಚ್ಚಳವಾಗಿದೆ. 2025ರಲ್ಲೂ ಬಂಡವಾಳ ಸಂಗ್ರಹ ಮತ್ತಷ್ಟು ಏರಿಕೆಯಾಗುವ ನಿರೀಕ್ಷೆ ಇದೆ. ಇದು ಷೇರು ವಿತರಕರ ವಿಶ್ವಾಸ ಹೆಚ್ಚಿಸಿದ್ದಲ್ಲದೇ, ಹೂಡಿಕೆದಾರರ ಉತ್ಸಾಹ ಕೂಡ ಹೆಚ್ಚಳವಾಗಿರುವುದನ್ನು ಪ್ರತಿಬಿಂಬಿಸುತ್ತಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಈ ವರ್ಷ ಹುಂಡೈ ಮೋಟರ್ ಇಂಡಿಯಾ ಅತಿ ಹೆಚ್ಚು ₹27,870 ಕೋಟಿ ಬಂಡವಾಳ ಸಂಗ್ರಹಿಸಿದೆ. ಸ್ವಿಗ್ಗಿ ₹11,327 ಕೋಟಿ, ಎನ್‌ಟಿಪಿಸಿ ಗ್ರೀನ್ ಎನರ್ಜಿ ₹10 ಸಾವಿರ ಕೋಟಿ, ಬಜಾಜ್ ಹೌಸಿಂಗ್ ಫೈನಾನ್ಸ್ ₹6,560 ಕೋಟಿ ಮತ್ತು ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ₹6,145 ಕೋಟಿ ಬಂಡವಾಳ ಸಂಗ್ರಹಿಸಿವೆ. 2023ರಲ್ಲಿ ದೊಡ್ಡ, ಮಧ್ಯಮ ಮತ್ತು ಸಣ್ಣ ಬಂಡವಾಳದ ಕಂಪನಿಗಳ ಸರಾಸರಿ ಹಂಚಿಕೆ ಗಾತ್ರ ₹867 ಕೋಟಿ ಇತ್ತು. ಇದು 2024ರಲ್ಲಿ ₹1,700 ಕೋಟಿಯಷ್ಟಾಗಿದೆ. ಡಿಸೆಂಬರ್‌ನಲ್ಲಿ ಕನಿಷ್ಠ 15 ಐಪಿಒ ಮಾರುಕಟ್ಟೆಗೆ ಪ್ರವೇಶಿಸಿವೆ.

'ಜನರ ಭಾಗವಹಿಸುವಿಕೆ ಹೆಚ್ಚಳ, ಸದೃಢವಾದ ದೇಶೀಯ ಒಳಹರಿವು ಮತ್ತು ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಸಕ್ರಿಯ ಪಾಲ್ಗೊಳ್ಳುವಿಕೆ, ಖಾಸಗಿ ಬಂಡವಾಳ ಹೆಚ್ಚಳ, ಮೂಲಸೌಕರ್ಯ ಮತ್ತು ಪ್ರಮುಖ ಕ್ಷೇತ್ರಗಳ ಮೇಲೆ ಸರ್ಕಾರದ ಬಂಡವಾಳ ವೆಚ್ಚದ ಏರಿಕೆಯು ಬಂಡವಾಳ ಸಂಗ್ರಹ ಹೆಚ್ಚಲು ಕಾರಣವಾಗಿದೆ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

75 ಐಪಿಒಗಳು ಅನುಮೋದನೆ ಸೇರಿ ವಿವಿಧ ಹಂತಗಳಲ್ಲಿ ಇವೆ. ಇವು 2025ರಲ್ಲಿ ಮಾರುಕಟ್ಟೆಗೆ ಪ್ರವೇಶಿಸುವ ನಿರೀಕ್ಷೆ ಇದೆ. ಇದರ ಮೊತ್ತ ₹2.5 ಲಕ್ಷ ಕೋಟಿ ದಾಟಲಿದೆ ಎಂದು ಈಕ್ವಿರಸ್‌ನ ಈಕ್ವಿಟಿ ಕ್ಯಾಪಿಟಲ್ ಮಾರ್ಕೆಟ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯಸ್ಥ ಮುನೀಶ್ ಅಗರ್ವಾಲ್ ಹೇಳಿದ್ದಾರೆ.

2023ರಲ್ಲಿ 57 ಕಂಪನಿಗಳು ಐಪಿಒ ಮೂಲಕ ₹49,436 ಕೋಟಿ ಸಂಗ್ರಹಿಸಿದ್ದವು. ಈ ಬಾರಿ ಇಲ್ಲಿಯವರೆಗೆ 90 ಕಂಪನಿಗಳು ಐಪಿಒ ಮೂಲಕ ₹1.6 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿವೆ.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹209-642
ದ್ವಿತಳಿ (ಬಿ.ವಿ)	₹180-714

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹595
12 ಕ್ಕೆ	₹80
ಮೈಸೂರು	
100ಕ್ಕೆ	₹590

ಎಂ–ಕ್ಯಾಪ್ ₹4.95 ಲಕ್ಷ ಕೋಟಿ ಕುಸಿತ

ನವದೆಹಲಿ (ಪಿಟಿಐ): ಕಳೆದ ವಾರ ನಡೆದ ಷೇರುಪೇಟೆ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಕುಸಿತ ದಾಖಲಿಸಿದ್ದರಿಂದ ಪ್ರಮುಖ 10 ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ (ಎಂ–ಕ್ಯಾಪ್) ₹4.95 ಲಕ್ಷ ಕೋಟಿ ಕರಗಿದೆ.

ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಮಾರುಕಟ್ಟೆ ಬಂಡವಾಳ ಮೌಲ್ಯ ₹1.10 ಲಕ್ಷ ಕೋಟಿ ಕರಗಿದೆ. ಕಂಪನಿಯ ಒಟ್ಟು ಎಂ–ಕ್ಯಾಪ್ ₹15.08 ಲಕ್ಷ ಕೋಟಿಗೆ ಇಳಿದಿದೆ.

ರಿಲಯನ್ಸ್ ಇಂಡಸ್ಟ್ರೀಸ್ ₹91,140 ಕೋಟಿ, ಎಚ್‌ಡಿಎಫ್‌ಸಿ ಬ್ಯಾಂಕ್ ₹76,448 ಕೋಟಿ, ಭಾರ್ತಿ ಏರ್‌ಟೆಲ್ ₹59,055 ಕೋಟಿ, ಎಸ್‌ಬಿಐ ₹43,909 ಕೋಟಿ, ಐಸಿಐಸಿಐ ಬ್ಯಾಂಕ್ ₹41,857 ಕೋಟಿ, ಇನ್ಫೊಸಿಸ್ ₹32,300 ಕೋಟಿ, ಎಲ್‌ಐಸಿ ₹20,050 ಕೋಟಿ, ಹಿಂದೂಸ್ತಾನ್ ಯುನಿಲಿವರ್ ₹12,805 ಕೋಟಿ ಮತ್ತು ಐಟಿಸಿ ಮಾರುಕಟ್ಟೆ ಬಂಡವಾಳ ಮೌಲ್ಯ ₹6,943 ಕೋಟಿಯಷ್ಟು ಕರಗಿದೆ.

ಕ್ರೆಡಿಟ್ ಸ್ಕೋರ್: ಹೆಚ್ಚಿಸುವುದು ಹೇಗೆ?

ಹಣಕಾಸು ಸಾಕ್ಷರತೆ

ರಾಜೇಶ್‌ಕುಮಾರ್ ಟಿ.ಆರ್.

ಸಾಲಕ್ಕೆ ಅಥವಾ ಕ್ರೆಡಿಟ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದಾಗ, ಅದನ್ನು ಅನುಮೋದಿಸುವ ಮೊದಲು ಬ್ಯಾಂಕ್‌ಗಳು ಹಲವು ಮಾನದಂಡಗಳನ್ನು ನೋಡುತ್ತವೆ. ಸಿಬಿಲ್ ಸ್ಕೋರ್ ಅಥವಾ ಕ್ರೆಡಿಟ್ ಸ್ಕೋರ್ ಆ ಮಾನದಂಡಗಳಲ್ಲಿ ಪ್ರಮುಖವಾದದ್ದು. ಸಾಲಕ್ಕೆ, ಕ್ರೆಡಿಟ್ ಕಾರ್ಡ್‌ಗೆ ಅರ್ಹತೆ ಗಿಟ್ಟಿಸಿಕೊಳ್ಳಬೇಕಾದರೆ ಸಿಬಿಲ್ ಸ್ಕೋರ್ ಬಹಳ ಮುಖ್ಯ. ಬ್ಯಾಂಕ್‌ಗಳು ಕ್ರೆಡಿಟ್ ಸ್ಕೋರ್ ಪರಿಶೀಲಿಸಿದ ಬಳಿಕವಷ್ಟೇ ಸಾಲ ಕೊಡಬೇಕೋ ಬೇಡವೋ ಎಂಬುದನ್ನು ತೀರ್ಮಾನಿಸುತ್ತವೆ. 750ರಿಂದ 900ರ ಆಸುಪಾಸಿನಲ್ಲಿರುವ ಕ್ರೆಡಿಟ್ ಸ್ಕೋರ್ ಅನ್ನು ಉತ್ತಮ ಎಂದು ಪರಿಗಣಿಸಲಾಗುತ್ತದೆ. ಕ್ರೆಡಿಟ್ ಸ್ಕೋರ್ ಚೆನ್ನಾಗಿದ್ದಾಗ ನಿಮಗೆ ಸ್ಪರ್ಧಾತ್ಮಕ ಬಡ್ಡಿ ದರಗಳಲ್ಲಿ ಸಾಲ ದೊರೆಯುತ್ತದೆ. ಕ್ರೆಡಿಟ್ ಸ್ಕೋರ್ ಕಡಿಮೆ ಇದ್ದಾಗ ಬ್ಯಾಂಕ್‌ಗಳ ತಾಳಕ್ಕೆ ತಕ್ಕಂತೆ ಕುಣಿಯುವ ಅನಿವಾರ್ಯ ಸ್ಥಿತಿಯಾಗುವುದಲ್ಲದೆ ಸಾಲದ ಅರ್ಜಿಯೇ ತಿರಸ್ಕೃತವಾಗುವ ಸಂಭವವೂ ಇರುತ್ತದೆ. ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಬೀರುವ 6 ಅಂಶಗಳ ಬಗ್ಗೆ ಈ ಲೇಖನದಲ್ಲಿ ತಿಳಿಯೋಣ ಬನ್ನಿ.

• **ಸಾಲ ಪಾವತಿ ಇತಿಹಾಸ:** ನಿಮ್ಮ ಸಾಲದ ಇತಿಹಾಸ (ಕ್ರೆಡಿಟ್ ಹಿಸ್ಟರಿ) ನಿಮ್ಮ ಕ್ರೆಡಿಟ್ ಸ್ಕೋರ್ ಮೇಲೆ ದೊಡ್ಡ ಪರಿಣಾಮ ಬೀರುತ್ತದೆ. ಈ ಹಿಂದೆ ಯಾವಾಗ ಸಾಲ ಪಡೆದಿದ್ದೀರಿ ಮತ್ತು ಮರುಪಾವತಿ ಮಾಡಿದ್ದೀರಿ ಎನ್ನುವುದರ ವಿವರ ಕ್ರೆಡಿಟ್ ಹಿಸ್ಟರಿಯಲ್ಲಿರುತ್ತದೆ. ಸಾಲ ಪಾವತಿ ಇತಿಹಾಸದಲ್ಲಿ ಸರಿಯಾದ ಸಮಯಕ್ಕೆ ಸಾಲ ಕಟ್ಟುತ್ತಿದ್ದೀರಾ ಎನ್ನುವ ಮಾಹಿತಿ ದಾಖಲಾಗಿರುತ್ತದೆ. ಸಾಲದ ಕಂತುಗಳನ್ನು ತಪ್ಪಿಸಿದರೆ ನಿಮ್ಮ ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮ ಆಗುತ್ತದೆ. ಆಗ ಬ್ಯಾಂಕ್‌ಗಳು ನೀವು ವಿಶ್ವಾಸಾರ್ಹ ಸಾಲಗಾರರಲ್ಲ ಎಂದು ತೀರ್ಮಾನಿಸಿ ಬಿಡುತ್ತವೆ. ಹಾಗಾಗಿ ಸಮಯಕ್ಕೆ ಸರಿಯಾಗಿ ಸಾಲದ ಕಂತುಗಳನ್ನು ಕಟ್ಟಿ.

• **ಸಾಲ ಬಳಕೆ ಅನುಪಾತ:** ಸಾಲ ಬಳಕೆ ಅನುಪಾತ (ಕ್ರೆಡಿಟ್ ಯುಟಿಲೈಸೇಷನ್ ರೇಷಿಯೋ) ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಬೀರುತ್ತದೆ. ಯಾವುದೇ ಕ್ರೆಡಿಟ್ ಕಾರ್ಡ್ ನೀಡಿದಾಗ ಬಳಕೆ ಮಾಡಬಹುದಾದ ಗರಿಷ್ಠ ಮೊತ್ತದ ಮಿತಿ ಇರುತ್ತದೆ. ಆ ಗರಿಷ್ಠ ಮೊತ್ತದ ಮಿತಿಯಲ್ಲಿ ಸಣ್ಣ ಪ್ರಮಾಣದ ಮೊತ್ತವನ್ನು ನಿಯಮಿತವಾಗಿ ಬಳಸಿಕೊಂಡರೆ, ನೀವು ಸರಿಯಾಗಿ ಸಾಲ ನಿರ್ವಹಣೆ ಮಾಡುತ್ತೀರಿ ಎಂದು ಬ್ಯಾಂಕ್ ಭಾವಿಸುತ್ತದೆ. ಒಂದೊಮ್ಮೆ ಗರಿಷ್ಠ ಮೊತ್ತದ ಮಿತಿಯಲ್ಲಿ ಹೆಚ್ಚಿನ ಪಾಲಿನ ಹಣವನ್ನು ಬಳಸಿಕೊಂಡರೆ ಸಾಲದ ಮೊತ್ತದ ಮೇಲೆ ನಿಮಗೆ ಅತಿಯಾದ ಅವಲಂಬನೆ ಇದೆ ಎಂದು ಬ್ಯಾಂಕ್ ಭಾವಿಸುತ್ತದೆ. ಹಾಗಾಗಿ ಸಾಲ ಬಳಕೆ ಅನುಪಾತವನ್ನು ಹತೋಟಿಯಲ್ಲಿಟ್ಟುಕೊಳ್ಳಿ.

• **ಹಲವು ಕ್ರೆಡಿಟ್ ಕಾರ್ಡ್‌ಗೆ ಅರ್ಜಿ ಸಲ್ಲಿಸುವುದು:** ಹಲವು ಕ್ರೆಡಿಟ್ ಕಾರ್ಡ್‌ಗಳಿಗೆ ಅರ್ಜಿ ಸಲ್ಲಿಸುವುದರಿಂದ ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ. ಒಂದೇ ಬಾರಿಗೆ ನಾಲ್ಕೈದು ಕ್ರೆಡಿಟ್ ಕಾರ್ಡ್‌ಗಳಿಗೆ ಅರ್ಜಿ ಸಲ್ಲಿಸಿದಾಗ ನಿಮ್ಮ ಆದಾಯವನ್ನು ಎಂದು ಎಲ್ಲ ಕ್ರೆಡಿಟ್ ಕಾರ್ಡ್ ಕಂಪನಿಗಳು ಬ್ಯಾಂಕ್‌ಗಳ ಬಳಿ ಮಾಹಿತಿ ಕೇಳುತ್ತವೆ. ಹೀಗೆ ಹಲವು ಬಾರಿ ಪರಿಶೀಲನೆಯಾದಾಗ ತಾತ್ಕಾಲಿಕವಾಗಿ ಕ್ರೆಡಿಟ್ ಸ್ಕೋರ್ ಗಣನೀಯ ಇಳಿಕೆ ಕಾಣುತ್ತದೆ.

• **ಸಿಬಿಲ್ ರಿಪೋರ್ಟ್‌ನಲ್ಲಿ ತಪ್ಪುಗಳಿದ್ದಾಗ:** ಸಿಬಿಲ್ ರಿಪೋರ್ಟ್‌ನಲ್ಲಿ ಈ ಹಿಂದೆ ನೀವು ಪಡೆದಿರುವ ಸಾಲಗಳು, ಈಗ ಪಡೆದಿರುವ ಸಾಲಗಳು ಸೇರಿದಂತೆ ಎಲ್ಲ ವಿವರ ಇರುತ್ತವೆ. ಒಂದೊಮ್ಮೆ ನೀವು ಸಾಲ ಮರುಪಾವತಿ ಮಾಡಿದ್ದಾಗಲೂ ಅದು ಸಿಬಿಲ್ ರಿಪೋರ್ಟ್‌ನಲ್ಲಿ ನಮೂದಾಗಿಲ್ಲದಿದ್ದರೆ ಕ್ರೆಡಿಟ್ ಸ್ಕೋರ್ ಮೇಲೆ ಅದು ಪರಿಣಾಮ ಉಂಟು ಮಾಡುತ್ತದೆ. ಹಾಗಾಗಿ ಸಿಬಿಲ್ ರಿಪೋರ್ಟ್ ಅನ್ನು ಕಾಲಕಾಲಕ್ಕೆ ಪರಾಮರ್ಶಿಸಿ ತಪ್ಪುಗಳಿದ್ದರೆ ಸರಿಪಡಿಸಿಕೊಳ್ಳಿ.

• **ಸಾಲ ಸಂಯೋಜನೆ ಮಿಶ್ರಣ ಇಲ್ಲದಿದ್ದಾಗ:** ಪ್ರಮುಖವಾಗಿ ಎರಡು ಮಾದರಿಯ ಸಾಲಗಳಿರುತ್ತವೆ. ಒಂದನೆಯದ್ದು ಅಡಮಾನ ಸಾಲ (ಸೆಕ್ಯೂರ್ಡ್ ಲೋನ್), ಎರಡನೆಯದ್ದು ಅಡಮಾನ ರಹಿತ ಸಾಲ (ಅನ್ ಸೆಕ್ಯೂರ್ಡ್ ಲೋನ್). ಸಾಲ ಪಡೆಯುವಾಗ ಅಡಮಾನ ಸಾಲ ಮತ್ತು ಅಡಮಾನ ರಹಿತ ಸಾಲದ ಸರಿಯಾದ ಮಿಶ್ರಣವಿರಬೇಕು. ಇದರಲ್ಲಿ ಸರಿಯಾದ ಮಿಶ್ರಣವಿಲ್ಲದಿದ್ದಾಗ ಅದು ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ.

• **ಆದಾಯ ಮತ್ತು ಸಾಲದ ಅನುಪಾತ:** ನಮಗಿರುವ ಆದಾಯವೆಷ್ಟು, ಸಾಲವೆಷ್ಟು ಎನ್ನುವುದನ್ನು ಆದಾಯ ಮತ್ತು ಸಾಲದ ಅನುಪಾತ (ಡೆಟ್ ಟು ಇನ್‌ಕಂ ರೇಷಿಯೋ) ತಿಳಿಸಿ ಕೊಡುತ್ತದೆ. ಸಾಲಕ್ಕೂ ನಮ್ಮ ಆದಾಯಕ್ಕೂ ಒಂದು ಸರಿಯಾದ ತಾಳೆ ಇರಬೇಕು. ಆದಾಯಕ್ಕಿಂತ ಹೆಚ್ಚಿನ ಪ್ರಮಾಣದ ಸಾಲವನ್ನು ಪಡೆಯಲು ಮುಂದಾದರೆ ಸಾಲದ ಮೇಲಿನ ಅತಿಯಾದ ಅವಲಂಬನೆ ಇದೆ ಅಂತಾಗುತ್ತದೆ. ಅದು ಕ್ರೆಡಿಟ್ ಸ್ಕೋರ್ ಮೇಲೆ ಪರಿಣಾಮ ಬೀರುತ್ತದೆ. ಕೆಲವರು ಗೃಹ ಸಾಲ, ವಾಹನ ಸಾಲ, ವೈಯಕ್ತಿಕ ಸಾಲ, ಕ್ರೆಡಿಟ್ ಕಾರ್ಡ್ ಹೀಗೆ ಎಲ್ಲ ಮಾದರಿಯ ಸಾಲಗಳನ್ನು ಪಡೆದುಕೊಳ್ಳುವ ಜೊತೆಗೆ ಆದಾಯ ಮತ್ತು ಸಾಲದ ಅನುಪಾತ ಹಳಿ ತಪ್ಪುವಂತೆ ಮಾಡಿಕೊಳ್ಳುತ್ತಾರೆ. ಹೀಗಾದಾಗ ಕ್ರೆಡಿಟ್ ಸ್ಕೋರ್ ಮೇಲೆ ನಕಾರಾತ್ಮಕ ಪರಿಣಾಮವಾಗುತ್ತದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಕುಸಿತ ಕಂಡ ಸೆನ್ಸೆಕ್ಸ್, ನಿಫ್ಟಿ

ಷೇರುಪೇಟೆ

ಡಿಸೆಂಬರ್ 20ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಗಣನೀಯ ಕುಸಿತ ದಾಖಲಿಸಿವೆ. 78,041 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 4.98ರಷ್ಟು ಇಳಿಕೆ ಕಂಡಿದೆ. 23,587 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 4.77ರಷ್ಟು ತಗ್ಗಿದೆ. ಜೂನ್ 2022ರ ನಂತರ ಷೇರುಪೇಟೆ ಸೂಚ್ಯಂಕಗಳು ವಾರದ ಅವಧಿಯಲ್ಲಿ ಕಂಡಿರುವ ಅತ್ಯಂತ ದೊಡ್ಡ ಮಟ್ಟದ ಕುಸಿತ ಇದಾಗಿದೆ.

ಅಮೆರಿಕದ ಫೆಡರಲ್ ಬ್ಯಾಂಕ್ 2025ರಲ್ಲಿ ನಾಲ್ಕರ ಬದಲಾಗಿ ಎರಡು ಬಾರಿ ಮಾತ್ರ ಬಡ್ಡಿ ದರ ಇಳಿಕೆ ಮಾಡುವ ಮುನ್ಸೂಚನೆ ನೀಡಿರುವ ಪರಿಣಾಮ ಜಾಗತಿಕವಾಗಿ ಮಾರುಕಟ್ಟೆಗಳಲ್ಲಿ ತಲ್ಲಣ ಉಂಟಾಗಿದೆ. ಇದಲ್ಲದೆ, ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ಸಾಧಾರಣ ಬೆಳವಣಿಗೆ, ಭಾರತದ ಮಾರುಕಟ್ಟೆ ಅಂತರಿಕ ಮೌಲ್ಯಕ್ಕಿಂತ ಹೆಚ್ಚು ಜಿಗಿದಿದೆ ಎಂಬ ಭಾವನೆ ಸೇರಿದಂತೆ ಇನ್ನೂ ಅನೇಕ ಅಂಶಗಳು ಮಾರುಕಟ್ಟೆಯಲ್ಲಿ ಪೇಟೆಗಳ ಮಾರಾಟದ ಒತ್ತಡ ಸೃಷ್ಟಿಯಾಗಲು ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಫಾರ್ಮಾ ಶೇ 1.55ರಷ್ಟು ಗಳಿಸಿರುವುದು ಹೊರತುಪಡಿಸಿ ಇನ್ನುಳಿದ 11 ಸೂಚ್ಯಂಕಗಳು ಭಾರಿ ಇಳಿಕೆ ಕಂಡಿವೆ. ನಿಫ್ಟಿ ಲೋಹ ಶೇ 6.63, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 6.34, ಎನರ್ಜಿ ಶೇ 6.14, ಬ್ಯಾಂಕ್ ಶೇ 5.27, ಫೈನಾನ್ಸ್ ಶೇ 5.18, ಆಟೊ ಶೇ 5.02, ಅನಿಲ ಮತ್ತು ತೈಲ ಶೇ 4.95, ಮಾಹಿತಿ ತಂತ್ರಜ್ಞಾನ ಶೇ 4.84, ಮಾಧ್ಯಮ ಶೇ 3.35, ರಿಯಲ್ ಎಸ್ಟೇಟ್ ಶೇ 2.3 ಮತ್ತು ಎಫ್‌ಎಂಸಿಜಿ ಶೇ 2.23 ರಷ್ಟು ಕುಸಿದಿವೆ.

ಇಳಿಕೆ - ಗಳಿಕೆ: ನಿಫ್ಟಿಯಲ್ಲಿ ಶ್ರೀರಾಮ್ ಫೈನಾನ್ಸ್ ಶೇ 9.2, ಟಾಟಾ ಮೋಟರ್ಸ್ ಶೇ 8.42, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 8.27, ಬಜಾಜ್ ಫಿನ್ ಸರ್ವ್ ಶೇ 7.83, ಗ್ರಾಸಿಮ್ ಇಂಡಸ್ಟ್ರೀಸ್ ಶೇ 7.38, ಅದಾನಿ ಎಂಟರ್‌ಪ್ರೈಸಸ್ ಶೇ 7.29, ಟಿಸಿಎಸ್ ಶೇ 6.83, ಎಸ್‌ಬಿಐ ಶೇ 6.81, ಕೋಲ್ ಇಂಡಿಯಾ ಶೇ 6.79, ಎನ್‌ಟಿಪಿಸಿ ಶೇ 6.72, ಎಲ್ ಆ್ಯಂಡ್ ಟಿ ಶೇ 6.67 ಮತ್ತು ಎಕ್ಸಿಸ್ ಬ್ಯಾಂಕ್ ಶೇ 6.66ರಷ್ಟು ಕುಸಿದಿವೆ. ಡಾ.ರೆಡ್ಡೀಸ್ ಲ್ಯಾಬ್ ಶೇ 7.71 ಮತ್ತು ಸಿಪ್ಲಾ ಶೇ 1.7ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಸದ್ಯದ ಸ್ಥಿತಿಯಲ್ಲಿ ಮಾರುಕಟ್ಟೆಯಲ್ಲಿ ಏರಿಳಿತದ ಸ್ಥಿತಿ ಮುಂದುವರಿಯಲಿದೆ. ಕೆಲ ಉತ್ತಮ ಷೇರುಗಳು ಭಾರಿ ಕುಸಿತ ಕಂಡಿದ್ದರೂ ಇನ್ನಷ್ಟು ಕುಸಿತ ಕಾಣಬಹುದಾದ ಸ್ಥಿತಿ ಇದೆ. ಹಾಗಾಗಿ ಹೂಡಿಕೆದಾರರು ಕಾಯ್ದು ನೋಡುವುದು ಒಳಿತು. ಹಣಕಾಸು ಸಮಿತಿ ಸಭೆ ಮತ್ತು ಬಜೆಟ್ ಮೇಲೆ ಹೂಡಿಕೆದಾರರು ಚಿತ್ತ ಹರಿಸಲಿದ್ದಾರೆ. ಜಾಗತಿಕ ಮಾರುಕಟ್ಟೆಗಳಲ್ಲಿ ಉಂಟಾಗುವ ಬೆಳವಣಿಗೆ ದೇಶೀಯ ಷೇರುಪೇಟೆಗಳ ಮೇಲೆ ನೇರ ಪರಿಣಾಮ ಉಂಟು ಮಾಡಲಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

ಪುಣ್ಯಸ್ಮರಣೆ

ಶ್ರೀ ಜಿ. ಎಂ. ನಾಗರಾಜ್

ಜನನ: 23-04-1951 ಮರಣ: 23-12-2017

ನಿಮ್ಮ ವಾರ್ಷಿಕ ಸ್ಮರಣೆ ... ಶ್ರೀಮತಿ ಎಂ. ಮಹಾಲಕ್ಷ್ಮಿ

ಭಾವಪೂರ್ಣ ಶ್ರದ್ಧಾಂಜಲಿ



ಮಹಾ ಮಾತೆ ಸ್ವರ್ಣಾಂಬಾ ಮಲ್ಲಪ್ಪ

ಜನನ: 5-11-1922 ಮರಣ: 21-12-2024

ದುಃಖತಪ್ತರು: ಡಾ.ಎಂ.ಜಯಪ್ರಕಾಶ್, IMA ಅಧ್ಯಕ್ಷರು, ರೇಣುಕಾ ಜಯಪ್ರಕಾಶ್, ... ಮತ್ತು ಕುಟುಂಬ ವರ್ಗ

LOOKING TO BUILD, BUY OR SELL A PROPERTY

Please refer Classifieds on Sunday

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 / 161 / 162 / 163 / 164, 9845114560 / 9731810277 / 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-, ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76, ತಕ್ಷಣಸಂಪರ್ಕಿಸಿ: 9008835841, 9900859248

ತಕ್ಷಣಬೇಕಾಗಿದ್ದಾರೆ. ಟಾಟಾಮೋಟರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIಪಾದವರಿಗೂ, 18,100- 76,000/- (ವಿದ್ಯಾರ್ಹತೆಯನುಸಾರವಾಗಿ) ವಸತಿಯುಂಟು. 9902643405

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂಭರಿಸುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ. 'ಕೆರಿಯರ್ ಸೌಲ್ಯೂಷನ್‌'. 8884777502, 8884777503.

ಪ್ರವಾಸ

Travel

21.01.2025 ಕುಂಭಮೇಳ ಪ್ರಯುಕ್ತ ರಿಯಾಯಿತಿ ದರದಲ್ಲಿ 6ದಿನ ವಿಮಾನದಲ್ಲಿ ಕಾಶಿ 'ಗಯಾ' ಅಯೋಧ್ಯ ಅಲಹಾಬಾದ್ (ಕೆಲವೇ ಸೀಟುಗಳಿವೆ) 24/02/2025, 10/14ದಿನಗಳು ರೈಲು/ವಿಮಾನದಲ್ಲಿ ದೆಹಲಿ ಮಥುರ ಆಗ್ರ ಅಲಹಾಬಾದ್ ಕಾಶಿ,ಗಯಾ,ಅಯೋಧ್ಯೆ ಹರಿದ್ವಾರ, 'ಚತ್ತಾರಿ ಜನವರಿ ಫೆಬ್ರವರಿಯಲ್ಲಿ ಅಂಡಮಾನ್"Royal Package "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

ಭವಿಷ್ಯ

Astrology

★!!ಸ್ತ್ರೀ ಪುರುಷ ವಶೀಕರಣ ಸ್ಪೆಷಲಿಸ್ಟ್!!★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. 'ಇದು ನಿಜ ನಂಬಿ ಕರೆಮಾಡಿ. ಪಂಡಿತ್. ಅಮರ್‌ನಾಥ್ ಭಟ್, 9972407122

General

25.1.2025 ರಿಂದ 4ದಿನಗಳ ರಾಮೇಶ್ವರಂ ಮತ್ತು 9ನವಗ್ರಹ ದೇವಾಲಯಗಳ ದರ್ಶನ. 30.1.2025 ರಿಂದ 4 ದಿನಗಳ ಧರ್ಮಸ್ಥಳ, ಕೊಲ್ಲೂರು, ಹೊರನಾಡು, ಶೃಂಗೇರಿ, ಮುರುಡೇಶ್ವರ, 20.2.2025 ರಿಂದ 10ದಿನಗಳ ವೈಷ್ಣೋದೇವಿ, ಕುಲುಮನಾಲಿ, ಸಿಮ್ಲಾ, ದೆಹಲಿ, ವಾಘಬಾರ್ಡರ್, 12.3.2025 ರಿಂದ 5 ದಿನಗಳ ಕಾಶಿ, ಅಯೋಧ್ಯ, ಗಯಾ, ಪ್ರಯಾಗರಾಜ್. 12.5.2025 ರಿಂದ 7ದಿನಗಳ ಸಿಂಗಾಪುರ, ಮಲೇಶಿಯಾ. ಶ್ರೀ ಗುರುರಾಜ ಟ್ರಾವೆಲ್ಸ್, ಕೋಲಾರ. 9449652555, 9611082432, 8123099913

ಸ್ತ್ರೀ- ಪುರುಷ ವಶೀಕರಣ, ಮಾಟ ಮಂತ್ರ, ಶತ್ರು ನಾಶ, ಎಲ್ಲಾ ಸಮಸ್ಯೆಗಳಿದ್ದಲ್ಲಿ, 3 ದಿನದಲ್ಲಿ ಪರಿಹಾರ. ಕೇರಳದ ಜ್ಯೋತಿಷ್ಯರು, ಸುಮಿತ್: 8722756967.

ಭಾರತದ ಪ್ರಖ್ಯಾತ ಬುಡಬುಡಿಕೆ ಜನಾಂಗದ ಅಕ್ಕಾರರ ಸಹಾಯ್ಯ ಗ್ರಾಹಕರ ಪರಿಹಾರಕ್ಕೆ ಬಾಬಾ.ಶ್ರೀ.ದೇವನಾರಾಯಣರಿಂದ ನಿಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ, ಮಕ್ಕಳಾಗಿ, ಮನ್ನೊಲಿಸುವಿಕೆ ವಶೀಕರಣಗಳಿಗೆ #100,ರಾಜಾಜಿನಗರ, ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

ಉದ್ಯೋಗಾವಕಾಶ ನಗು TVS ಬ್ರಿಟಾನಿಯಾ, ಹಿಮಾಲಯ ಕಂಪನಿಗಳಿಗೆ 7th,PUC, ITI, Degree, ಸಂಬಳ 16,000- 86,000/- (ವಿದ್ಯಾರ್ಹತೆಯನುಸಾರವಾಗಿ) ವಸತಿಯುಂಟು. 9035710381

ಪ್ರಜಾವಾಣಿ ಕ್ಲಾಸಿಫೈಡ್ಸ್ ಸಾರ್ವಜನಿಕ ಪ್ರಕಟಣೆ BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS @ 500/-* PER SQCM BOOK NOW *Conditions apply

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: +91 9886213331 | +91 9845114560 +91 9731810277 | 080- 45557163/164

ಓದುಗರ ಗಮನಕ್ಕೆ

ಪ್ರಜಾವಾಣಿಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು... ಜಾಹೀರಾತುದಾರರ ವ್ಯವಹಾರದಲ್ಲಿ ಪತ್ರಿಕೆಯು ಯಾವುದೇ ರೀತಿಯಿಂದ ಹೊಣೆಯಲ್ಲ. ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಿಬ್ಬಂದಿಗೆ ಕಾರು, ಬೈಕ್ ಉಡುಗೊರೆ

ಚೆನ್ನೈ (ಪಿಟಿಐ): ತಮಿಳುನಾಡಿನ ಸುರ್ಮೌಂಟ್ ಲಾಜಿಸ್ಟಿಕ್ ಸಲ್ಯೂಷನ್ಸ್ ಪ್ರೈ. ಲಿಮಿಟೆಡ್, ಕಠಿಣ ಶ್ರಮ ಮತ್ತು ಸಮರ್ಪಣಾ ಮನೋಭಾವದಿಂದ ಕೆಲಸ ಮಾಡಿದ ತನ್ನ 20 ಸಿಬ್ಬಂದಿಗೆ ಕಾರು ಮತ್ತು ಬೈಕ್‌ಗಳನ್ನು ಉಡುಗೊರೆಯಾಗಿ ನೀಡಿದೆ.

'ನೌಕರರ ಶ್ರಮ ಮತ್ತು ಬದ್ಧತೆಗೆ ಅನುಗುಣವಾಗಿ ಟಾಟಾ ಕಾರುಗಳು, ಆ್ಯಕ್ಟಿವಾ ಸ್ಕೂಟರ್, ರಾಯಲ್ ಎನ್‌ಫೀಲ್ಡ್ ಬೈಕ್‌ಗಳನ್ನು ನೀಡಲಾಗಿದೆ. ಇದು ಉದ್ಯೋಗಿಗಳಿಗೆ ಉತ್ತೇಜನ ನೀಡಲಿದ್ದು, ಉನ್ನತ ಗುರಿ ಸಾಧನೆಗೆ ಸ್ಫೂರ್ತಿ ನೀಡಲಿದೆ ಎಂದು ಕಂಪನಿ ಭಾವಿಸಿದೆ.

'ನೌಕರರ ಕಲ್ಯಾಣ ಕಾರ್ಯಕ್ರಮದ ಅನುಷ್ಠಾನವು ಉದ್ಯೋಗಿಗಳಿಗೆ ತೃಪ್ತಿ ನೀಡುವುದಷ್ಟೇ ಅಲ್ಲದೇ ಅವರು ಅತ್ಯುತ್ತಮವಾದ ಕೆಲಸ ಮಾಡುವಂತೆ ಉತ್ತೇಜನ ನೀಡುತ್ತದೆ. ಅಲ್ಲದೇ, ಉತ್ಪಾದನಾ ಸಾಮರ್ಥ್ಯ ಮತ್ತು ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುತ್ತದೆ' ಎಂದು ಕಂಪನಿಯ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಡೆಂಜೆಲ್ ರಾಯನ್ ಹೇಳಿದ್ದಾರೆ.

'ಚರ್ಮದ ಉತ್ಪನ್ನ ರಫ್ತು ಶೇ 12 ಏರಿಕೆ'

ನವದೆಹಲಿ (ಪಿಟಿಐ): ಚರ್ಮದ ಉತ್ಪನ್ನಗಳು ಮತ್ತು ಪಾದರಕ್ಷೆಗಳ ರಫ್ತು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 12ರಷ್ಟು ಏರಿಕೆಯಾಗುವ ನಿರೀಕ್ಷೆ ಇದೆ ಎಂದು ಚರ್ಮದ ಉತ್ಪನ್ನಗಳ ರಫ್ತು ಮಂಡಳಿ (ಸಿಎಲ್‌ಇ) ಭಾನುವಾರ ತಿಳಿಸಿದೆ.

2023-24ರ ಹಣಕಾಸು ವರ್ಷದಲ್ಲಿ ಉತ್ಪನ್ನಗಳ ರಫ್ತು ಮೌಲ್ಯ ₹39,842 ಕೋಟಿಯಷ್ಟಿತ್ತು. ಇದು 2024-25ರಲ್ಲಿ ₹45,024 ಕೋಟಿಗೆ ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಮಂಡಳಿಯ ಅಧ್ಯಕ್ಷ ರಾಜೇಂದ್ರ ಕುಮಾರ್ ಜಲನ್ ಹೇಳಿದ್ದಾರೆ.

ಅಮೆರಿಕ, ಬ್ರಿಟನ್ ಸೇರಿ ಹಲವು ರಾಷ್ಟ್ರಗಳಿಂದ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಬರುತ್ತಿದೆ. ಮುಂಬರುವ ತಿಂಗಳುಗಳಲ್ಲಿ ಇದು ಇನ್ನಷ್ಟು ಹೆಚ್ಚಳವಾಗುವ ನಿರೀಕ್ಷೆ ಇದೆ. ಹಲವು ಜಾಗತಿಕ ಕಂಪನಿಗಳು ಭಾರತದಲ್ಲಿ ತಯಾರಿಕಾ ಘಟಕಗಳನ್ನು ಸ್ಥಾಪಿಸಲು ಆಸಕ್ತಿ ತೋರಿವೆ ಎಂದು ಹೇಳಿದ್ದಾರೆ.

ಉದ್ಯಮದ ಒಟ್ಟು ವಹಿವಾಟಿನ ಮೌಲ್ಯ ₹1.61 ಲಕ್ಷ ಕೋಟಿ ಆಗಿದ್ದು, ಇದರಲ್ಲಿ ರಫ್ತು ಮೌಲ್ಯ ₹42,476 ಕೋಟಿ ಒಳಗೊಂಡಿದೆ. 2030ರ ವೇಳೆಗೆ ವಹಿವಾಟು ₹3.99 ಲಕ್ಷ ಕೋಟಿಗೆ ತಲುಪುವ ನಿರೀಕ್ಷೆ ಇದೆ ಎಂದು ಹೇಳಿದ್ದಾರೆ.

ಸರ್ಕಾರವು, ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯನ್ನು ವಲಯಕ್ಕೆ ವಿಸ್ತರಿಸಬೇಕು. ಇದು ರಫ್ತು ಗುರಿ ಸಾಧಿಸಲು ನೆರವಾಗುವುದಲ್ಲದೇ, ಸುಮಾರು 7 ಲಕ್ಷದಿಂದ 8 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ ಎಂದು ಹೇಳಿದ್ದಾರೆ.

ಕೇಂದ್ರ ಗಾಜಾ ನಗರದ ಜಬಾ ಸ್ಟಿಟ್‌ನಲ್ಲಿ ಭಾನುವಾರ ನಾಗರಿಕರಿದ್ದ ಕಾರಿನ ಮೇಲೆ ಇಸ್ರೇಲ್ ಪಡೆಗಳು ಬಾಂಬ್ ದಾಳಿ ನಡೆಸಿದ್ದು, ಕಾರು ಛಿದ್ರಗೊಂಡಿದೆ –ಎಎಫ್‌ಪಿ ಚಿತ್ರ

ಇಸ್ರೇಲ್ ಸೇನೆ ದಾಳಿ: 20 ಜನ ಸಾವು

ದೇರ್ ಅಲ್ ಬಲಾಹ್ (ಗಾಜಾ ಪಟ್ಟಿ) (ಎಪಿ): 'ಇಸ್ರೇಲ್ ಸೇನೆಯು ಗಾಜಾ ಪಟ್ಟಿಯಾದ್ಯಂತ ನಡೆಸಿರುವ ವೈಮಾನಿಕ ದಾಳಿಯಲ್ಲಿ ಐದು ಮಕ್ಕಳು ಸೇರಿ 20 ಜನರು ಮೃತಪಟ್ಟಿದ್ದಾರೆ' ಎಂದು ಪ್ಯಾಲೆಸ್ಟೀನ್ ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಗಾಜಾ ನಗರದಲ್ಲಿ ನೆಲೆ ಕಳೆದುಕೊಂಡಿರುವ ಜನರು ಆಶ್ರಯ ಪಡೆದಿದ್ದ ವಸತಿ ಶಾಲೆ ಮೇಲೆ ನಡೆದ ವೈಮಾನಿಕ ದಾಳಿಯಲ್ಲಿ ಮೂರು ಮಕ್ಕಳು ಸೇರಿ ಎಂಟು ಜನರು ಸತ್ತಿದ್ದಾರೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಹೇಳಿದೆ.

ದೇರ್ ಅಲ್ ಬಲಾಹ್ ನಗರದ ಕೇಂದ್ರ ಭಾಗದಲ್ಲಿರುವ ಮನೆಯೊಂದರ ಮೇಲೆ ಶನಿವಾರ ತಡರಾತ್ರಿ ನಡೆದ ದಾಳಿಯಲ್ಲಿ ಮೂವರು ಮಹಿಳೆಯರು ಮತ್ತು ಇಬ್ಬರು ಮಕ್ಕಳು ಸೇರಿ ಐದು ಜನರು ಹತರಾಗಿದ್ದಾರೆ ಎಂದು ಅಲ್-ಅಕ್ಸಾ ಹುತಾತ್ಮರ ಆಸ್ಪತ್ರೆಯ ವೈದ್ಯಾಧಿಕಾರಿಗಳು ಹೇಳಿದ್ದಾರೆ.

ಖಾನ್ ಯೂನಿಸ್ ನಗರದಲ್ಲಿ ಭಾನುವಾರ ನಡೆದಿರುವ ದಾಳಿಯಲ್ಲಿ ದಂಪತಿ ಹತರಾಗಿದ್ದಾರೆ. ಹಾಗೆಯೇ, ಗಾಜಾ ನಗರದಲ್ಲಿ ನಡೆದ ದಾಳಿಯಲ್ಲಿ ಕಾರಿನಲ್ಲಿದ್ದ ಇಬ್ಬರು ನಾಗರಿಕರು ಹತರಾಗಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜನವಸತಿ ಪ್ರದೇಶದಲ್ಲಿ ಆಶ್ರಯ ಪಡೆದಿದ್ದ ಹಮಾಸ್ ಉಗ್ರರನ್ನು ಗುರಿಯಾಗಿಸಿ ದಾಳಿ ನಡೆಸಿರುವುದಾಗಿ ಇಸ್ರೇಲ್ ಸೇನೆ ತಿಳಿಸಿದೆ.

ಏತನ್ಮಧ್ಯೆ, 'ಇಸ್ರೇಲ್ ಅಧಿಕಾರಿಗಳು ಕ್ಯಾಥೋಲಿಕ್ ಚರ್ಚ್‌ನ ಮುಖ್ಯಸ್ಥ ಕಾರ್ಡಿನಲ್ ಪಿಯರ್‌ಬಟಿಸ್ಟಾ ಪಿಜ್ಜಬಲ್ಲಾ ಅವರಿಗೆ ಗಾಜಾ ಪ್ರವೇಶಿಸಲು ಮತ್ತು ಈ ಪ್ರದೇಶದಲ್ಲಿ ಸಣ್ಣ ಸಮುದಾಯವನ್ನು ಉದ್ದೇಶಿಸಿ ಕ್ರಿಸ್ಮಸ್‌ ಪೂರ್ವ ಆಚರಣೆ ನಡೆಸಲು ಅನುಮತಿ ನೀಡಿದ್ದಾರೆ.

14 ತಿಂಗಳಿಂದಲೂ ಹೆಚ್ಚು ಅವಧಿಯಿಂದ ಗಾಜಾದಲ್ಲಿ ಹಮಾಸ್ ವಿರುದ್ಧ ಯುದ್ಧದಲ್ಲಿ ತೊಡಗಿರುವ ಇಸ್ರೇಲ್ ಸೇನೆ ನಿತ್ಯ ದಾಳಿ ನಡೆಸುತ್ತಿದೆ.

ರಷ್ಯಾ: ಇಂಧನ ಸಂಗ್ರಹಾಗಾರದ ಮೇಲೆ ಉಕ್ರೇನ್ ದಾಳಿ

ಕೀವ್ (ಎಪಿ): ರಷ್ಯಾದ ಪ್ರಮುಖ ಇಂಧನ ಸಂಗ್ರಹಾಗಾರದ ಮೇಲೆ ಉಕ್ರೇನ್ ಭಾನುವಾರ ಡ್ರೋನ್‌ಗಳ ದಾಳಿ ನಡೆಸಿದೆ. ಒಂದೇ ವಾರದಲ್ಲಿ ನಡೆದಿರುವ ಎರಡನೇ ದಾಳಿ ಇದು.

ದೇಶದ ಪ್ರಮುಖ ಇಂಧನ ಸಂಗ್ರಹಾಗಾರ ಮತ್ತು ಇಂಧನ ಸೌಲಭ್ಯಗಳ ಮೇಲೆ ಗಮಿಯಾಗಿಸಿಕೊಂಡು ಭಾರಿ ದಾಳಿ ನಡೆಸಲಾಗಿದೆ ಎಂದು ರಷ್ಯಾದ ಪ್ರಾದೇಶಿಕ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಇಲ್ಲಿಂದಲೇ ರಷ್ಯಾ ತನ್ನ ಸೇನೆಗೆ ಇಂಧನ ಪೂರೈಕೆ ಮಾಡುತ್ತಿತ್ತು ಎಂದು ಉಕ್ರೇನ್ ಹೇಳಿಕೊಂಡಿದೆ.

ಈಗಾಗಲೇ ಜರ್ಜರಿತಗೊಂಡಿರುವ ಉಕ್ರೇನ್‌ನ ವಿದ್ಯುತ್ ಗ್ರಿಡ್‌ನ ಮೇಲೆ ರಷ್ಯಾ ವ್ಯಾಪಕ ದಾಳಿ ಪ್ರಾರಂಭಿಸಿದ ಕೆಲ ದಿನಗಳ ನಂತರ ಉಕ್ರೇನ್‌ನಿಂದಲೂ ಪ್ರತಿದಾಳಿಯಾಗಿದೆ.

ರಷ್ಯಾದ ದಕ್ಷಿಣದ ಓರಿಯೋಲ್ ಪ್ರದೇಶದಲ್ಲಿನ ಸ್ಟಾಲ್ನಾಯ್ ಕಾನ್ ತೈಲ ಟರ್ಮಿನಲ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕೆಲವು ತಾಸುಗಳ ನಂತರ ಬೆಂಕಿಯನ್ನು ನಂದಿಸಲಾಯಿತು. ಯಾವುದೇ ಸಾವುನೋವು ಸಂಭವಿಸಿಲ್ಲ. ಗಮನಾರ್ಹವಾದ ಹಾನಿಯೂ ಆಗಿಲ್ಲ ಎಂದು ಸ್ಥಳೀಯ ಗವರ್ನರ್ ಆಂಡ್ರೆ ಕ್ಲಿಚ್‌ಕೋವ್ ಅವರು 'ಟೆಲಿಗ್ರಾಮ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇದರ ನಡುವೆ, ಮೂಲಸೌಕರ್ಯ ಗುರಿಯಾಗಿಸಿಕೊಂಡಿದ್ದ 20 ಡ್ರೋನ್‌ಗಳನ್ನು ರಷ್ಯಾ ಪಡೆಗಳು ಹೊಡೆದುರುಳಿಸಿವೆ. ಡಿ.14ರಂದು ಸ್ಟಾಲ್ನಾಯ್ ಕಾನ್ ಟರ್ಮಿನಲ್ ಗುರಿಯಾಗಿಸಿ ಡ್ರೋನ್ ದಾಳಿ ನಡೆಸಲಾಗಿತ್ತು ಎಂದು ಉಕ್ರೇನ್ ಹೇಳಿದೆ.

ನೇಪಾಳದಲ್ಲಿ ಚಿನ್ನ ಕಳ್ಳಸಾಗಣೆ ಇಬ್ಬರು ಭಾರತೀಯರ ಬಂಧನ

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಚಿನ್ನ ಕಳ್ಳಸಾಗಣೆಯಲ್ಲಿ ತೊಡಗಿದ್ದ ಇಬ್ಬರು ಭಾರತೀಯರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಉತ್ತರ ಪ್ರದೇಶದವರಾದ ದೀಪಕ್ ಗುಪ್ತಾ (44) ಮತ್ತು ಸುಮಿತ್ ವರ್ಮಾ (34) ಬಂಧಿತರು. ಇವರನ್ನು ನೇಪಾಳದ ಕೈಲಾಲಿ ಜಿಲ್ಲೆಯ ಧಂಗಾಧಿ ಉಪ ಮಹಾನಗರದಲ್ಲಿ ಬಂಧಿಸಿರುವ ಪೊಲೀಸರು, ಆರೋಪಿಗಳ ಬಳಿ ಇದ್ದ 549.2 ಗ್ರಾಂ ಚಿನ್ನವನ್ನು ವಶಪಡಿಸಿಕೊಂಡಿದ್ದಾರೆ. ಯಾವುದೇ ಕಸ್ಟಮ್ಸ್ ಸುಂಕವನ್ನು ಪಾವತಿಸದೆ ಅವರು ಭಾರತೀಯ ನಂಬರ್ ಪ್ಲೇಟ್ ಹೊಂದಿದ್ದ ಕಾರಿನಲ್ಲಿ ಚಿನ್ನವನ್ನು ಸಾಗಿಸುತ್ತಿದ್ದರು ಎಂದು ನೇಪಾಳ ಪೊಲೀಸ್ ಪ್ರಧಾನ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ.

ಭಾರತಕ್ಕೆ ಹೋಲಿಸಿದರೆ ನೇಪಾಳದಲ್ಲಿ ಚಿನ್ನಕ್ಕೆ ಹೆಚ್ಚಿನ ಕಸ್ಟಮ್ಸ್ ಸುಂಕ ವಿಧಿಸಲಾಗುತ್ತದೆ. ಹಾಗಾಗಿ, ನೇಪಾಳದಲ್ಲಿ ಚಿನ್ನ ಅಕ್ರಮ ದುಬಾರಿಯಾಗಿದೆ.

ಎನ್‌ಡಿಎ ಸೇರಲ್ಲ: ಎನ್‌ಸಿ ಸ್ಪಷ್ಟನೆ

ತನ್ವೀರ್ ಸಾದಿಕ್

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಆಡಳಿತಾರೂಢ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು (ಎನ್‌ಸಿ) ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಮರುಸೇರ್ಪಡೆಯಾಗಲಿದೆ ಎನ್ನಲಾದ ವದಂತಿಗಳನ್ನು ಎನ್‌ಸಿ ಪ್ರಧಾನ ವಕ್ತಾರ ತನ್ವೀರ್ ಸಾದಿಕ್ ಅಲ್ಲಗಳೆದಿದ್ದಾರೆ.

'ಜಮ್ಮು ಮತ್ತು ಕಾಶ್ಮೀರದ ಜನರನ್ನು ತಪ್ಪುದಾರಿಗೆ ಎಳೆಯುವ ದುರುದ್ದೇಶದಿಂದ, ಕೆಲವು ಮಾಧ್ಯಮಗಳು ಈ ಬಗ್ಗೆ ಪುಕಾರುಗಳನ್ನು ಹಬ್ಬಿಸಿವೆ. ಇದು ಆಧಾರರಹಿತ, ಇದರಲ್ಲಿ ಯಾವುದೇ ಹುರುಳಿಲ್ಲ' ಎಂದು ಅವರು ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಇತ್ತೀಚೆಗೆ ಸಭೆ ನಡೆಸಿದ ನಂತರ ಈ ವದಂತಿ ಚರ್ಚೆಗೆ ಬಂದಿದೆ. ಎನ್‌ಡಿಎಗೆ ಮರು ಸೇರ್ಪಡೆಯಾಗಲು ಈ ಸಭೆ ನಡೆಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಆದರೆ ಅದರ ಬಗ್ಗೆ ನಿಜವೇ ಅಲ್ಲದೇ ಇಲ್ಲ.

ಒಂದೊಮ್ಮೆ ಈ ಬಗ್ಗೆ ಪಕ್ಷ ಚರ್ಚೆ ನಡೆಸಿದರೂ ಅದನ್ನು ಒದಗಿಸುವ ಇಲ್ಲದೇ 'ವದಂತಿ ಸುಳ್ಳು' ಎಂದು ಸಾರ್ವಜನಿಕವಾಗಿ ಒಪ್ಪಿಕೊಳ್ಳಬೇಕಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

'ಈ ಬಗ್ಗೆ ಸುಳ್ಳು ವರದಿ ಮಾಡಿರುವ ಮಾಧ್ಯಮ ಸಂಸ್ಥೆಗಳು, ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು. ಇಲ್ಲದಿದ್ದಲ್ಲಿ ಆ ನಿರ್ದಿಷ್ಟ ಸಂಸ್ಥೆಗಳ ವಿರುದ್ಧ ಕಾನೂನು ಹೋರಾಟ ನಡೆಸುವ ಅವಕಾಶ ನಮಗೆ ಇದ್ದೇ ಇದೆ. ಕುಟಿಲ ಪತ್ರಿಕೋದ್ಯಮವನ್ನು ಸಹಿಸಿಕೊಳ್ಳುವ ಪ್ರಶ್ನೆಯೇ ಇಲ್ಲ' ಎಂದು ಸಾದಿಕ್ ಅವರು ಎಕ್ಸ್ ಪೋಸ್ಟ್ ಹೇಳಿದ್ದಾರೆ.

ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನವನ್ನು ಮರಳಿ ಪಡೆಯುವ ಪ್ರಯತ್ನದ ಭಾಗವಾಗಿ, ಆಡಳಿತಾರೂಢ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಎನ್‌ಡಿಎ ಮೈತ್ರಿಕೂಟಕ್ಕೆ ಪುನಃ ಸೇರ್ಪಡೆಯಾಗಲಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿದ್ದವು.

ಕೊಲೆಯಾದ ವ್ಯಕ್ತಿ ಹಿಂದೂ ಅರ್ಚಕ ಅಲ್ಲ: ಬಾಂಗ್ಲಾ ಸರ್ಕಾರ

ಕೋಲ್ಕತ್ತ/ಢಾಕಾ (ಪಿಟಿಐ): 'ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ಕೊಲೆಯಾದ ವ್ಯಕ್ತಿ ಹಿಂದೂ ಅರ್ಚಕ ಅಲ್ಲ. ಚಿತಾಗಾಂಗ್‌ದಲ್ಲಿನ ವಿಷ್ಣುಗಳ ಕಳ್ಳತನಕ್ಕೆ ಯತ್ನಿಸಿದಾಗ ಆ ವ್ಯಕ್ತಿ ಸಾವು ಸಂಭವಿಸಿದೆ' ಎಂದು ಬಾಂಗ್ಲಾದೇಶ ಸರ್ಕಾರ ಹೊರತು ಕೋಮುಗಲಭೆಯಿಂದ ಅಲ್ಲ' ಎಂದು ಢಾಕಾದ ಮಧ್ಯಂತರ ಸರ್ಕಾರ ತಿಳಿಸಿದೆ.

ಆ ವ್ಯಕ್ತಿಯ ಕೊಲೆ ಸಂಬಂಧ ಕೋಲ್ಕತ್ತದ ಇಸ್ಕಾನ್ ಮಾಡಿದ್ದ ಆರೋಪಗಳನ್ನು ಬಾಂಗ್ಲಾದೇಶ ಸರ್ಕಾರದ ಮುಖ್ಯ ಸಲಹೆಗಾರರ ಮಾಧ್ಯಮ ವಿಭಾಗ ಅಲ್ಲಗಳೆದಿದೆ. 'ದರೋಡೆ ಪ್ರಯತ್ನದ ವೇಳೆ ಈ ಘಟನೆ ನಡೆದಿರುವ ಸಾಧ್ಯತೆಯಿದೆ' ಎಂದು ಅದು ಹೇಳಿದೆ.

ಈ ಸಂಬಂಧ ಬಾಂಗ್ಲಾದೇಶದಲ್ಲಿನ ಇಸ್ಕಾನ್ ಪ್ರತಿನಿಧಿಗಳು ಮತ್ತು ನಾಟೋರ್ ಪೊಲೀಸರಿಂದ ಪಡೆದ ಮಾಹಿತಿಯನ್ನು ಆಧರಿಸಿ ಮಾಧ್ಯಮ ವಿಭಾಗ ಫೇಸ್‌ಬುಕ್‌ನಲ್ಲಿ ವಿವರಣೆ ನೀಡಿದೆ.

ಹತ್ಯೆ ಕುರಿತು ಶನಿವಾರವಷ್ಟೇ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದ ಕೋಲ್ಕತ್ತದ ಇಸ್ಕಾನ್ ವಕ್ತಾರ ರಾಧಾರಮಣ್ ದಾಸ್ ಅವರು, 'ಬಾಂಗ್ಲಾದೇಶದ ನಾಟೋರ್ ಜಿಲ್ಲೆಯ ಚಿತಾಗಾಂಗ್ ದೇಗುಲದಲ್ಲಿ ಹಿಂದೂ ಅರ್ಚಕ ತರುಣ್ ಕುಮಾರ್ ದಾಸ್ ಎಂಬುವವರನ್ನು ಶೀವ್ರಸಾಹಣೆಯಿಂದ ಹತ್ಯೆ ಮಾಡಿದ್ದಾರೆ' ಎಂದು ದೂರಿದ್ದರು. 'ಇದರ ಬೆನ್ನಲ್ಲೇ ಬಾಂಗ್ಲಾದ ಮಧ್ಯಂತರ ಸರ್ಕಾರ ಸ್ಪಷ್ಟನೆ ನೀಡಿದೆ.

'ಕೊಲೆಯಾದ ವ್ಯಕ್ತಿ ಚಿತಾಗಾಂಗ್ ಸಮಿತಿಯ ಸದಸ್ಯರಲ್ಲ ಮತ್ತು ಅವರು ಅರ್ಚಕರೂ ಅಲ್ಲ. ಆ ವ್ಯಕ್ತಿ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದರು' ಎಂದು ಚಿತಾಗಾಂಗ್‌ನ ಪ್ರಧಾನ ಕಾರ್ಯದರ್ಶಿ ಸತ್ಯ ನಾರಾಯಣ ರಾಯ್ ಅವರ ಹೇಳಿಕೆಯನ್ನು ಸರ್ಕಾರ ಪೋಸ್ಟ್‌ನಲ್ಲಿ ಉಲ್ಲೇಖಿಸಿದೆ.

'ತರುಣ್ ಕುಮಾರ್ ಅವರು ಬಾಂಗ್ಲಾದೇಶ ಇಸ್ಕಾನ್ ಅಥವಾ ಇತರ ಸಂಘಟನೆಗಳ ಜತೆಗೆ ಗುರುತಿಸಿಕೊಂಡಿಲ್ಲ' ಎಂದು ಬಾಂಗ್ಲಾದೇಶ ಇಸ್ಕಾನ್ ಕಾರ್ಯಕಾರಿ ಸಮಿತಿ ಸದಸ್ಯ ಹೃಷಿಕೇಶ್ ಗೌರಂಗ ದಾಸ್ ಅವರ ಹೇಳಿಕೆಯನ್ನು ಅದು ಪೋಸ್ಟ್‌ನಲ್ಲಿ ಉಲ್ಲೇಖ ಮಾಡಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುತ್ತಿರುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

www.homepages.deccanherald.com ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 | Tanveer: +91 9886213331 | Ravichandra: +91 9901641752 | Anitha: +91 9900428036

‘ಧರ್ಮದ ಹೆಸರಲ್ಲಿ ಹಿಂಸೆಗೆ ಅರಿವಿನ ಕೊರತೆ ಕಾರಣ’



ಮೋಹನ್ ಭಾಗವತ್

ಅಮರಾವತಿ (ಪಿಟಿಐ): ಧರ್ಮದ ಹೆಸರಿನಲ್ಲಿ ಹಿಂಸಾಚಾರ ಮತ್ತು ದೌರ್ಜನ್ಯ ನಡೆಯುತ್ತಿರುವು-ದಕ್ಕೆ ಧರ್ಮದ ಬಗ್ಗೆ ತಪ್ಪು ತಿಳಿವಳಿಕೆ ಮತ್ತು ಅರಿವಿನ ಕೊರತೆಯೇ ಕಾರಣ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ.

ಮಹಾರಾಷ್ಟ್ರದ ಅಮರಾವತಿಯಲ್ಲಿರುವ ‘ಮಹಾನುಭವ ಆಶ್ರಮ’ದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಧರ್ಮವು ಮುಖ್ಯವಾಗಿದ್ದು, ಅದನ್ನು ಸರಿಯಾಗಿ ಕಲಿಸಬೇಕಿದೆ’ ಎಂದಿದ್ದಾರೆ.

‘ಧರ್ಮದ ಬಗ್ಗೆ ಅರೆಬರೆ ಮತ್ತು ಅಪೂರ್ಣ ಜ್ಞಾನವು ಅಧರ್ಮಕ್ಕೆ ಕಾರಣವಾಗುತ್ತದೆ. ಇದರಿಂದಾಗಿಯೇ ಇಂದು ಧರ್ಮದ ಹೆಸರಿನಲ್ಲಿ ಜಗತ್ತಿನಾದ್ಯಂತ ಶೋಷಣೆ, ದೌರ್ಜನ್ಯ ನಡೆಯುತ್ತಿದೆ’ ಎಂದರು.

ಧರ್ಮವು ಯಾವಾಗಲೂ ಅಸ್ತಿತ್ವ-ದಲ್ಲಿರುತ್ತದೆ ಹಾಗೂ ಎಲ್ಲವೂ ಅದರ ಪ್ರಕಾರವೇ ಕಾರ್ಯನಿರ್ವಹಿಸುತ್ತದೆ. ಅದಕ್ಕಾಗಿಯೇ ಧರ್ಮವನ್ನು ‘ಸನಾತನ’ ಎಂದು ಕರೆಯಲಾಗುತ್ತದೆ ಎಂದು ಪ್ರತಿಪಾದಿಸಿದ ಅವರು, ‘ಧರ್ಮದಲ್ಲಿ ಹೇಳಿದಂತೆ ನಡೆದುಕೊಳ್ಳುವುದೇ ಧರ್ಮದ ರಕ್ಷಣೆ’ ಎಂದರು.

ಭಾರತ– ಕುವೈತ್ ನಡುವೆ ರಕ್ಷಣಾ ಪಾಲುದಾರಿಕೆ ಮತ್ತಷ್ಟು ಗಟ್ಟಿ

ಮೋದಿ– ಕುವೈತ್ ರಾಜ ಮಾತುಕತೆ

ಕುವೈತ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಕುವೈತ್ ರಾಜನ ಜತೆಗೆ ಭಾನುವಾರ ದ್ವಿಪಕ್ಷೀಯ ಬಾಂಧವ್ಯದ ಬಗ್ಗೆ ವಿಸ್ತೃತ ಮಾತುಕತೆ ನಡೆಸಿದ್ದು, ಈ ಮಾತುಕತೆಯ ನಂತರ ಉಭಯ ದೇಶಗಳ ರಕ್ಷಣಾ ಪಾಲುದಾರಿಕೆ ಮತ್ತಷ್ಟು ಗಟ್ಟಿಯಾಗಿದೆ.

ಇಲ್ಲಿನ ಭವ್ಯವಾದ ಬಯಾನ್ ಅರಮನೆಯಲ್ಲಿ ನಡೆದ ಸಭೆಯಲ್ಲಿ, ಮೋದಿ ಮತ್ತು ಶೇಖ್ ಮಿಶಾಲ್ ಅಲ್‌-ಅಹ್ಮದ್ ಅಲ್‌-ಜಬೀರ್ ಅಲ್‌-ಸಬಾ ಅವರು ವಿಶೇಷವಾಗಿ ಮಾಹಿತಿ ತಂತ್ರಜ್ಞಾನ, ಔಷಧ, ಫಿನ್‌ಟೆಕ್, ಮೂಲಸೌಕರ್ಯ ಮತ್ತು ಭದ್ರತೆ ಕ್ಷೇತ್ರಗಳಲ್ಲಿ ಸಹಕಾರ, ಬಾಂಧವ್ಯವನ್ನು ಹೆಚ್ಚಿಸುವತ್ತ ಗಮನ ಹರಿಸಿದರು.

ಕುವೈತ್‌ನಲ್ಲಿರುವ 10 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಭಾರತೀಯರ ಕ್ಷೇಮಕ್ಕೆ ಒತ್ತು ನೀಡಿರುವ ಅಮೀರ್ ಅವರಿಗೆ ಮೋದಿ ಧನ್ಯವಾದ ಸಲ್ಲಿಸಿದರು. ಅಲ್ಲದೆ, ಕೊಲ್ಲಿ ರಾಷ್ಟ್ರದ ಅಭಿವೃದ್ಧಿ ಪಯಣದಲ್ಲಿ ಭಾರತೀಯ ಸಮುದಾಯ ನೀಡಿರುವ ಕೊಡುಗೆಗೂ ಮೆಚ್ಚುಗೆ ವ್ಯಕ್ತಪಡಿಸಿದರು.

‘ಅಮೀರ್ ಅವರೊಂದಿಗಿನ ಭೇಟಿ ಮತ್ತು ಮಾತುಕತೆ ಅತ್ಯುತ್ತಮವಾಗಿತ್ತು’ ಎಂದು ‘ಎಕ್ಸ್‌’ನಲ್ಲಿ ಪೋಸ್ಟ್ ಮಾಡಿರುವ ಮೋದಿ, ‘ನಾವು ಔಷಧ, ಐ.ಟಿ, ಫಿನ್‌ಟೆಕ್, ಮೂಲಸೌಕರ್ಯ ಮತ್ತು ಭದ್ರತೆಯಂತಹ ಪ್ರಮುಖ ವಲಯಗಳಲ್ಲಿ ಸಹಕಾರ ಹೆಚ್ಚಿಸುವ ಸಂಬಂಧ ಚರ್ಚೆ ಮಾಡಿದ್ದೇವೆ. ನಮ್ಮ ರಾಷ್ಟ್ರಗಳ ನಡುವಿನ ನಿಕಟ ಬಾಂಧವ್ಯಕ್ಕೆ ಅನುಗುಣವಾಗಿ, ನಮ್ಮ ಕಾರ್ಯತಂತ್ರದ ಪಾಲುದಾರಿಕೆಯನ್ನು ಹೊಸ ಹಂತಕ್ಕೆ ಕೊಂಡೊಯ್ದಿದ್ದೇವೆ’ ಎಂದು ಹೇಳಿದ್ದಾರೆ.

ಅಮೀರ್ ಶೇಖ್ ಅವರ ಆಹ್ವಾನದ ಮೇರೆಗೆ ಮೋದಿ ಅವರು ಶನಿವಾರ ಕುವೈತ್‌ಗೆ ಎರಡು ದಿನಗಳ ಭೇಟಿ ನೀಡಿದ್ದು, ಅವರಿಗೆ ಬಯಾನ್ ಅರಮನೆಯಲ್ಲಿ ಕುವೈತ್ ಪ್ರಧಾನಿ ಅಹ್ಮದ್ ಅಲ್-ಅಬ್ದುಲ್ಲಾ ಅಲ್-ಅಹ್ಮದ್ ಅಲ್-ಸಬಾ ಅವರು ಭವ್ಯ ಸ್ವಾಗತ ನೀಡಿದರು. ಭಾರತದ ಪ್ರಧಾನಿಯೊಬ್ಬರು ಕುವೈತ್‌ಗೆ 43 ವರ್ಷಗಳ ನಂತರ ಭೇಟಿ ನೀಡಿರುವುದು ಇದೇ ಮೊದಲು.

ಇದೇ ವೇಳೆ ಮೋದಿ ಅವರು ಅಮೀರ್ ಶೇಖ್ ಅವರನ್ನು ಭಾರತಕ್ಕೆ ಭೇಟಿ ನೀಡುವಂತೆ ಆಹ್ವಾನಿಸಿದರು.

ಕುವೈತ್ ತನ್ನ ‘ವಿಷನ್ 2035’ ಸಾಕಾರಕ್ಕೆ ಕೈಗೊಂಡಿರುವ ಹೊಸ ಉಪಕ್ರಮಗಳನ್ನು ಮೋದಿ ಶ್ಲಾಘಿಸಿದರು.

ಅಲ್ಲದೆ, ಈ ತಿಂಗಳ ಆರಂಭದಲ್ಲಿ ಗಲ್ಫ್ ಸಹಕಾರ ಮಂಡಳಿಯ (ಜಿಸಿಸಿ) ಶೃಂಗ ಸಭೆಯನ್ನು ಯಶಸ್ವಿಯಾಗಿ ಸಂಘಟಿಸಿದ್ದಕ್ಕೆ ಅಮೀರ್ ಅವರನ್ನು ಮೋದಿ ಅಭಿನಂದಿಸಿದರು. ‘ವಿಷನ್ 2035’ ಸಾಕಾರಾಕ್ಕೆ ಭಾರತವು ಹೆಚ್ಚಿನ ಪಾತ್ರ ವಹಿಸುವುದನ್ನು ಕುವೈತ್‌ನ ಅಮೀರ್ ಎದುರು ನೋಡುತ್ತಿದ್ದಾರೆ ಎಂದು ಭಾರತೀಯ ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಮೋದಿ ಅವರಿಗೆ ಕುವೈತ್‌ನ ಅತ್ಯುನ್ನತ ಗೌರವ ‘ದಿ ಆರ್ಡರ್ ಆಫ್ ಮುಬಾರಕ್ ಅಲ್ ಕಬೀರ್’ ಪ್ರಶಸ್ತಿಯನ್ನು ಶೇಖ್ ಮಿಶಾಲ್ ಅಲ್–ಅಹ್ಮದ್ ಅಲ್–ಜಬೀರ್ ಅಲ್–ಸಬಾ ಅವರು ಭಾನುವಾರ ಪ್ರದಾನ ಮಾಡಿದರು — ಪಿಟಿಐ ಚಿತ್ರ

> **ಮುಂದಿನ ದಿನಗಳಲ್ಲಿ ಭಾರತ- ಕುವೈತ್ ಸ್ನೇಹವು ಇನ್ನಷ್ಟು ವೃದ್ಧಿಸುವ ಬಗ್ಗೆ ಆಶಾವಾದಿಯಾಗಿದ್ದೇನೆ**
> **ನರೇಂದ್ರ ಮೋದಿ** ಭಾರತದ ಪ್ರಧಾನಿ

> **ಮೋದಿ ಮತ್ತು ಅಮೀರ್ ಅವರ ಮಾತುಕತೆಯು ಉಭಯ ರಾಷ್ಟ್ರಗಳ ಬಾಂಧವ್ಯವನ್ನು ಉತ್ತುಂಗಕ್ಕೆ ಕೊಂಡೊಯ್ಯುವ ಮಾರ್ಗದತ್ತ ಗಮನವನ್ನು ಕೇಂದ್ರೀಕರಿಸಿತ್ತು**
> **ರಣಧೀರ್ ಜೈಸ್ವಾಲ್,** ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ

ಮೋದಿಗೆ ಕುವೈತ್‌ನ ಅತ್ಯುನ್ನತ ಗೌರವ

ಉಭಯ ದೇಶಗಳ ನಡುವೆ ಉತ್ತಮ ಸಂಬಂಧ ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕುವೈತ್ ತನ್ನ ಅತ್ಯುನ್ನತ ಗೌರವ ‘ದಿ ಆರ್ಡರ್ ಆಫ್ ಮುಬಾರಕ್ ಅಲ್-ಕಬೀರ್’ ಭಾನುವಾರ ಪ್ರದಾನ ಮಾಡಿದೆ.

ಇಲ್ಲಿನ ಬಯಾನ್ ಅರಮನೆಯಲ್ಲಿ ಪ್ರಧಾನಿ ಮೋದಿ ಕುವೈತ್‌ನ ಶೇಖ್ ಮಿಶಾಲ್ ಅಲ್‌-ಅಹ್ಮದ್ ಅಲ್‌-ಜಬೀರ್ ಅಲ್‌-ಸಬಾ ಅವರಿಂದ ಈ ಗೌರವ ಸ್ವೀಕರಿಸಿದರು. ಮೋದಿಯವರಿಗೆ ಇದುವರೆಗೆ ಸಂದ 20ನೇ ಅಂತರರಾಷ್ಟ್ರೀಯ ಗೌರವ ಇದಾಗಿದೆ. ಈ ಗೌರವ ಪಡೆಯುವ ಮೂಲಕ ಮೋದಿ ಅವರು ಅಮೆರಿಕ ಅಧ್ಯಕ್ಷರಾಗಿದ್ದ ಬಿಲ್ ಕ್ಲಿಂಟನ್, ಜಾರ್ಜ್ ಬುಷ್, ಬ್ರಿಟನ್ ರಾಜಕುಮಾರ್ ಚಾರ್ಲ್ಸ್ ಅವರ ಸಾಲಿಗೆ ಸೇರಿದ್ದಾರೆ. ಇವರಿಗೆ ಕುವೈತ್ ಈ ಹಿಂದೆ ತನ್ನ ಅತ್ಯುನ್ನತ ಗೌರವವನ್ನು ನೀಡಿದೆ.

‘ದಿ ಆರ್ಡರ್ ಆಫ್ ಮುಬಾರಕ್ ಅಲ್ ಕಬೀರ್’ ಕುವೈತ್‌ನ ನೈಟ್‌ಹುಡ್ ಆರ್ಡರ್ ಆಗಿದೆ. ಇದನ್ನು ರಾಷ್ಟ್ರದ ಮುಖ್ಯಸ್ಥರು, ವಿದೇಶಿ ಗಣ್ಯರು ಮತ್ತು ವಿದೇಶಿ ರಾಜಮನೆತನದ ಸದಸ್ಯರಿಗೆ ಸ್ನೇಹದ ದ್ಯೋತಕವಾಗಿ ನೀಡಲಾಗುತ್ತದೆ.

‘ಕುವೈತ್ ನೀಡಿರುವ ಈ ಗೌರವವನ್ನು ಭಾರತದ ಜನರಿಗೆ ಮತ್ತು ಉಭಯ ದೇಶಗಳ ನಡುವಿನ ದೃಢವಾದ ಸ್ನೇಹಕ್ಕೆ ಅರ್ಪಿಸುತ್ತೇನೆ’ ಎಂದು ಮೋದಿ ‘ಎಕ್ಸ್‌’ನಲ್ಲಿ ಪೋಸ್ಟ್ ಮಾಡಿದ್ದಾರೆ.

ವಿದೇಶಾಂಗ ಸಚಿವ ಎಸ್.ಜೈಶಂಕರ್

ಜೈಶಂಕರ್ ಅವರಿಗೆ 27ನೇ ಸಾಲಿನ ‘ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ರಾಷ್ಟ್ರೀಯ ಶ್ರೇಷ್ಠತೆ ಪ್ರಶಸ್ತಿ’ಯನ್ನು ನೀಡಲಾಯಿತು. ಕಂಚಿ ಕಾಮಕೋಟಿ ಪೀಠದ 68ನೇ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮೀಜಿಯವರ ಹೆಸರಿನಲ್ಲಿ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ

‘ನಮ್ಮ ನಿರ್ಧಾರಗಳಿಗೆ ಯಾರ ಅಪ್ಪಣೆಯೂ ಬೇಡ’

ಮುಂಬೈ (ಪಿಟಿಐ): ‘ಭಾರತದ ನಿರ್ಧಾರವನ್ನು ಪ್ರಶ್ನಿಸುವ ಅಧಿಕಾರವನ್ನು ನಾವು ಯಾರಿಗೂ ಕೊಟ್ಟಿಲ್ಲ. ದೇಶದ ಹಿತಕ್ಕೆ ಮತ್ತು ಜಗತ್ತಿನ ಒಳಿತಿಗಾಗಿ ನಾವು ಸೂಕ್ತ ನಿರ್ಧಾರಗಳನ್ನೇ ತೆಗೆದುಕೊಳ್ಳುತ್ತೇವೆ. ನಾವು ತೆಗೆದುಕೊಳ್ಳುವ ನಿರ್ಧಾರಗಳಿಗೆ ಯಾರ ಅಪ್ಪಣೆ, ಕಾನೂನು–ಕಟ್ಟಳೆಗಳ ಅಗತ್ಯವಿಲ್ಲ’ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಅಭಿಪ್ರಾಯಪಟ್ಟರು.

ಮುಂಬೈನಲ್ಲಿ ನಡೆದ ಕಾರ್ಯಕ್ರಮದಲ್ಲಿ ಜೈಶಂಕರ್ ಅವರ ವಿಡಿಯೊ ಸಂದೇಶವನ್ನು ಪ್ರಸಾರ ಮಾಡಲಾಯಿತು.

‘ಸ್ವಾತಂತ್ರ್ಯವೆಂದರೆ ಯಾವುದೇ ವಿಚಾರಗಳಲ್ಲಿ ತಟಸ್ಥ ನಿಲುವು ತಾಳುವುದು ಎಂದರ್ಥವಲ್ಲ. ದೇಶದ ಹಿತಕ್ಕಾಗಿ ನಾವು ಯಾವ ನಿರ್ಧಾರವನ್ನು ಬೇಕಾದರೂ ತೆಗೆದುಕೊಳ್ಳಬ-ಹುದು. ಭಾರತವು ಖಂಡಿತವಾಗಿಯೂ ಪ್ರಗತಿ ಸಾಧಿಸುತ್ತದೆ. ಆದರೆ, ಈ ಪ್ರಕ್ರಿಯೆಯಲ್ಲಿ ನಮ್ಮ ಭಾರತೀಯತೆಯನ್ನು ಕಳೆದುಕೊಳ್ಳಬಾರದು’ ಎಂದರು.

‘ಪ್ರಗತಿ ಮತ್ತು ಆಧುನಿಕತೆ ಎಂದರೆ, ನಮ್ಮ ಪರಂಪರೆಯನ್ನು ತಿರಸ್ಕಾರ ಮಾಡುವುದು ಎಂದು ಹೇಳಿಕೊಡಲಾಗುತ್ತಿತ್ತು. ಬೇರೆ ದೇಶಗಳಿಂದ ಆಮದು ಮಾಡಿಕೊಂಡ ಮಾದರಿಗಳಿಂದ ಹೀಗೆ ಹೇಳಲಾಗುತ್ತಿತ್ತು. ಆದರೆ, ಈಗ ಪ್ರಜಾ-ಪ್ರಭುತ್ವವನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲಾಗಿದೆ. ಇದರಿಂದ ಧ್ವನಿ ಕಳೆದುಕೊಂಡಿದ್ದವರಿಗೆ ಧ್ವನಿ ಸಿಕ್ಕಂತಾಗಿದೆ. ಭಾರತವು ತನ್ನತನವನ್ನು ಮತ್ತೊಮ್ಮೆ ಹುಡುಕುತ್ತಿದೆ’ ಎಂದರು. ‘ನಾವು ಈಗ ಪ್ರಮುಖ ಘಟ್ಟದಲ್ಲಿ ನಿಂತಿದ್ದೇವೆ. ನಮ್ಮ ಸಾಮರ್ಥ್ಯ ಮತ್ತು ಆತ್ಮವಿಶ್ವಾಸ ಅದರಲ್ಲಿಯೂ ವಿವಿಧ ಕ್ಷೇತ್ರಗಳಲ್ಲಿ ಆಧುನಿಕತೆಗೆ ಒಗ್ಗಿಕೊಂಡಿದ್ದೇವೆ ಎಂಬುದನ್ನು ಕಳೆದ ದಶಕದಲ್ಲಿ ತೋರಿಸಿಕೊಟ್ಟಿದ್ದೇವೆ. ಬಡತನ, ತಾರತಮ್ಯ, ಅವಕಾಶ ಇಲ್ಲದಿರುವಂಥ ಪುರಾತನ ಸಮಸ್ಯೆಗಳನ್ನು ಬಗೆಹರಿಸಬಹುದು ಎಂದು ತೋರಿಸಿದ್ದೇವೆ. ಜಾಗತಿಕವಾಗಿ ನಾವು ಈಗ ಸ್ವತಂತ್ರ ಶಕ್ತಿಯಾಗಿ ರೂಪುಗೊಂಡಿದ್ದೇವೆ’ ಎಂದರು.

ಚುನಾವಣಾ ನಿಯಮಗಳಿಗೆ ತಿದ್ದುಪಡಿ: ಮಲ್ಲಿಕಾರ್ಜುನ ಖರ್ಗೆ ಟೀಕೆ

‘ಆಯೋಗದ ಸಾಂಸ್ಥಿಕ ಸಮಗ್ರತೆ ನಾಶ’

ಮಲ್ಲಿಕಾರ್ಜುನ ಖರ್ಗೆ

ನವದೆಹಲಿ (ಪಿಟಿಐ): ಕಾನೂನು ಮತ್ತು ನ್ಯಾಯ ಸಚಿವಾಲಯವು ಚುನಾವಣಾ ನಿಯಮಗಳಿಗೆ ತಿದ್ದುಪಡಿ ತಂದಿರುವುದು ‘ಚುನಾವಣಾ ಆಯೋಗದ ಸಾಂಸ್ಥಿಕ ಸಮಗ್ರತೆಯನ್ನು ನಾಶಪಡಿಸುವ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವ್ಯವಸ್ಥಿತ ಪಿತೂರಿಯ ಭಾಗವಾಗಿದೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದಾರೆ.

ಚುನಾವಣಾ ಆಯೋಗದ ಸಮಗ್ರತೆ-ಯನ್ನು ನಾಶ ಮಾಡುವ ಈ ಪ್ರಯತ್ನವು ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಮೇಲೆ ನಡೆದ ದಾಳಿ ಎಂದು ಅವರು ಆರೋಪಿಸಿದ್ದಾರೆ.

ಚುನಾವಣೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಗೆ ಈ ಹಿಂದೆ ಲಭ್ಯವಿದ್ದ ಕೆಲ ದಾಖಲೆಗಳ ಪರಿಶೀಲನೆ ಯನ್ನು ನಿರ್ಬಂಧಿಸಿ ಕಾನೂನು ಮತ್ತು ನ್ಯಾಯ ಸಚಿವಾಲಯವು ಚುನಾವಣಾ ನಿಯಮಗಳಿಗೆ ತಿದ್ದುಪಡಿ ತಂದಿದೆ.

‘ಚುನಾವಣಾ ಆಯುಕ್ತರನ್ನು ನೇಮಿಸುವ ಆಯ್ಕೆ ಸಮಿತಿಯಿಂದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರನ್ನು ಕೈಬಿಡುವ ನಿರ್ಧಾರವನ್ನು ಸರ್ಕಾರ ಈ ಹಿಂದೆ ತೆಗೆದುಕೊಂಡಿತ್ತು. ಇದೀಗ ಹೈಕೋರ್ಟ್ ಆದೇಶದ ನಂತರವೂ ಚುನಾವಣೆಗೆ ಸಂಬಂಧಿಸಿದ ಮಾಹಿತಿ ಸಾರ್ವಜನಿಕ-ರಿಗೆ ಲಭ್ಯವಾಗುವುದನ್ನು ತಡೆಯಲು ಮುಂದಾಗಿದೆ’ ಎಂದು ಖರ್ಗೆ ‘ಎಕ್ಸ್‌’ನಲ್ಲಿ ಪೋಸ್ಟ್ ಮಾಡಿದ್ದಾರೆ.

> **ಚುನಾವಣಾ ಆಯೋಗವು ಅರೆ ನ್ಯಾಯಿಕ ಸಂಸ್ಥೆಯಾಗಿದ್ದರೂ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದನ್ನು ಈ ತಿದ್ದುಪಡಿಯು ಮತ್ತೊಮ್ಮೆ ಸಾಬೀತುಪಡಿಸಿದೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

‘ಮತದಾರರ ಪಟ್ಟಿಯಿಂದ ಮತದಾರರ ಹೆಸರನ್ನು ಅಳಿಸುವುದು ಮತ್ತು ಇವಿಎಂ ಬಳಕೆಯಲ್ಲಿ ಪಾರದರ್ಶಕತೆಯ ಕೊರತೆಯಂತಹ ನಿರ್ದಿಷ್ಟ ವಿಷಯಗಳನ್ನು ಇಟ್ಟುಕೊಂಡು ಕಾಂಗ್ರೆಸ್ ಪಕ್ಷವು ಚುನಾವಣಾ ಆಯೋಗಕ್ಕೆ ಹಲವು ಸಲ ಪತ್ರ ಬರೆದಿದೆ. ಆದರೆ ಆಯೋಗವು ಪ್ರತಿ ಬಾರಿಯೂ ಸರಿಯಾಗಿ ಪ್ರತಿಕ್ರಿಯೆ ನೀಡಿಲ್ಲ ಮತ್ತು ಕೆಲವು ಗಂಭೀರ ದೂರುಗಳನ್ನು ಸ್ವೀಕರಿಸಲೂ ಮುಂದಾಗುವುದಿಲ್ಲ’ ಎಂದಿದ್ದಾರೆ.

‘ಚುನಾವಣಾ ಆಯೋಗವು ತನ್ನ ಇದುವರೆಗಿನ ಕಾರ್ಯನಿರ್ವಹಣೆಯಲ್ಲಿ ಅಪಾರದರ್ಶಕತೆ ಮತ್ತು ಸರ್ಕಾರದ ಪರ ಧೋರಣೆಯನ್ನು ತೋರಿಸಿದೆ’ ಎಂದು ಲೋಕಸಭೆ ಸದಸ್ಯರೂ ಆಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ದೂರಿದ್ದಾರೆ.

ತಿದ್ದುಪಡಿ ವಿರುದ್ಧ ಕಾನೂನು ಹೋರಾಟ ನಡೆಸಲಾಗುವುದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಹೇಳಿದ್ದರು.

‘ಪೆಗಾಸಸ್: ‘ಸುಪ್ರೀಂ’ ತನಿಖೆ ನಡೆಸುವುದೇ?’

ಪೆಗಾಸಸ್ ಗೂಢಚರ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಮೆರಿಕದ ನ್ಯಾಯಾಲಯ ನೀಡಿರುವ ತೀರ್ಪು, ಭಾರತದ ಹಲವರ ಮೇಲೆ ಬೇಹುಗಾರಿಕೆ ನಡೆದಿರುವುದನ್ನು ಸಾಬೀತುಪಡಿಸಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಹೇಳಿದ್ದಾರೆ.

ಇದೇ ಮೊದಲ ಬಾರಿಗೆ ಅಮೆರಿಕದ ನ್ಯಾಯಾಲಯವು ಪೆಗಾಸಸ್ ಕುತಂತ್ರಾಂಶಕ್ಕೆ ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಅನ್ನು ಹೊಣೆಗಾರನನ್ನಾಗಿ ಮಾಡಿದೆ. ಅಮೆರಿಕದ ನ್ಯಾಯಾಲಯದ ತೀರ್ಪಿಗೆ ಸಂಬಂಧಿಸಿದ ಮಾಧ್ಯಮ ವರದಿಯನ್ನು ಉಲ್ಲೇಖಿಸಿರುವ ಸುರ್ಜೇವಾಲಾ, ‘ಈ ತೀರ್ಪಿನ ಹಿನ್ನೆಲೆಯಲ್ಲಿ ಪೆಗಾಸಸ್ ಗೂಢಚರ್ಯೆ ಪ್ರಕರಣದ ಕುರಿತು ಸುಪ್ರೀಂ ಕೋರ್ಟ್ ಹೆಚ್ಚಿನ ತನಿಖೆ ನಡೆಸಲಿದೆಯೇ’ ಎಂದು ಪ್ರಶ್ನಿಸಿದ್ದಾರೆ.

> **ಪ್ರಕರಣದಲ್ಲಿ ನ್ಯಾಯ ದೊರಕಿಸಿ ಕೊಡಲು 300 ಮಂದಿಯ ಹೆಸರುಗಳನ್ನು ಸಲ್ಲಿಸುವಂತೆ ಸುಪ್ರೀಂ ಕೋರ್ಟ್, ಮೆಟಾ ಸಂಸ್ಥೆಗೆ ಸೂಚಿಸುವುದೇ?**
> **ರಣದೀಪ್ ಸುರ್ಜೇವಾಲಾ,** ಎಐಸಿಸಿ ಪ್ರಧಾನ ಕಾರ್ಯದರ್ಶಿ

‘ಪೆಗಾಸಸ್ ಕುತಂತ್ರಾಂಶ ಬಳಸಿ ಭಾರತದ 300 ಮಂದಿಯ ವಾಟ್ಸ್‌ಆ್ಯಪ್ ಸಂಖ್ಯೆಗಳನ್ನು ಗುರಿಯಾಗಿಸಿಕೊಂಡು ಗೂಢಚರ್ಯೆ ನಡೆದಿರುವುದನ್ನು ಈ ತೀರ್ಪು ಸಾಬೀತುಪಡಿಸಿದೆ. ಆ 300 ಮಂದಿ ಯಾರು ಎಂಬ ಪ್ರಶ್ನೆಗೆ ನರೇಂದ್ರ ಮೋದಿ ಸರ್ಕಾರ ಈಗ ಉತ್ತರಿಸಬೇಕಿದೆ’ ಎಂದು ‘ಎಕ್ಸ್‌’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಸರ್ಕಾರ ಗುರಿಯಾಗಿಸಿಕೊಂಡ ಇಬ್ಬರು ಕೇಂದ್ರ ಸಚಿವರು ಮತ್ತು ವಿರೋಧ ಪಕ್ಷಗಳ ಮೂವರು ನಾಯಕರು ಯಾರು? ಪತ್ರಕರ್ತರು ಮತ್ತು ಉದ್ಯಮಿಗಳು ಯಾರು? ಬಿಜೆಪಿ ಸರ್ಕಾರ ಮತ್ತು ಏಜೆನ್ಸಿಗಳು ಬೇಹುಗಾರಿಕೆ ನಡೆಸಿ ಯಾವೆಲ್ಲಾ ಮಾಹಿತಿಗಳನ್ನು ಕಲೆಹಾಕಿವೆ? ಕುತಂತ್ರಾಂಶವನ್ನು ಯಾವ ರೀತಿ ಬಳಸಲಾಯಿತು ಮತ್ತು ಆದರಿಂದ ಆದ ಪರಿಣಾಮಗಳೇನು’ ಎಂದು ಕೇಳಿದ್ದಾರೆ.

ಸಂಭ್ರಮ... ಕ್ರಿಸ್‌ಮಸ್ ಸಿದ್ಧತೆಯ ಅಂಗವಾಗಿ ಕೊಚ್ಚಿಯಲ್ಲಿ ಭಾನುವಾರ ನಡೆದ ಮೆರವಣಿಗೆಯಲ್ಲಿ ಮಕ್ಕಳು ದೇವತೆಯರ ವೇಷತೊಟ್ಟು ಪಾಲ್ಗೊಂಡರು –ಪಿಟಿಐ ಚಿತ್ರ

ನೇಮಕಾತಿ ಪತ್ರ ವಿತರಣೆ ಇಂದು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಹುದ್ದೆಗಳಿಗೆ ಹೊಸದಾಗಿ ನೇಮಕವಾದ 71,000 ಅಭ್ಯರ್ಥಿ-ಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಸೋಮವಾರ ನೇಮಕಾತಿ ಪತ್ರಗಳನ್ನು ವಿತರಣೆ ಮಾಡಲಿದ್ದಾರೆ ಎಂದು ಪ್ರಧಾನಮಂತ್ರಿಗಳ ಕಾರ್ಯಾಲಯ (ಪಿಎಂಒ) ತಿಳಿಸಿದೆ.

ಈ ಮೇಳವು ಉದ್ಯೋಗ ಸೃಷ್ಟಿಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಪ್ರಧಾನಿಯವರ ಬದ್ಧತೆಯನ್ನು ಈಡೇರಿಸುವ ದಿಸೆಯಲ್ಲಿ ಪ್ರಮುಖ ಹೆಜ್ಜೆಯಾಗಿದೆ ಎಂದು ಪಿಎಂಒ ಹೇಳಿದೆ.

ಉದ್ಯೋಗ ಮೇಳವು ರಾಷ್ಟ್ರದ ಬೆಳವಣಿಗೆ ಮತ್ತು ಸಬಲೀಕರಣ-ಕ್ಕಾಗಿ ಯುವಜನರಿಗೆ ಅರ್ಥಪೂರ್ಣ ಅವಕಾಶಗಳನ್ನು ನೀಡುತ್ತದೆ. ದೇಶದ 45 ಕಡೆಗಳಲ್ಲಿ ಉದ್ಯೋಗ ಮೇಳ ನಡೆಯಲಿದೆ ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿಗಳು

ವಿದೇಶ ಪ್ರಯಾಣ ಕಾರ್ತಿ ಚಿದಂಬರಂಗೆ ಅನುಮತಿ

ನವದೆಹಲಿ (ಪಿಟಿಐ): ಐಎನ್‌ಎಕ್ಸ್ ಮೀಡಿಯಾ ಪ್ರಕರಣದಲ್ಲಿ ಆರೋಪಿಯಾಗಿರುವ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರಿಗೆ ಜನವರಿ 4ರಿಂದ12ರ ನಡುವೆ ಆಸ್ಟ್ರಿಯಾ ಮತ್ತು ಬ್ರಿಟನ್‌ಗೆ ಪ್ರಯಾಣಿಸಲು ದೆಹಲಿಯ ನ್ಯಾಯಾಲಯ ಅನುಮತಿ ನೀಡಿದೆ.

ತಮ್ಮ ಕಂಪನಿಗೆ ಸಂಬಂಧಿಸಿದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಮತ್ತು ಮಗಳನ್ನು ಭೇಟಿ ಮಾಡುವ ಉದ್ದೇಶಕ್ಕಾಗಿ ಕಾರ್ತಿ ಚಿದಂಬರಂ ಅವರಿಗೆ ವಿಯೆನ್ನಾ (ಆಸ್ಟ್ರಿಯಾ) ಮತ್ತು ಬ್ರಿಟನ್‌ಗೆ ಪ್ರಯಾಣಿಸಲು ಅನುಮತಿ ನೀಡಲಾಗಿದೆ ಎಂದು ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ದೆಹಲಿ: ಬಾಂಗ್ಲಾದ 175 ಅಕ್ರಮ ವಲಸಿಗರ ಪತ್ತೆ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಬಾಂಗ್ಲಾದೇಶದ 175 ಮಂದಿ ವಲಸಿಗರು ಅಕ್ರಮವಾಗಿ ವಾಸ ಮಾಡು-ತ್ತಿರುವುದನ್ನು ಪತ್ತೆಹಚ್ಚಲಾಗಿದೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ನಗರದ ಹೊರವಲಯದಲ್ಲಿ ಶನಿವಾರ ಸಂಜೆ 6 ಗಂಟೆಗೆ ಪ್ರಾರಂಭವಾದ ಕಾರ್ಯಾಚರಣೆ ಒಟ್ಟು 12 ಗಂಟೆ ನಡೆಯಿತು. ಈ ವೇಳೆ ಬಾಂಗ್ಲಾದೇಶದ 175 ಮಂದಿ ಅಕ್ರಮ ವಲಸಿಗರನ್ನು ಗುರುತಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ದೆಹಲಿಯಲ್ಲಿ ನೆಲೆಸಿರುವ ಬಾಂಗ್ಲಾದೇಶದ ಅಕ್ರಮ ವಲಸಿಗರನ್ನು ಪತ್ತೆಹಚ್ಚಿ, ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಲೆಫ್ಟಿನೆಂಟ್ ಗವರ್ನರ್ ಕಚೇರಿಯು, ಮುಖ್ಯ ಕಾರ್ಯದರ್ಶಿ ಹಾಗೂ ಪೊಲೀಸ್ ಆಯುಕ್ತರಿಗೆ ಡಿ.11ರಂದು ನಿರ್ದೇಶನ ನೀಡಿತು. ಇದರ ಬೆನ್ನಲ್ಲೇ ದಾಖಲೆಗಳು ಇಲ್ಲದೇ ವಾಸಿಸುತ್ತಿರುವ ಜನರನ್ನು ಗುರುತಿಸುವ ಮತ್ತು ಗಡೀಪಾರು ಮಾಡುವ ವಿಶೇಷ ಕಾರ್ಯಾಚರಣೆಯನ್ನು ದೆಹಲಿ ಪೊಲೀಸರು ಆರಂಭಿಸಿದ್ದಾರೆ.

ಶಂಕಿತ ಅಕ್ರಮ ವಲಸಿಗರನ್ನು ಪತ್ತೆ ಮಾಡಿ ಅವರನ್ನು ವಾಪಸ್ ಕಳುಹಿಸುವ ಉಪಕ್ರಮ ಇದಾಗಿದ್ದು, ಇದಕ್ಕಾಗಿ ಮನೆ ಮನೆಗೆ ತೆರಳಿ ತಪಾಸಣೆ ನಡೆಸಲು ವಿಶೇಷ ತಂಡಗಳನ್ನು ರಚಿಸಲಾಗಿದೆ. ಕಾರ್ಯಾಚರಣೆ ವೇಳೆ ಶಂಕಿತರ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗುತ್ತದೆ ಮತ್ತು ಅವರನ್ನು ವಿಚಾರಣೆಗೊಳಪಡಿಸಲಾಗುತ್ತದೆ.

‘ಪುರಿ ದೇಗುಲ ದರ್ಶನಕ್ಕೆ ಹೊಸ ವ್ಯವಸ್ಥೆ’

ಭುವನೇಶ್ವರ (ಪಿಟಿಐ): ‘ಪುರಿ ಜಗನ್ನಾಥ ದೇವಾಲಯದಲ್ಲಿ ದೇವರ ದರ್ಶನವು ಸರಾಗವಾಗಿ ನಡೆಯುವಂತೆ ಹೊಸ ವ್ಯವಸ್ಥೆಯನ್ನು ಜ.1ರಿಂದ ಜಾರಿ ಮಾಡಲಾಗುವುದು’ ಎಂದು ಒಡಿಶಾದ ಕಾನೂನು ಸಚಿವ ಪೃಥ್ವಿರಾಜ್ ಹರಿಚಂದನ್ ಭಾನುವಾರ ಹೇಳಿದರು.

‘ಈಗಾಗಲೇ ಇರುವ ಪ್ರವೇಶ ದ್ವಾರದಿಂದಲೇ ಪ್ರವೇಶಕ್ಕೆ ಅವಕಾಶವಿದ್ದು, ಎರಡು ಪ್ರತ್ಯೇಕ ದ್ವಾರಗಳಲ್ಲಿ ದೇವಾಲಯದಿಂದ ಹೊರಬರುವ ವ್ಯವಸ್ಥೆ ಮಾಡಲಾಗುತ್ತಿದೆ. ಇದಕ್ಕೆ ಬೇಕಾದ ಕಾಮಗಾರಿ ಡಿ.27 ಅಥವಾ 28ಕ್ಕೆ ಪೂರ್ಣಗೊಳ್ಳಲಿದ್ದು, ಡಿ.30 ಮತ್ತು ಡಿ.31ರಂದು ಹೊಸ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಜಾರಿ ಮಾಡಲಾಗುವುದು’ ಎಂದರು.

‘ಮಹಿಳೆಯರು, ಮಕ್ಕಳು, ಅಂಗವಿಕಲರು ಮತ್ತು ಹಿರಿಯ ನಾಗರಿಕರಿಗಾಗಿ ದರ್ಶನಕ್ಕೆ ವಿಶೇಷ ವ್ಯವಸ್ಥೆ ಕಲ್ಪಿಸಲಾಗುತ್ತದೆ’ ಎಂದೂ ಮಾಹಿತಿ ನೀಡಿದರು.

ಸೆಂಗರ್‌ಗೆ ಜಾಮೀನು ವಿಸ್ತರಣೆ

ಕುಲದೀಪ್ ಸಿಂಗ್ ಸೆಂಗರ್

ನವದೆಹಲಿ (ಪಿಟಿಐ): ಉನ್ನಾವೊ ಅತ್ಯಾಚಾರ ಪ್ರಕರಣದ ಅಪರಾಧಿ, ಬಿಜೆಪಿಯ ಉಚ್ಚಾಟಿತ ಮುಖಂಡ ಕುಲದೀಪ್ ಸಿಂಗ್ ಸೆಂಗರ್‌ಗೆ ವೈದ್ಯಕೀಯ ಕಾರಣಗಳಿಗಾಗಿ ನೀಡಲಾಗಿದ್ದ ಮಧ್ಯಂತರ ಜಾಮೀನಿನ ಅವಧಿಯನ್ನು ದೆಹಲಿ ಹೈಕೋರ್ಟ್ ವಿಸ್ತರಿಸಿದೆ.

‘ಚಿಕಿತ್ಸೆಗಾಗಿ ಏಮ್ಸ್‌ಗೆ ಭೇಟಿ ನೀಡುವುದನ್ನು ಹೊರತುಪಡಿಸಿ, ಮನೆ ಬಿಟ್ಟು ಹೊರಹೋಗಬಾರದು’ ಎಂಬ ಷರತ್ತನ್ನು ನ್ಯಾಯಮೂರ್ತಿಗಳಾದ ಪ್ರತಿಭಾ ಎಂ. ಸಿಂಗ್ ಹಾಗೂ ಅಮಿತ್ ಶರ್ಮಾ ಅವರಿದ್ದ ಪೀಠ ವಿಧಿಸಿದೆ.

ಡಿ.20ರವರೆಗೂ ನೀಡಿದ್ದ ಮಧ್ಯಂತರ ಜಾಮೀನನ್ನು ನ್ಯಾಯಪೀಠವು ಜ.20ರವರೆಗೂ ವಿಸ್ತರಿಸಿದೆ.

ಮಧ್ಯಂತರ ಜಾಮೀನು ವಿಸ್ತರಿಸುವುದನ್ನು ಸಿಬಿಐ ಹಾಗೂ ಅತ್ಯಾಚಾರ ಸಂತ್ರಸ್ತೆಯು ವಿರೋಧಿಸಿದರು.

ಮೋದಿ, ಶಾ ಕುರಿತು ಅವಾಚ್ಯ ಪದ ಎಸ್‌ಪಿ ನಾಯಕನ ಬಂಧನ

ಬಲಿಯಾ (ಉತ್ತರ ಪ್ರದೇಶ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕುರಿತ ಅವಾಚ್ಯ ಪದಗಳನ್ನು ಬಳಸಿದ ಆರೋಪದ ಮೇಲೆ ಸ್ಥಳೀಯ ಎಸ್‌ಪಿ (ಸಮಾಜವಾದಿ ಪಕ್ಷ) ನಾಯಕನನ್ನು ಬಂಧಿಸಲಾಗಿದ್ದು, ಈ ಸಂಬಂಧ ಒಟ್ಟು 22 ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿ.20ರಂದು ಸಿಕಾರಿಯಾ ಕಾಲುವೆ ಬಳಿ ಮೋದಿ ಹಾಗೂ ಅಮಿತ್ ಶಾ ಅವರ ಪ್ರತಿಕೃತಿಗಳನ್ನು ಸುಟ್ಟು ಹಾಕಿದ ಆರೋಪಿಗಳು, ಅವರ ಕುರಿತು ಅವಾಚ್ಯ ಪದಗಳನ್ನು ಬಳಸಿದ್ದಾರೆ ಎಂದರು. ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ವರುಣ್ ಕುಮಾರ್ ರಾಕೇಶ್ ಅವರು ಭೀಮಾಪುರ ಠಾಣೆಯಲ್ಲಿ ನೀಡಿದ ದೂರಿನ ಮೇರೆಗೆ ಎಸ್‌ಪಿ ನಾಯಕ ಫತೇಹ್ ಬಹದೂರ್ ಯಾದವ್ ಅವರನ್ನು ಭಾನುವಾರ ಬಂಧಿಸಲಾಗಿದೆ. ಇವರೂ ಸೇರಿದಂತೆ 22 ಜನರ ಮೇಲೆ ಶನಿವಾರ ರಾತ್ರಿ ಎಫ್‌ಐಆರ್ ದಾಖಲಿಸಲಾಗಿದೆಎಂದು ಪೊಲೀಸರು ತಿಳಿಸಿದರು.

‘ಸಂಸತ್ತು: ಚರ್ಚೆಗೆ ಜನರೇ ಒತ್ತಡ ಹೇರಲಿದ್ದಾರೆ’

ಜಗದೀಪ್ ಧನಕರ್

ನವದೆಹಲಿ (ಪಿಟಿಐ): ‘ಜನರು ನಮ್ಮನ್ನು ಸಂಸತ್ತಿಗೆ ಯಾಕಾಗಿ ಚುನಾಯಿಸಿ ಕಳುಹಿಸುತ್ತಾರೆ ಎಂಬುದನ್ನು ಚಿಂತಿಸುವಂತೆ ಜನರೇ ರಾಜಕಾರಣಿಗಳ ಮೇಲೆ ಒತ್ತಡ ಹೇರಲಿದ್ದಾರೆ’ ಎಂದು ಉಪರಾಷ್ಟ್ರ-ಪತಿ ಜಗದೀಪ್ ಧನಕರ್ ಅವರು ಭಾನುವಾರ ಹೇಳಿದರು.

ಈ ಬಾರಿಯ ಚಳಿಗಾಲದ ಅಧಿವೇಶನದಲ್ಲಿ ಸೂಕ್ತ ರೀತಿಯಲ್ಲಿ ಚರ್ಚೆಗಳು ನಡೆಯದ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಧನಕರ್ ಅವರು, ‘ಚರ್ಚೆ ನಡೆಸುವಂತೆ ಸಂಸದರ ಮೇಲೆ ಹೊಣೆಗಾರಿಕೆ ನಿಗದಿಪಡಿಸಬೇಕು’ ಎಂದರು.

ಕಾಲ್ತುಳಿತದಲ್ಲಿ ಮಹಿಳೆ ಸಾವು ವಿಚಾರವಾಗಿ ಆಕ್ರೋಶ

ಅಲ್ಲು ಮನೆ ಹೂಕುಂಡ ಧ್ವಂಸ

ಹೈದರಾಬಾದ್ (ಪಿಟಿಐ): ಉಸ್ಮಾನಿಯಾ ವಿಶ್ವವಿದ್ಯಾಲಯದ ಜಂಟಿ ಕ್ರಿಯಾ ಸಮಿತಿಯ ಸದಸ್ಯರು ಎಂದು ಹೇಳಿಕೊಂಡಿರುವ ವ್ಯಕ್ತಿಗಳ ಗುಂಪೊಂದು ನಟ ಅಲ್ಲು ಅರ್ಜುನ್ ಅವರ ಮನೆಯ ಹೂಕುಂಡ ಮತ್ತು ಇತರ ವಸ್ತುಗಳನ್ನು ಭಾನುವಾರ ಧ್ವಂಸಗೊಳಿಸಿದೆ.

ಅಲ್ಲು ಅರ್ಜುನ್ ವಿರುದ್ಧ ಘೋಷಣೆಗಳನ್ನು ಕೂಗಿದ ಪ್ರತಿಭಟನಕಾರರು, ಕಾಲ್ತುಳಿತದಲ್ಲಿ ಮೃತಪಟ್ಟ ಮಹಿಳೆಗೆ ನ್ಯಾಯ ಒದಗಿಸುವಂತೆ ಆಗ್ರಹಿಸಿದ್ದಾರೆ. ಕೆಲವರು ಆವರಣ ಗೋಡೆಯ ಮೇಲೆ ಹತ್ತಿ ಟೊಮೆಟೊ ಎಸೆದರು. ಬಳಿಕ ಪ್ರತಿಭಟನಕಾರರನ್ನು ಪೊಲೀಸರು ಕರೆದೊಯ್ದರು.

ಈ ವೇಳೆ ಅಲ್ಲು ಅರ್ಜುನ್ ಮನೆಯಲ್ಲಿ ಇರಲಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಿನಿಮಾ ಮಾಡಿದವರು ಕೋಟ್ಯಂತರ ರೂಪಾಯಿ ಸಂಪಾದಿಸುತ್ತಾರೆ. ಸಿನಿಮಾ ನೋಡಿದವರು ಸಾಯುತ್ತಾರೆ ಎಂದು ಪ್ರ-ತಿಭಟನಕಾರರ ಬಳಿ ಇದ್ದ ಭಿತ್ತಿ ಫಲಕದಲ್ಲಿ ಬರೆಯಲಾಗಿತ್ತು. ಅಲ್ಲು ಅರ್ಜುನ್ ಅವರ ಪುಷ್ಪ–2 ಚಿತ್ರದ ಪ್ರದರ್ಶನದ ವೇಳೆ ಡಿ.4ರಂದು ಚಿತ್ರಮಂದಿರದ ಬಳಿ ಕಾಲ್ತುಳಿತ ಸಂಭವಿಸಿ ಮಹಿಳೆಯೊಬ್ಬರು ಮೃತಪಟ್ಟಿದ್ದರು.

ನಟ ಅಲ್ಲು ಅರ್ಜುನ್ ಮನೆ ಮುಂದೆ ಇದ್ದ ಹೂಕುಂಡಗಳನ್ನು ಗುಂಪೊಂದು ಧ್ವಂಸಗೊಳಿಸಿದೆ — ಪಿಟಿಐ ಚಿತ್ರ

ಕೆಲವರಿಗೆ ಅತೃಪ್ತಿ: ಅಜಿತ್ ಪವಾರ್



ಅಜಿತ್ ಪವಾರ್

ಬಾರಾಮತಿ (ಪಿಟಿಐ): ಸಚಿವರ ಸಂಖ್ಯೆ ಹೆಚ್ಚು ಇರುವುದರಿಂದ ಪ್ರತಿಯೊಬ್ಬರಿಗೂ ಖಾತೆಗಳನ್ನು ಹಂಚುವಾಗಿ ಕೆಲವೊಂದು ಇತಿಮಿತಿಗಳಿರುತ್ತವೆ ಎಂಬುದನ್ನು ಒಪ್ಪಿಕೊಂಡಿರುವ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್, ‘ಕೆಲವರಿಗೆ ಅತೃಪ್ತಿಯಾಗಿರುವುದು ನಿಜ’ ಎಂದು ಹೇಳಿದ್ದಾರೆ.

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಶನಿವಾರ ಸಚಿವರಿಗೆ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಎರಡು ವಾರಗಳ ಬಳಿಕ ಈ ಪ್ರಕ್ರಿಯೆ ನಡೆದಿದೆ.

ಬಾರಾಮತಿಯಲ್ಲಿ ಭಾನುವಾರ ರೋಡ್ ಶೋದಲ್ಲಿ ಪಾಲ್ಗೊಂಡ ಪವಾರ್, ‘ಸಚಿವರ ಸಂಖ್ಯೆ ಹೆಚ್ಚು ಇದ್ದು, ಮುಖ್ಯಮಂತ್ರಿ ಅವರು ಅಷ್ಟೂ ಮಂದಿಗೆ ಖಾತೆ ಹಂಚಿಕೆ ಮಾಡಬೇಕಾಗಿತ್ತು. ಕೆಲವರು ತಮ್ಮ ಪಾಲಿಗೆ ಬಂದ ಖಾತೆಯಿಂದ ಸಂತಸ-ಗೊಂಡಿದ್ದರೆ, ಕೆಲವರಿಗೆ ಅಸಮಾಧಾನ ಉಂಟಾಗಿದೆ’ ಎಂದಿದ್ದಾರೆ.

ಹಣಕಾಸು ಖಾತೆಯನ್ನು ತಮ್ಮಲ್ಲೇ ಉಳಿಸಿಕೊಂಡಿರುವ ಪವಾರ್ ಅವರು, ಸೋಮವಾರ ಅಧಿಕಾರ ವಹಿ-ಸಿಕೊಳ್ಳುವುದಾಗಿ ತಿಳಿಸಿದರು.

ಶಾ ಹೇಳಿಕೆ ಪ್ರಜಾಪ್ರಭುತ್ವಕ್ಕೆ ಮಸಿ: ಡಿಎಂಕೆ

ಚೆನ್ನೈ (ಪಿಟಿಐ): ಬಿ.ಆರ್. ಅಂಬೇಡ್ಕರ್ ಕುರಿತು ಅವಹೇಳನಕಾರಿಯಾಗಿ ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ನಡೆಯನ್ನು ಡಿಎಂಕೆ ಕಾರ್ಯಕಾರಿ ಸಮಿತಿ ಖಂಡಿಸಿದೆ.

‘ಕೇಂದ್ರ ಗೃಹ ಸಚಿವರ ನಡೆಯು ಸ್ವೀಕಾರಾರ್ಹ-ವಲ್ಲ. ಬಿಜೆಪಿ ಆಡಳಿತದಲ್ಲಿ ಸಂಸದೀಯ ಪ್ರಜಾಪ್ರಭುತ್ವಕ್ಕೆ ಮಸಿ ಬಳಿದಂತಾಗಿದೆ’ ಎಂದು ನಿರ್ಣಯ ಅಂಗೀಕರಿಸಲಾಗಿದೆ.

ತಮಿಳುನಾಡು ಮುಖ್ಯಮಂತ್ರಿ ಹಾಗೂ ಪಕ್ಷದ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ನೇತೃತ್ವದಲ್ಲಿ ಭಾನುವಾರ ನಡೆದ ಕಾರ್ಯಕಾರಿಣಿ ಸಭೆಯು ಅಂಬೇಡ್ಕರ್ ಅವರ ತ್ಯಾಗವನ್ನು ಅಮಿತ್ ಶಾ ಕಡೆಗಣಿಸಿದ್ದಾರೆ ಎಂದಿದೆ. ಸಚಿವರ ಹೇಳಿಕೆಯಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಬಿಜೆಪಿಯು, ಸಂಸತ್ತಿನ ಒಳಗೆ ಮತ್ತು ಆವರಣದಲ್ಲಿ ನಡೆಸಿದ ನಾಟಕಗಳು ಅಸಹ್ಯಕರವಾಗಿವೆ ಎಂದಿದೆ.

ಆರ್ಥಿಕ ಸಮೀಕ್ಷೆ ಕುರಿತ ಹೇಳಿಕೆ ರಾಹುಲ್‌ಗೆ ಸಮನ್ಸ್

ರಾಹುಲ್ ಗಾಂಧಿ

ಬರೇಲಿ (ಉತ್ತರ ಪ್ರದೇಶ) (ಪಿಟಿಐ): ಕಾಂಗ್ರೆಸ್ ನಾಯಕ ನಾಯಕ ರಾಹುಲ್ ಗಾಂಧಿ ಅವರು ಲೋಕಸಭೆ ಚುನಾವಣೆ ಪ್ರಚಾರದ ವೇಳೆ ಆರ್ಥಿಕ ಸಮೀಕ್ಷೆ ಕುರಿತು ಮಾಡಿದ್ದ ಭಾಷಣವನ್ನು ಆಕ್ಷೇಪಿಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದು ಈ ಸಂಬಂಧ ಜ.7ರಂದು ಖುದ್ದು ಹಾಜರಾಗುವಂತೆ ರಾಹುಲ್ ಅವರಿಗೆ ನ್ಯಾಯಾಲಯ ಸೂಚಿಸಿದೆ.

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸುಧೀರ್ ಕುಮಾರ್ ಅವರು ಈ ಬಗ್ಗೆ ಶನಿವಾರ ನೋಟಿಸ್ ಜಾರಿ ಮಾಡಿದ್ದಾರೆ. ‘ರಾಜಕೀಯವಾಗಿ ಲಾಭ ಪಡೆಯುವುದ-ಕ್ಕಾಗಿ ವರ್ಗಗಳ ಮಧ್ಯೆ ದ್ವೇಷ ಬಿತ್ತಿದ್ದಾರೆ’ ಎಂದು ‘ಅಖಿಲ ಹಿಂದೂ ಮಹಾಸಂಘ’ ಸಂಘಟನೆಯ ಮಂಡಲ ಅಧ್ಯಕ್ಷ ಪಂಕಜ್ ಪಾಠಕ್ ಅವರು ರಾಹುಲ್ ವಿರುದ್ಧ ಅರ್ಜಿ ಸಲ್ಲಿಸಿದ್ದಾರೆ. ‘ಆರ್ಥಿಕವಾಗಿ ಹಿಂದುಳಿದ ವರ್ಗಗಳ ಜನರ ಸಂಖ್ಯೆಯು ಅಧಿಕವಾಗಿದ್ದರೂ ಅವರ ಮಾಲೀಕತ್ವದ-ಲ್ಲಿರುವ ಆಸ್ತಿಗಳ ಸಂಖ್ಯೆ ಕಡಿಮೆ ಇದೆ. ಹೀಗಾಗಿ, ಯಾರ ಜನಸಂಖ್ಯೆ ಅಧಿಕವಾಗಿದೆಯೊ ಅವರು ಹೆಚ್ಚು ಆಸ್ತಿಗಾಗಿ ಬೇಡಿಕೆ ಮಂಡಿಸಬಹುದು’ ಎಂದು ಪ್ರಚಾರದ ವೇಳೆ ರಾಹುಲ್ ಗಾಂಧಿ ಹೇಳಿದ್ದರು.

‘ಪಿಒಇಎಂ-4’ ರಾಕೆಟ್: 24 ವಿವಿಧ ಪ್ರಯೋಗ ನಡೆಸುವ ಉದ್ದೇಶ

ಬಾಹ್ಯಾಕಾಶದಲ್ಲಿ ಬೆಳೆ; ಇಸ್ರೊ ಪ್ರಯೋಗ

ನವದೆಹಲಿ (ಪಿಟಿಐ): ಬಾಹ್ಯಾಕಾಶದಲ್ಲಿ ಬೀಜಗಳು ಮೊಳಕೆಯೊಡೆ-ಯುವುದು ಮತ್ತು ಅಲ್ಲಿ ಸಂಗ್ರಹ-ವಾಗಿರುವ ಉಪಗ್ರಹಗಳ ಅವಶೇಷಗಳನ್ನು ‘ರೋಬಾಟಿಕ್ ತೋಳು’ ಬಳಸಿ ತೆರವುಗೊಳಿಸುವ ಪ್ರಯೋಗವನ್ನು ಕೈಗೊಳ್ಳಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮುಂದಾಗಿದೆ.

ಇಸ್ರೊ ತನ್ನ ಮುಂದಿನ ಉಡಾವಣೆಗೆ ಬಳಸುವ ‘ಪಿಒಇಎಂ–4’ ರಾಕೆಟ್ ಹಲವು ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲಿದೆ. ‘ಪಿಎಸ್‌ಎಲ್‌ವಿ–60’ ಮಿಷನ್ ಈ ತಿಂಗಳ ಕೊನೆಯಲ್ಲಿ ನಡೆಯಲಿದ್ದು, ‘ಚೇಸರ್’ ಮತ್ತು ‘ಟಾರ್ಗೆಟ್’ ಹೆಸರಿನ ಎರಡು ಉಪಗ್ರಹಗಳನ್ನು ‘ಪಿಒಇಎಂ–4’ ರಾಕೆಟ್ ಕಕ್ಷೆಗೆ ಸೇರಿಸಲಿದೆ.

ಈ ಉಪಗ್ರಹಗಳನ್ನು ನಿರ್ದಿಷ್ಟ ಕಕ್ಷೆಯಲ್ಲಿ ಸೇರಿಸಿದ ನಂತರ, ಪಿಎಸ್‌ಎಲ್‌ವಿ ಆರ್ಬಿಟಲ್ ಎಕ್ಸ್‌ಪರಿಮೆಂಟ್ ಮಾಡ್ಯೂಲ್ (ಪಿಒಇಎಂ) ರಾಕೆಟ್ ನೆರವಿನಿಂದ ವಿವಿಧ ರೀತಿಯ 24 ಪ್ರಯೋಗಗಳನ್ನು ನಡೆಸಲು ಉದ್ದೇಶಿಸಲಾಗಿದೆ. ಇದರಲ್ಲಿ 14 ಪ್ರಯೋಗಗಳು ಇಸ್ರೊದ ಪ್ರಯೋಗಾಲಯಗಳಿಂದ ಮತ್ತು ಇತರ 10 ಪ್ರಯೋಗಗಳು ಖಾಸಗಿ ವಿಶ್ವ-ವಿದ್ಯಾಲಯ ಗಳು ಮತ್ತು ನವೋದ್ಯಮ-ಗಳಿಂದ ನಡೆಯಲಿವೆ.

ಮುಖ್ಯಾಂಶಗಳು

- ಈ ತಿಂಗಳಾಂತ್ಯಕ್ಕೆ ರಾಕೆಟ್ ಉಡಾವಣೆ ಸಾಧ್ಯತೆ
- ಎರಡು ಉಪಗ್ರಹಗಳನ್ನು ಕಕ್ಷೆಗೆ ಸೇರಿಸುವ ಯೋಜನೆ
- ಖಾಸಗಿ ವಿಶ್ವವಿದ್ಯಾಲಯಗಳ ಸಹಯೋಗ

ಮುಚ್ಚಿದ ಪೆಟ್ಟಿಗೆಯ ಪರಿಸರದಲ್ಲಿ ಎಂಟು ಅಲಸಂದೆ ಕಾಳುಗಳನ್ನು ಮೊಳಕೆಯೊಡೆಸಿ, ಎರಡು ಎಲೆಗಳು ಬರುವ ಹಂತದವರೆಗೆ ಸಸಿಯನ್ನು ಬೆಳೆಸಲು ಇಸ್ರೊ ಯೋಜಿಸಿದೆ. ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರವು (ವಿಎಸ್‌ಎಸ್‌ಸಿ) ಅಭಿವೃದ್ಧಿಪಡಿಸಿರುವ ಕಾಂಪ್ಯಾಕ್ಟ್ ರಿಸರ್ಚ್ ಮಾಡ್ಯೂಲ್ ಫಾರ್ ಆರ್ಬಿಟಲ್ ಪ್ಲಾಂಟ್ ಸ್ಟಡೀಸ್ (ಸಿಆರ್‌ಒಪಿಎಸ್) ಭಾಗವಾಗಿ ಈ ಪ್ರಯೋಗ ನಡೆಯಲಿದೆ.

ಮುಂಬೈನ ಅಮಿಟಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿ-ಸಿರುವ ಅಮಿಟಿ ಪ್ಲಾಂಟ್ ಎಕ್ಸ್‌ಪರಿಮೆಂಟಲ್ ಮಾಡ್ಯೂಲ್ ಇನ್ ಸ್ಪೇಸ್ (ಎಪಿಇಎಂಎಸ್), ಬಾಹ್ಯಾಕಾಶದ ಮೈಕ್ರೊಗ್ರ್ಯಾವಿಟಿ ಪರಿಸರವು ಪಾಲಕ್ ಸಸಿಗಳ ಬೆಳವಣಿಗೆಯ ಮೇಲೆ ಹೇಗೆ ಪರಿಣಾಮ ಬೀರಲಿದೆ ಎಂದು ಅಧ್ಯಯನ ನಡೆಸಲಿದೆ.

ಈ ಎರಡೂ ಪ್ರಯೋಗಗಳು (ಬಾಹ್ಯಾಕಾಶದಲ್ಲಿ ಪಿಒಇಎಂ–4 ಮತ್ತು ಭೂಮಿಯಲ್ಲಿ ಅಮಿಟಿ ವಿ.ವಿ) ಏಕಕಾಲದಲ್ಲಿ ನಡೆಯಲಿವೆ. ಸಸ್ಯಗಳು ಗುರುತ್ವಾಕರ್ಷಣೆ ಮತ್ತು ಬೆಳಕಿನ ದಿಕ್ಕನ್ನು ಹೇಗೆ ಗ್ರಹಿಸುತ್ತವೆ ಎಂಬುದರ ಕುರಿತ ಒಳನೋಟವನ್ನು ಈ ಪ್ರಯೋಗದ ಫಲಿತಾಂಶವು ನೀಡಲಿದೆ.

ವಿಎಸ್‌ಎಸ್‌ಸಿ ಅಭಿವೃದ್ಧಿಪಡಿಸಿರುವ ‘ಡೆಬ್ರಿಸ್ ಕ್ಯಾಪ್ಚರ್ ರೋಬಾಟಿಕ್ ಮ್ಯಾನಿಪುಲೇಟರ್’ ಬಾಹ್ಯಾಕಾಶದಲ್ಲಿರುವ ಅವಶೇಷಗಳನ್ನು ಸಂಗ್ರಹಿಸುವ ಸಾಮರ್ಥ್ಯವನ್ನು ಪ್ರದರ್ಶಿಸಲಿದೆ.

ಭಾರತ ತಂಡದ ಶುಭಾರಂಭ

ಮಹಿಳಾ ಏಕದಿನ ಕ್ರಿಕೆಟ್: ಮಂದಾನ, ರೇಣುಕಾ ಆಟಕ್ಕೆ ಒಲಿದ ಜಯ

ವಡೋದರಾ (ಪಿಟಿಐ): ಅಮೋಘ ಲಯದಲ್ಲಿರುವ ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ ಅವರ ಚೆಂದದ ಬ್ಯಾಟಿಂಗ್ ಮತ್ತು ರೇಣುಕಾ ಠಾಕೂರ್ ಅವರ ಚುರುಕಿನ ದಾಳಿಯ ಬಲದಿಂದ ಭಾರತ ಮಹಿಳೆಯರ ತಂಡವು ವೆಸ್ಟ್ ಇಂಡೀಸ್ ಎದುರಿನ ಏಕದಿನ ಪಂದ್ಯದಲ್ಲಿ ಜಯಿಸಿತು.

ಭಾನುವಾರ ಇಲ್ಲಿ ನಡೆದ ಸರಣಿಯ ಮೊದಲ ಪಂದ್ಯದಲ್ಲಿ ಸ್ಮೃತಿ 102 ಎಸೆತಗಳಲ್ಲಿ 91 ರನ್ ಗಳಿಸಿದರು. ರೇಣುಕಾ ಐದು ವಿಕೆಟ್ ಗೊಂಚಲು ಗಳಿಸಿದರು. ಭಾರತ ತಂಡವು 211 ರನ್‌ಗಳ ಭಾರಿ ಜಯ ಸಾಧಿಸಿತು. 3 ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಸಾಧಿಸಿತು.

ಕೋತಂಬಿ ಕ್ರೀಡಾಂಗಣದಲ್ಲಿ ಪ್ರವಾಸಿ ತಂಡವು ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸ್ಮೃತಿ ಮತ್ತು ಉಳಿದ ಬ್ಯಾಟರ್‌ಗಳ ಉತ್ತಮ ಆಟದಿಂದಾಗಿ ಭಾರತ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 314 ರನ್ ಗಳಿಸಿತು. ಅದಕ್ಕುತ್ತರವಾಗಿ ವಿಂಡೀಸ್ ತಂಡವು 26.2 ಓವರ್‌ಗಳಲ್ಲಿ 103 ರನ್ ಗಳಿಸಿ ಸೋತಿತು. ಮಧ್ಯಮವೇಗಿ ರೇಣುಕಾ (10-1-29-5) ಎದುರಾಳಿ ತಂಡವನ್ನು ಕಟ್ಟಿಹಾಕಿದರು. ಪ್ರಿಯಾ ಮಿಶ್ರಾ ಕೂಡ 2 ವಿಕೆಟ್ ಗಳಿಸಿದರು.

ರೇಣುಕಾ ಠಾಕೂರ್ ಸಿಂಗ್

ಕಳೆದ ಕೆಲವು ಪಂದ್ಯಗಳಿಂದ ಅಮೋಘ ಲಯದಲ್ಲಿರುವ ಸ್ಮೃತಿ ಇಲ್ಲಿಯೂ ತಮ್ಮ ಆಟ ಮುಂದುವರಿಸಿದರು. ಅವರು ಮತ್ತು ಪ್ರತೀಕಾ ರಾವಳ್ (40; 69ಎ, 4X4) ಮೊದಲ ವಿಕೆಟ್ ಜೊತೆಯಾಟದಲ್ಲಿ 110 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ರಾವಳ್ ಔಟಾದ ನಂತರ ಸ್ಮೃತಿ ಅವರು ಹರ್ಲೀನ್ ಡಿಯೊಲ್ (44; 50ಎ, 4X2, 6X1) ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು.

ಶತಕದ ಸನಿಹ ಸಾಗಿದ್ದ ಸ್ಮೃತಿ ಅವರನ್ನು 32ನೇ ಓವರ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದ ಝೈದಾ ಜೇಮ್ಸ್ ಅವರು ಜೊತೆಯಾಟವನ್ನೂ ಮುರಿದರು. ಹರ್ಲೀನ್ ಜೊತೆಗೂಡಿದ ನಾಯಕಿ ಕೌರ್ ಮಿಂಚಿನ ಬ್ಯಾಟಿಂಗ್ ಮಾಡಿದರು. 23 ಎಸೆತಗಳಲ್ಲಿ 34 ರನ್ ಗಳಿಸಿದರು. 3 ಬೌಂಡರಿ, 1 ಸಿಕ್ಸರ್ ಸಿಡಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಹರ್ಲೀನ್ ಮತ್ತು ಕೌರ್ 66 ರನ್ ಸೇರಿಸಿದರು. ಹರ್ಲೀನ್ ಔಟಾದ ಮೇಲೆ ರಿಚಾ ಘೋಷ್ (26; 13ಎ) ಮತ್ತು ಜೆಮಿಮಾ ರಾಡ್ರಿಗಸ್ (31; 19ಎ) ಕೂಡ ಬೀಸಾಟವಾಡಿದರು. ಇದರಿಂದಾಗಿ ತಂಡವು ದೊಡ್ಡ ಸ್ಕೋರ್ ಗಳಿಸಿತು. ಪ್ರವಾಸಿ ಬಳಗದ ಝೈದಾ ಐದು ವಿಕೆಟ್ ಗಳಿಸಿದರು.

ಗುರಿ ಬೆನ್ನಟ್ಟಿದ ವಿಂಡೀಸ್‌ಗೆ ಮೊದಲ ಎಸೆತದಲ್ಲಿಯೇ ಆಘಾತ ವಾಯಿತು. ಖಿಯಾನಾ ಜೋಸೆಫ್ ಅವರು ರನೌಟ್ ಆದರು. ಮೂರನೇ ಓವರ್‌ನಲ್ಲಿ ರೇಣುಕಾ ಅವರು ಹೆಯಲಿ ಮ್ಯಾಥ್ಯೂಸ್ ವಿಕೆಟ್ ಪಡೆದರು. ಇದರಿಂದಾಗಿ ಇಬ್ಬರೂ ಆರಂಭಿಕರು ಖಾತೆ ತೆರೆಯದೇ ನಿರ್ಗಮಿಸಿದರು. ಒತ್ತಡದಲ್ಲಿದ್ದ ವಿಂಡೀಸ್ ತಂಡಕ್ಕೆ ಚೇತರಿಸಿಕೊಳ್ಳುವ ಅವಕಾಶ ನೀಡದ ರೇಣುಕಾ ವಿಕೆಟ್‌ಗಳನ್ನು ಗಳಿಸಿದರು. ಅವರಿಗೆಪ್ರಿಯಾ ಮಿಶ್ರಾ, ತಿತಾಸ್ ಸಾಧು ಮತ್ತು ದೀಪ್ತಿ ಶರ್ಮಾ ಜೊತೆಯಾದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 314 (ಸ್ಮೃತಿ ಮಂದಾನ 91, ಪ್ರತೀಕಾ ರಾವಳ್ 40, ಹರ್ಲೀನ್ ದಿಯೊಲ್ 44, ಹರ್ಮನ್‌ಪ್ರೀತ್ ಕೌರ್ 34, ರಿಚಾ ಘೋಷ್ 26, ಜೆಮಿಮಾ ರಾಡ್ರಿಗಸ್ 31, ಹೆಯಲಿ ಮ್ಯಾಥ್ಯೂಸ್ 61ಕ್ಕೆ2, ಝೈದಾ ಜೇಮ್ಸ್ 45ಕ್ಕೆ5) ವೆಸ್ಟ್ ಇಂಡೀಸ್: 26.2 ಓವರ್‌ಗಳಲ್ಲಿ 103 (ಶೆಮೈನ್ ಕ್ಯಾಂಪ್‌ಬೆಲ್ 21, ಎಫ್ಫೆ ಫ್ಲೆಚರ್ ಔಟಾಗದೆ 24, ರೇಣುಕಾ ಠಾಕೂರ್ ಸಿಂಗ್ 29ಕ್ಕೆ5, ಪ್ರಿಯಾ ಮಿಶ್ರಾ 22ಕ್ಕೆ2) ಫಲಿತಾಂಶ:ಭಾರತ ತಂಡಕ್ಕೆ 211 ರನ್‌ಗಳ ಜಯ.
ಪಂದ್ಯಶ್ರೇಷ್ಠ: ರೇಣುಕಾ ಠಾಕೂರ್ ಸಿಂಗ್. ಸರಣಿಯಲ್ಲಿ 1-0 ಮುನ್ನಡೆ.

ಬುಲ್ಸ್ ಬೆಂಬಿಡದ ಸೋಲು

ಪುಣೆ: ಬೆಂಗಳೂರು ಬುಲ್ಸ್ ತಂಡವನ್ನು ಸೋಲು ಸತತವಾಗಿ ಬೆನ್ನಟ್ಟುತ್ತಿದೆ. ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ಪಂದ್ಯದಲ್ಲಿ ತಮಿಳ್ ತಲೈವಾಸ್ ತಂಡ ಭಾನುವಾರ 42-32 ರಲ್ಲಿ ಹತ್ತು ಅಂಕಗಳಿಂದ ಬುಲ್ಸ್ ತಂಡವನ್ನು ಸೋಲಿಸಿತು.

ವಿರಾಮದ ವೇಳೆ ತಲೈವಾಸ್ ಕೇವಲ ಒಂದು ಪಾಯಿಂಟ್ (14-13) ಮುನ್ನಡೆ ಪಡೆದಿತ್ತು. ಬುಲ್ಸ್ ತಂಡದ ರೇಡರ್ ಸುಶೀಲ್ 15 ಅಂಕಗಳನ್ನು ಗಳಿಸಿ ಸೋಲಿನಲ್ಲೂ ಪಂದ್ಯದ ಗರಿಷ್ಠ ಸ್ಕೋರರ್ ಎನಿಸಿ ಗಮನ ಸೆಳೆದರು. ನಿತಿನ್ ರಾವಲ್ ಐದು ಪಾಯಿಂಟ್ಸ್ ಗಳಿಸಿದರು. ತಲೈವಾಸ್ ತಂಡದ ಹಿಮಾಂಶು 13 ಮತ್ತು ಮೊಯಿನ್ ಶಫಗಿ 9 ಅಂಕಗಳನ್ನು ಗಳಿಸಿದರು.

ಎರಡೂ ತಂಡಗಳು ಪ್ಲೇಆಫ್ ರೇಸ್‌ನಲ್ಲಿರಲಿಲ್ಲ. ತಲೈವಾಸ್‌ಗೆ ಇದು 21 ಪಂದ್ಯಗಳಲ್ಲಿ ಎಂಟನೇ ಜಯ. ಅದು 50 ಅಂಕ ಕಲೆಹಾಕಿದ್ದು ಒಂಬತ್ತನೇ ಸ್ಥಾನದಲ್ಲಿದೆ. ಇನ್ನೊಂದು ಪಂದ್ಯ ಬಾಕಿಯಿದೆ. ಬುಲ್ಸ್‌ಗೆ ಇದು 21 ಪಂದ್ಯಗಳಲ್ಲಿ 18ನೇ ಸೋಲು. ಅದು ಎರಡು ಗೆಲುವು, ಒಂದು ಟೈ ಸೇರಿ ಒಟ್ಟು 19 ಅಂಕ ಗಳಿಸಿ ಕೊನೆಯ (12ನೇ) ಸ್ಥಾನದಲ್ಲಿದೆ. ಒಂದು ಪಂದ್ಯ ಆಡಲು ಇದೆ.

ಅಗ್ರಸ್ಥಾನದಲ್ಲಿ ಗಟ್ಟಿಯಾಗಿರುವ ಹರಿಯಾಣ ಸ್ಟೀಲರ್ಸ್ ದಿನದ ಎರಡನೇ ಪಂದ್ಯದಲ್ಲಿ 47-30ರಿಂದ ಯು ಮುಂಬಾ ತಂಡವನ್ನು ಸೋಲಿಸಿತು.

19 ವರ್ಷದೊಳಗಿನವರ ಮಹಿಳಾ ಏಷ್ಯಾ ಕ್ರಿಕೆಟ್

ಭಾರತದ ಮುಡಿಗೆ ಕಿರೀಟ

ಕ್ವಾಲಾಲಂಪುರ(ಪಿಟಿಐ): ಬಿರುಸಿನ ಅರ್ಧಶತಕ ಗಳಿಸಿದ ಗೊಂಗಡಿ ತ್ರಿಷಾ ಅವರ ಬ್ಯಾಟಿಂಗ್ ಬಲದಿಂದ ಭಾರತ ತಂಡವು 19 ವರ್ಷದೊಳಗಿನವರ ಏಷ್ಯಾ ಮಹಿಳೆಯರ ಟಿ20 ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ಭಾನುವಾರ ಇಲ್ಲಿ ನಡೆದ ಫೈನಲ್‌ನಲ್ಲಿ ಭಾರತದ ಯುವ ತಂಡವು 41 ರನ್‌ಗಳಿಂದ ಬಾಂಗ್ಲಾದೇಶ ಎದುರು ಗೆದ್ದಿತು.

ಟಾಸ್ ಗೆದ್ದ ಬಾಂಗ್ಲಾ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ತ್ರಿಷಾ (52; 47ಎ, 4X5, 6X2) ಅವರ ಅರ್ಧಶತಕದ ಬಲದಿಂದ ಭಾರತ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 117 ರನ್ ಗಳಿಸಿತು.

ತ್ರಿಷಾ ಅವರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳಿಂದ ದೊಡ್ಡ ಮೊತ್ತಗಳು ದಾಖಲಾಗಲಿಲ್ಲ.

ಗೊಂಗಡಿ ತ್ರಿಷಾ

ನಾಯಕಿ ನಿಕಿ ಪ್ರಸಾದ್ (12 ರನ್), ಮಿಥಿಲಾ ವಿನೋದ್ (17 ರನ್) ಹಾಗೂ ಆಯುಷಿ ಶುಕ್ಲಾ (10 ರನ್) ಅವರು ಮಾತ್ರ ಎರಡಂಕಿಯಲ್ಲಿ ರನ್ ಗಳಿಸಿದರು. ಇದೆಲ್ಲದರ ನಡುವೆ ತ್ರಿಷಾ ಏಕಾಂಗಿ ಹೋರಾಟ ನಡೆಸಿದರು. ಅವರು 110.63ರ ಸ್ಟ್ರೈಕ್‌ರೇಟ್‌ನಲ್ಲಿ ತ್ರಿಷಾ ರನ್ ಗಳಿಸಿದರು.

ಬಾಂಗ್ಲಾ ತಂಡದ ಫರ್ಜಾನಾ ಯಾಸ್ಮೀನ್ (31ಕ್ಕೆ4) ಭಾರತದ ಬ್ಯಾಟಿಂಗ್ ಪಡೆಯನ್ನು ಕಾಡಿದರು. ಅಗ್ರಕ್ರಮಾಂಕ ಮತ್ತು ಮಧ್ಯಮ ಕ್ರಮಂಕದ ವಿಕೆಟ್ ಗಳನ್ನು ಉರುಳಿಸಿದರು. ಅವರಿಗೆ ನಿಶಿತಾ ಅಖ್ತರ್ ನಿಶಿ (23ಕ್ಕೆ2) ಅವರು ಉತ್ತಮ ಜೊತೆ ನೀಡಿದರು.

ಸಾಧಾರಣ ಗುರಿ ಬೆನ್ನಟ್ಟಿದ್ದ ಬಾಂಗ್ಲಾ ತಂಡವು 18.3 ಓವರ್‌ಗಳಲ್ಲಿ 76 ರನ್ ಗಳಿಸಲಷ್ಟೇ ಶಕ್ತವಾಯಿತು.

ಭಾರತದ ಆಯುಷಿ ಶುಕ್ಲಾ (17ಕ್ಕೆ3) ಅವರು ಬಾಂಗ್ಲಾ ತಂಡಕ್ಕೆ ಸವಾಲೊಡ್ಡಿದರು. ಅವರೊಂದಿಗೆ ಸೋನಮ್ ಯಾದವ್ ಮತ್ತು ಪರುಣಿಕಾ ಸಿಸೊಡಿಯಾ ಅವರೂ ಉತ್ತಮವಾಗಿ ಬೌಲಿಂಗ್ ಮಾಡಿದರು. ತಲಾ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 117 (ಜಿ. ತ್ರಿಷಾ 52, ಫರ್ಜಾನಾ ಯಾಸ್ಮಿನ್ 32ಕ್ಕೆ4) ಬಾಂಗ್ಲಾದೇಶ: 18.3 ಓವರ್‌ಗಳಲ್ಲಿ 76 (ಜೈರಿಯಾ ಫಿರ್ದೋಸ್ 22, ಆಯುಷಿ ಶುಕ್ಲಾ 17ಕ್ಕೆ3, ಸೋನಮ್ ಯಾದವ್ 13ಕ್ಕೆ2, ಪರುಣಿಕಾ ಸಿಸೊಡಿಯಾ 12ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 41 ರನ್‌ಗಳಿಂದ ಜಯ.
ಪಂದ್ಯದ ಆಟಗಾರ್ತಿ: ಜಿ. ತ್ರಿಷಾ.

ಚಾಂಪಿಯನ್ಸ್ ಟ್ರೋಫಿ: ಯುಎಇಯಲ್ಲಿ ಭಾರತ ಪಂದ್ಯಗಳು

ಕರಾಚಿ (ಪಿಟಿಐ): ಮುಂಬರಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವು ಆಡಲಿರುವ ಪಂದ್ಯಗಳನ್ನು ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ. ಅಲ್ಲದೇ ಸೆಮಿಫೈನಲ್ ಮತ್ತು ಫೈನಲ್ ಪಂದ್ಯಗಳಿಗೂ ದುಬೈ ಆತಿಥ್ಯ ವಹಿಸಲಿದೆ.ಪಾಕ್ ಕ್ರಿಕೆಟ್ ಮಂಡಳಿಯು ಈ ಟೂರ್ನಿಯನ್ನು ಆಯೋಜಿಸುತ್ತಿದೆ. ಆದರೆ ಪಾಕ್‌ಗೆ ತೆರಳುವುದಿಲ್ಲ ಎಂದ ಭಾರತ ಸ್ಪಷ್ಟಪಡಿಸಿದೆ. ಆದ್ದರಿಂದ ಭಾರತ ತಂಡವು ಆಡುವ ಪಂದ್ಯಗಳನ್ನು ತಟಸ್ಥ ತಾಣದಲ್ಲಿ ನಡೆಸಲಾಗುತ್ತಿದೆ. ಪಿಸಿಬಿ ಮುಖ್ಯಸ್ಥ ಮೊಹಸಿನ್ ನಖ್ವಿ ಮತ್ತು ಯುಎಇ ಕ್ರಿಕೆಟ್ ಸಂಸ್ಥೆಯ ಶೇಖ್ ನಹಯನ್ ಅಲ್ ಮುಬಾರಕ್ ಚರ್ಚಿಸಿ ತಾಣಗಳನ್ನು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರ್‍ಯಾಪಿಡ್ ಚೆಸ್ 25ರಂದು

ಬೆಂಗಳೂರು: ಕಲಾ ದರ್ಪಣ ಸಂಸ್ಥೆಯ ಆಶ್ರಯದಲ್ಲಿ ಇದೇ 25ರಂದು ರ್‍ಯಾಪಿಡ್ ಚೆಸ್ ಟೂರ್ನಿ ಆಯೋಜಿಸಲಾಗಿದೆ. ಕೋಣನಕುಂಟೆಯ ಸಿಲಿಕಾನ್ ಸಿಟಿ ಶಾಲೆಯಲ್ಲಿ ಟೂರ್ನಿ ನಡೆಯಲಿವೆ. ವಿಜೇತರಿಗೆ ಒಟ್ಟು ₹ 30,000 ಮೊತ್ತದ ಬಹುಮಾನ ಮತ್ತು ಟ್ರೋಫಿಗಳನ್ನು ನೀಡಲಾಗುವುದು. ವಿವರಗಳಿಗೆ ಸಂಪರ್ಕಿಸಿ; ಮೊಬೈಲ್ ಸಂಖ್ಯೆ 8431737265.

ಆಕರ್ಷಿ, ಅನ್ಮೋಲ್, ಅನುಪಮಾಗೆ ಸೋಲು

ಬ್ಯಾಡ್ಮಿಂಟನ್: ಅನಿರೀಕ್ಷಿತಗಳ ಸರಮಾಲೆ ● ಕರ್ನಾಟಕದ ರಘು, ಮಿಥುನ್ ಮುನ್ನಡೆ

ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಭಾನುವಾರ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕರ್ನಾಟಕದ ರಘು ಎಂ. ಅವರ ಆಟದ ವೈಖರಿ ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುರುಷರ ಸಿಂಗಲ್ಸ್‌ನಲ್ಲಿ ಶನಿವಾರ ಅನಿರೀಕ್ಷಿತಗಳು ಘಟಿಸಿದರೆ, ಭಾನುವಾರ ಮಹಿಳೆಯರ ವಿಭಾಗದ ಸರದಿಯಾಗಿತ್ತು. ಕೆಬಿಎ ಹಾಲ್‌ನಲ್ಲಿ ನಡೆಯುತ್ತಿರುವ 86ನೇ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಹಾಲಿ ಚಾಂಪಿಯನ್ ಅನ್ಮೋಲ್ ಖರ್ಬ್, ಅಗ್ರಶ್ರೇಯಾಂಕದ ಆಕರ್ಷಿ ಕಶ್ಯಪ್ ಸೇರಿದಂತೆ ಅಗ್ರ ಆರು ಆಟಗಾರ್ತಿಯರು ಕ್ವಾರ್ಟರ್‌ಫೈನಲ್‌ಗಿಂತ ಮೊದಲೇ ಹೊರಬಿದ್ದರು.

ಕರ್ನಾಟಕದ ರಘು ಎಂ. ಮತ್ತು ಮಾಜಿ ಚಾಂಪಿಯನ್ ಮಿಥುನ್ ಮಂಜುನಾಥ್ ಪುರುಷರ ಸಿಂಗಲ್ಸ್ ಸೆಮಿಫೈನಲ್ ತಲುಪಿದ್ದು ರಾಜ್ಯದ ಸವಾಲನ್ನು ಜೀವಂತವಾಗಿರಿಸಿದ್ದಾರೆ. 26 ವರ್ಷ ವಯಸ್ಸಿನ ರಘು ಎಂಟರ ಘಟ್ಟದ ಪಂದ್ಯದಲ್ಲಿ ಮಹಾರಾಷ್ಟ್ರದ ರೋಹನ್ ಗುರ್ನಾನಿ ಅವರನ್ನು ಸೋಲಿಸಿದರೆ, ಮಿಥುನ್ ಇನ್ನೊಂದು ಪಂದ್ಯದಲ್ಲಿ 21-9, 21-9 ರಿಂದ ಶಂಕರ ಸಾರಸ್ವತ್ ಅವರನ್ನು ಹಿಮ್ಮೆಟ್ಟಿಸಿದರು.

ಎಂಟರ ಘಟ್ಟದ ಇತರ ಪಂದ್ಯಗಳಲ್ಲಿ ಅಗ್ರ ಶ್ರೇಯಾಂಕದ ಸತೀಶ್ ಕುಮಾರ್ 21-11, 21-12 ರಿಂದ ಡಿ.ಕೌಶಲ್ ಅವರನ್ನು ಸೋಲಿಸಿದರೆ, ಛತ್ತೀಸಗಢದ ರೌನಕ್ ಚೌಹಾನ್ 21-10, 21-16 ರಿಂದ 14ನೇ ಶ್ರೇಯಾಂಕದ ಆಲಾಪ್ ಮಿಶ್ರಾ ಅವರನ್ನು ಪರಾಭವಗೊಳಿಸಿದರು.

ಮಹಿಳಾ ಸಿಂಗಲ್ಸ್‌ನಲ್ಲಿ ತಮಿಳುನಾಡಿನ ಆದರ್ಶಿನಿ ಶ್ರೀ ಯಶಸ್ಸಿನ ಓಟ ಮುಂದುವರಿಸಿ ಸೆಮಿಫೈನಲ್ ತಲುಪಿದರು. ಅವರು 23-21, 21-12ರಲ್ಲಿ ಶ್ರೇಯಾ ಲೇಲೆ ಅವರನ್ನು ಹಿಮ್ಮೆಟ್ಟಿಸಿದರು. ಅವರ ಮುಂದಿನ ಎದುರಾಳಿ 13ನೇ ಶ್ರೇಯಾಂಕದ ದೇವಿಕಾ ಸಿಹಾಗ್ (ಹರಿಯಾಣ). ದೇವಿಕಾ ಇನ್ನೊಂದು ಪಂದ್ಯದಲ್ಲಿ 17-21, 21-9, 21-16 ರಿಂದ ಕರ್ನಾಟಕದ ರುಜುಲಾ ರಾಮು ಅವರ ಯಶಸ್ಸಿನ ಓಟಕ್ಕೆ ಅಂತ್ಯಹಾಡಿದರು.

ಗುಜರಾತ್‌ನ ತಸ್ನಿಂ ಮೀರ್ ಎಂಟರ ಘಟ್ಟದ ಪಂದ್ಯದಲ್ಲಿ 21-16, 21-18 ರಿಂದ ಏಳನೇ ಶ್ರೇಯಾಂಕದ ಇಶಾರಾಣಿ ಬರೂವ ಅವರನ್ನು ಹಿಮ್ಮೆಟ್ಟಿಸಿದರು.

ಅಗ್ರ ಆಟಗಾರ್ತಿಯರಿಗೆ ಆಘಾತ: ಮಹಿಳಾ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಆರು ಮಂದಿ ಅಗ್ರ ಆಟಗಾರ್ತಿಯರು ಹೊರಬಿದ್ದಿದ್ದರು. ಸೆಮಿಫೈನಲ್‌ನಲ್ಲಿ ಮೊದಲ ಎಂಟು ಶ್ರೇಯಾಂಕದ ಆಟಗಾರ್ತಿಯರಲ್ಲಿ ಒಬ್ಬರೂ ಸ್ಥಾನ ಪಡೆಯದಿರುವುದು ಅಚ್ಚರಿ ಮೂಡಿಸಿದೆ.

17 ವರ್ಷ ವಯಸ್ಸಿನ ಅನ್ಮೋಲ್ (ಹರಿಯಾಣ) 12-21, 15-21 ರಲ್ಲಿ ನೇರ ಗೇಮ್‌ಗಳಿಂದ 12ನೇ ಶ್ರೇಯಾಂಕದ ಶ್ರೇಯಾಂಶಿ ವಲಿಶೆಟ್ಟಿ ಅವರಿಗೆ ಶರಣಾದರು.

16ನೇ ಶ್ರೇಯಾಂಕದ ತಸ್ನಿಮ್ ಮೀರ್ ಇನ್ನೊಂದು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 21-19, 21-17ರಲ್ಲಿ ಅಗ್ರ ಶ್ರೇಯಾಂಕದ ಆಕರ್ಷಿ (ಛತ್ತೀಸಗಢ) ಅವರನ್ನು ಹೊರದೂಡಿದರು. 15ನೇ ಶ್ರೇಯಾಂಕದ ಶ್ರೇಯಾ ಲೇಲೆ ಸ್ಫೂರ್ತಿಯುತ ಓಟ ಮುಂದುವರಿಸಿ, ಎರಡನೇ ಶ್ರೇಯಾಂಕದ ಅನುಪಮಾ ಉಪಾಧ್ಯಾಯ (ಉತ್ತರಾಖಂಡ) ಅವರನ್ನು ರೋಚಕ ಹೋರಾಟದಲ್ಲಿ 13-21, 21-18, 21-14 ರಿಂದ ಸೋಲಿಸಿದರು. 13ನೇ ಶ್ರೇಯಾಂಕದ ದೇವಿಕಾ ಸಿಹಾಗ್ 21-19, 21-18 ರಿಂದ ನಾಲ್ಕನೇ ಶ್ರೇಯಾಂಕದ ತನ್ವಿ ಶರ್ಮಾ ಅವರನ್ನು ಹಿಮ್ಮೆಟ್ಟಿಸಿದರು. ಪಂಜಾಬಿನ ತನ್ವಿ, ಕಳೆದ ವರ್ಷದ ರನ್ನರ್ ಅಪ್ ಆಗಿದ್ದಾರೆ.

ಶ್ರೇಯಾಂಕರಹಿತ ಆಟಗಾರ್ತಿ ರುಜುಲಾ ರಾಮು ಮತ್ತೊಂದು ಅನಿರೀಕ್ಷಿತ ಫಲಿತಾಂಶದಲ್ಲಿ 21-19, 20-22, 21-13 ರಿಂದ ಐದನೇ ಶ್ರೇಯಾಂಕದ ಮಾನ್ಸಿ ಸಿಂಗ್ ಅವರನ್ನು ಸೋಲಿಸಿದರು. 14ನೇ ಶ್ರೇಯಾಂಕದ ಸಾಕ್ಷಿ ಫೋಗಟ್ (ರಾಜಸ್ಥಾನ) 21-18, 21-19 ರಿಂದ ಆರನೇ ಶ್ರೇಯಾಂಕದ ಅದಿತಿ ರಾವ್ ಅವರನ್ನು ಮಣಿಸಿದರು. ಅಸ್ಸಾಮಿನ ಇಶಾರಾಣಿ 23-21, 21-10 ರಿಂದ ಉದಯೋನ್ಮುಖ ಆಟಗಾರ್ತಿ ರಕ್ಷಿತಾ ಶ್ರೀ (ತಮಿಳುನಾಡು) ಅವರನ್ನು ಪರಾಭವಗೊಳಿಸಿದರು.

ಆಯುಷ್ ಶೆಟ್ಟಿ ನಿರ್ಗಮನ: ಪು ರುಷರ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಆಯುಷ್ ಶೆಟ್ಟಿ ನಿರ್ಗಮಿಸಿದ ಅತಿ ಹೆಚ್ಚಿನ ಶ್ರೇಯಾಂಕ ಆಟಗಾರ ಎನಿಸಿದರು. ಮಾಜಿ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್ ಕಂಚಿನ ಪದಕ ವಿಜೇತ ಆಯುಷ್ 15-21, 21-11, 5-21ರಲ್ಲಿ 14ನೇ ಶ್ರೇಯಾಂಕದ ಆಲಾಪ್ ಮಿಶ್ರಾ ಎದುರು ಸೋಲನುಭವಿಸಿದರು.

ರಾಷ್ಟ್ರೀಯ ಟಿಟಿ: ಸಾಕ್ಷ್ಯ, ಅರಿವ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸಾಕ್ಷ್ಯ ಸಂತೋಷ್ ಮತ್ತು ಎನ್‌ಸಿಒಇಯ ಅರಿವ್ ದತ್ತಾ ಇಲ್ಲಿ ನಡೆದ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಭಾನುವಾರ ಕ್ರಮವಾಗಿ 11 ವರ್ಷದೊಳಗಿನವರ ಬಾಲಕಿ ಮತ್ತು ಬಾಲಕರ ವಿಭಾಗದ ಪ್ರಶಸ್ತಿ ಗಳಿಸಿದರು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಸಾಕ್ಷ್ಯ ಸಂತೋಷ್ 13-11, 11-9, 10-12, 11-5ರಿಂದ ಅಸ್ಸಾಂ ರಾಜ್ಯದ ದಿವಿಜ್ ಪಾಲ್ ವಿರುದ್ಧ ಗೆದ್ದರು. ಸೆಮಿಫೈನಲ್‌ನಲ್ಲಿ ಸಾಕ್ಷ್ಯ 11-3, 3-11, 11-6, 13-11ರಿಂದ ಅಸ್ಸಾಮಿನ ಇಶಾನಿ ಗೊಗೊಯ್ ವಿರುದ್ಧ ಜಯಿಸಿದರು. ಇನ್ನೊಂದು ಸೆಮಿಯಲ್ಲಿ ದಿವಿಜಾ 11-7, 11-5, 12-10ರಿಂದ ಮಹಾರಾಷ್ಟ್ರದ ಜಿನಾಯಾ ವಧನ್ ವಿರುದ್ಧ ಗೆದ್ದರು. ಬಾಲಕರ ವಿಭಾಗದಲ್ಲಿ ಅರಿವ್ 11-8, 11-4, 11-5 ರಿಂದ ಬಂಗಾಳದ ಜೆಮ್ ಮಹಾಲನಾಬಿಷ್ ವಿರುದ್ಧ ಗೆದ್ದರು. ನಾಲ್ಕರ ಘಟ್ಟದ ಪಂದ್ಯಗಳಲ್ಲಿ ಅರಿವ್ 11-4, 11-6, 12-10ರಿಂದ ಅಸ್ಸಾಮಿನ ಬಿಪ್ರೊಜಿತ್ ಪಾಲ್ ವಿರುದ್ಧ; ಜೆಮ್ 11-7, 11-2, 11-7 ರಿಂದ ದಕ್ಷ್ ಸೋನಿ ವಿರುದ್ಧ ಗೆಲುವು ಸಾಧಿಸಿದರು.

ಎಂಟರ ಘಟ್ಟದ ಪಂದ್ಯಗಳಲ್ಲಿ ಅರಿವ್ 3-0ಯಿಂದ ಬಂಗಾಳದ ಶುಭಂ ಅಧಿಕಾರಿ ಎದುರು; ಬಿಪ್ರೊಜಿತ್ 3-2ರಿಂದ ಬಂಗಾಳದ ರಾಜದೀಪ್ ಬಿಸ್ವಾಸ್ ಎದುರು; ದಕ್ಷ 3-1ರಿಂದ ಕೇರಳದ ಆದಿಶೇಷನ್ ವಿರುದ್ಧ; ಜೆಮ್ 3-0ಯಿಂದ ಬಂಗಾಳದ ಸೋಹನ್ ಅಧಿಕಾರಿ ಎದುರು ಜಯಿಸಿದರು.

ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ ಅರಿವ್ ದತ್ತಾ ಮತ್ತು ಸಾಕ್ಷ್ಯ ಸಂತೋಷ್ ಟ್ರೋಫಿಯೊಂದಿಗೆ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ/ಎಸ್‌.ಕೆ. ದಿನೇಶ್

ಭಾರತ ತಂಡದಲ್ಲಿ ಪರಿವರ್ತನೆ ಕಾಲ; ಅಶ್ವಿನ್ ಆಯಿತು, ಮುಂದೆ ಯಾರು?

ಗೌತಮ್ ಮುಂದಿರುವ ಗಂಭೀರ ಸವಾಲು

ಮೆಲ್ಬರ್ನ್ (ಪಿಟಿಐ): ತಂಡದೊಳಗೆ ಪರಿವರ್ತನೆ ತರುವುದು ಯಾವಾಗಲೂ ಸುಲಭವಲ್ಲ. ಅದರಲ್ಲೂ ಜನಪ್ರಿಯ ತಾರೆಗಳು ತಂಡದಲ್ಲಿದ್ದಾಗ ಮತ್ತು ಅವರು ತಮ್ಮ ವೃತ್ತಿಜೀವನದ ಸಂಧ್ಯಾಕಾಲದಲ್ಲಿದ್ದಾಗ ಪರಿವರ್ತನೆಯ ಸವಾಲು ಇನ್ನಷ್ಟು ಜಟಿಲವಾಗುತ್ತದೆ. ಇದೇ ಕಾರಣಕ್ಕಾಗಿ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಇಕ್ಕಟ್ಟಿನಲ್ಲಿ ಸಿಲುಕಿ ಕೊಂಡಿದ್ದಾರೆ.

ಈಚೆಗೆ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ದಿಢೀರ್ ನಿವೃತ್ತಿಯೊಂದಿಗೆ ಭಾರತ ತಂಡದಲ್ಲಿ ಪರಿವರ್ತನೆಯ ಕಾಲ ಆರಂಭವಾಗಿದೆ. ಈ ಹಂತದಲ್ಲಿ ಗಂಭೀರ್ ಅವರು ತಂಡದಲ್ಲಿರುವ ಕೆಲವು ಸೂಪರ್ ಸ್ಟಾರ್‌ಗಳಿಗೆ 'ಶಕುನದ ದೂತ'ನಾಗುವ ಸಾಧ್ಯತೆ ಇದೆ.

ಅಶ್ವಿನ್ ಸ್ವತಃ ನಿವೃತ್ತಿಯ ಕಠಿಣ ನಿರ್ಧಾರವನ್ನು ತೆಗೆದುಕೊಂಡಿರುವುದರ ಹಿಂದೆ ಗಂಭೀರ್ ಅವರು ಟೆಸ್ಟ್ ಸರಣಿಗೆ ವಾಷಿಂಗ್ಟನ್ ಸುಂದರ್ ಅವರನ್ನು ಆಯ್ಕೆ ಮಾಡಿದ್ದು ಕಾರಣ ಎಂಬುದು ಕ್ರಿಕೆಟ್ ಅವಲೋಕಿಸುವವರಿಗೆ ತಿಳಿಯದ ವಿಷಯವೇನಲ್ಲ. ಈ ಸಂಗತಿಯೇ ಅನುಭವಿ ಆಲ್‌ರೌಂಡರ್ ಹಠಾತ್ ನಿವೃತ್ತಿ ನಿರ್ಧಾರ ಪ್ರಚೋದಿಸಿರಬಹುದು.

ಪರ್ತ್‌ನಲ್ಲಿ ಈ ನಿರ್ಧಾರವಾಗಿದ್ದ ಸಂದರ್ಭದಲ್ಲಿ ನಾಯಕ ರೋಹಿತ್ ಶರ್ಮಾ ಇರಲಿಲ್ಲ.

ತಂಡದ ಡ್ರೆಸ್ಸಿಂಗ್ ರೂಮ್‌ನಲ್ಲಿ ಈಗ ಇರುವ ನಾಲ್ಕು ದೊಡ್ಡ ಹೆಸರುಗಳೆಂದರೆ ವಿರಾಟ್ ಕೊಹ್ಲಿ, ರೋಹಿತ್, ರವೀಂದ್ರ ಜಡೇಜ ಮತ್ತು ಮೊಹಮ್ಮದ್ ಶಮಿ ಅವರದ್ದು.

ಶಮಿ ಸದ್ಯ ಈ ಸರಣಿಯಲ್ಲಿ ಆಡುತ್ತಿಲ್ಲ. ಅವರಿಗೆ ಕೊನೆಯ ಎರಡು ಪಂದ್ಯಗಳಿಗೆ ತಂಡವನ್ನು ಸೇರಿಕೊಳ್ಳಲು ಸಾಧ್ಯವಾಗಿಲ್ಲ. ಆದರೂ ಅವರು ಕೂಡ ನಿವೃತ್ತಿಯಂಚಿನಲ್ಲಿರುವುದನ್ನು ಅಲ್ಲಗಳೆಯಲಾಗದು. ಅಜಿತ್ ಆಗರಕರ್ ನೇತೃತ್ವದ ಆಯ್ಕೆ ಸಮಿತಿಯು ಈ ಬಗ್ಗೆ ನಿರ್ಧಾರ ಕೈಗೊಳ್ಳಬೇಕಿದೆ. ಅವರು ಕೊನೆಯ ಅವಕಾಶ ಕೊಡುವ ಮುನ್ನ ಆಯಾ ಆಟಗಾರರೊಂದಿಗೆ ಚರ್ಚಿಸುವರೇ ಎಂಬುದೇ ಈಗ ಪ್ರಶ್ನೆ.

ತಂಡದ ನಿಕಟಪೂರ್ವ ಕೋಚ್ ರಾಹುಲ್ ದ್ರಾವಿಡ್ ಮತ್ತು ಗಂಭೀರ್ ಬಗ್ಗೆ ಸೂಕ್ಷ್ಮ ವ್ಯತ್ಯಾಸವಿದೆ. ದ್ರಾವಿಡ್ ಅವರಿಗೆ ಇಷ್ಟು ದೊಡ್ಡ ಮಟ್ಟದ ಸಂಕ್ರಮಣ ಸವಾಲನ್ನು ಎದುರಿಸುವ ಸ್ಥಿತಿ ಇರಲಿಲ್ಲ. ಆದರೆ ಅವರು ಆ ಸಂದರ್ಭದಲ್ಲಿ ವೇಗಿ ಇಶಾಂತ್ ಶರ್ಮಾ ಮತ್ತು ವಿಕೆಟ್‌ಕೀಪರ್ ವೃದ್ಧಿಮಾನ್ ಸಹಾ ಅವರಿಗೆ ರಾಷ್ಟ್ರೀಯ ತಂಡದಲ್ಲಿ ಆಡುವ ದಿನಗಳು ಮುಗಿದಿವೆ ಎಂಬ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದ್ದರು. ಅದರಿಂದಾಗಿಯೇ ಇಶಾಂತ್ ಮತ್ತು ಸಹಾ ಅವರು ತಂಡಕ್ಕೆ ಸದ್ದಿಲ್ಲದೇ ವಿದಾಯ ಹೇಳಿದ್ದರು. ಆದರೆ ಅವರಿಬ್ಬರೂ ಅಶ್ವಿನ್ ಮತ್ತಿತರರಿಗೆ ಹೋಲಿಕೆ ಮಾಡಿದರೆ ಅಷ್ಟು ದೊಡ್ಡ ಸ್ಟಾರ್‌ಗಳಾಗಿರಲಿಲ್ಲ ಎನ್ನುವುದೂ ನಿಜ.

ಭಾರತ ತಂಡದ ನಾಯಕ ರೋಹಿತ್ ಶರ್ಮಾ, ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಆಗರಕರ್ –ಎಎಫ್‌ಪಿ ಚಿತ್ರ

ಅದರಲ್ಲೂ ರೋಹಿತ್ ಮತ್ತು ವಿರಾಟ್ ಅವರ ಮೇಲೆ ಈಗ ಎಲ್ಲರ ಚಿತ್ತ ನೆಟ್ಟಿದೆ. ಗಂಭೀರ್ ನೇಮಕದ ನಂತರ ತಂಡವು ಆಡಿದ ಎಂಟು ಟೆಸ್ಟ್‌ಗಳಲ್ಲಿ ನಾಲ್ಕರಲ್ಲಿ ಸೋತಿದೆ. ಒಂದು ಡ್ರಾ ಮತ್ತು ಮೂರರಲ್ಲಿ ತಂಡ ಜಯಿಸಿದೆ. ವಿರಾಟ್ ಮತ್ತು ರೋಹಿತ್ ಅವರು ಬ್ಯಾಟಿಂಗ್ ಲಯದಲ್ಲಿ ಕೂಡ ಇಲ್ಲ. ಬ್ರಿಸ್ಬೇನ್ ಟೆಸ್ಟ್‌ನಲ್ಲಿ ಫಾಲೋ ಆನ್ ತಪ್ಪಿಸಿಕೊಂಡ ಕ್ಷಣವನ್ನೇ ದೊಡ್ಡ ಸಾಧನೆಯೆಂಬಂತೆ ಸಂಭ್ರಮಿಸಿದ್ದು ಕೂಡ ಈಗ ಕೋಚ್ ಮತ್ತು ಮ್ಯಾನೇಜ್‌ಮೆಂಟ್ ಕಣ್ಣುಗಳು ಕೆಂಪಾಗಿಸಿರುವುದು ಸುಳ್ಳಲ್ಲ.

ಗಂಭೀರ್ ಮಾರ್ಗದರ್ಶನದಲ್ಲಿ ಭಾರತ ತಂಡವು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ತಲುಪುವುದೇ? ಮುಂಬರುವ ಚಾಂಪಿಯನ್ಸ್ ಟ್ರೋಫಿ ಗೆಲ್ಲುವುದೇ? ಎಂಬ ಚರ್ಚೆಗಳು ಮುನ್ನೆಲೆಗೆ ಬಂದಿವೆ.

ತಮ್ಮ ತಂಡವನ್ನು ಕಟ್ಟಿಕೊಳ್ಳಲು ಗಂಭೀರ್ ಅವರಿಗೆ ಮುಕ್ತ ಅವಕಾಶ ನೀಡಲು ಬಿಸಿಸಿಐ ಸಿದ್ಧವಾಗಿದೆ. ಜಸ್‌ಪ್ರೀತ್ ಬೂಮ್ರಾ (ಭವಿಷ್ಯದ ಟೆಸ್ಟ್ ಕ್ರಿಕೆಟ್ ತಂಡದ ನಾಯಕ) ಮತ್ತು ಸೂರ್ಯಕುಮಾರ್ ಯಾದವ್ (ಟಿ20 ತಂಡದ ನಾಯಕ) ಅವರೊಂದಿಗೆ ಗಂಭೀರ್ ಮಾಸ್ಟರ್ ಪ್ಲಾನರ್ ಆಗುವ ಸಾಧ್ಯತೆ ಇದೆ.

ಇದು ಶೀಘ್ರದಲ್ಲಿ ಆಗಲಿಕ್ಕಿಲ್ಲ. ಆದರೆ ಹಂತ ಹಂತವಾಗಿ ನಡೆಯುವುದನ್ನು ಅಲ್ಲಗಳೆಯಲಾಗದು. ಭಾರತ ತಂಡದ ಕೋಚ್ ಹುದ್ದೆ ನಿಭಾಯಿಸುವುದು ಯಾವಾಗಲೂ ಕಠಿಣ ಸವಾಲು. ಈ ಹಿಂದೆ ಜಾನ್ ರೈಟ್, ಗ್ಯಾರಿ ಕರ್ಸ್ಟನ್ ಮತ್ತು ರವಿಶಾಸ್ತ್ರಿ ಅವರು ಆಟಗಾರರ ವಿಶ್ವಾಸ ಗಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಆದರೆ ಗ್ರೇಗ್ ಚಾಪೆಲ್ ಮತ್ತು ಅನಿಲ್ ಕುಂಬ್ಳೆ ಅವರು ಕ್ರಿಕೆಟ್ ದಿಗ್ಗಜರಾಗಿದ್ದರೂ ಕೋಚಿಂಗ್ ವಿಷಯದಲ್ಲಿ ಹೊಂದಾಣಿಕೆಯಾಗಿರಲಿಲ್ಲ. ಗಂಭೀರ್ ಯಾವ ಸಾಲಿಗೆ ಸೇರುತ್ತಾರೆ ಕಾದು ನೋಡಬೇಕಷ್ಟೇ.

ರೋಹಿತ್, ಆಕಾಶ್‌ಗೆ ಚೆಂಡಿನ ಪೆಟ್ಟು

ಮೆಲ್ಬರ್ನ್ (ಪಿಟಿಐ): ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ವೇಗಿ ಆಕಾಶ್ ದೀಪ್ ಅವರಿಗೆ ಭಾನುವಾರ ನೆಟ್ಸ್‌ನಲ್ಲಿ ಅಭ್ಯಾಸ ಮಾಡುವ ಸಂದರ್ಭದಲ್ಲಿ ಚೆಂಡಿನ ಪೆಟ್ಟು ಬಿದ್ದಿತು. ಆದರೆ ಅವರಿಬ್ಬರಿಗೂ ಯಾವುದೇ ಗಂಭೀರ ಗಾಯದ ಸಮಸ್ಯೆಯಾಗಿಲ್ಲ ಎಂದು ತಂಡದ ಮೂಲಗಳು ಸ್ಪಷ್ಟಪಡಿಸಿವೆ.

ಇದೇ 26ರಿಂದ ನಾಲ್ಕನೇ ಟೆಸ್ಟ್ ಪಂದ್ಯ ಎಂ.ಸಿ.ಜಿಯಲ್ಲಿ ಆರಂಭವಾಗಲಿದೆ.

ಇಬ್ಬರೂ ಆಟಗಾರರು ಬ್ಯಾಟಿಂಗ್ ಅಭ್ಯಾಸ ಮಾಡುವಾಗ ಥ್ರೋಡೌನ್ ಪರಿಣತರು ಹಾಕಿದ ಎಸೆತಗಳಲ್ಲಿ ಪೆಟ್ಟು ಬಿದ್ದಿತು. ರೋಹಿತ್ ಅವರ ಎಡ ಮೊಣಕಾಲಿಗೆ ಚೆಂಡು ಬಡಿಯಿತು. ನೋವು ಅನುಭವಿಸಿದ ಅವರು ಫಿಸಿಯೊ ಬಳಿ ತೆರಳಿ ಪ್ರಥಮ ಚಿಕಿತ್ಸೆ ಪಡೆದರು. ನಂತರ ಮತ್ತೆ ಅಭ್ಯಾಸ ಮುಂದುವರಿಸಿದರು. ಕುರ್ಚಿ ಮೇಲೆ ಕಾಲು ಚಾಚಿಟ್ಟುಕೊಂಡ ರೋಹಿತ್ ಅವರಿಗೆ ಐಸ್ ಪ್ಯಾಕ್ ಮೂಲಕ ಚಿಕಿತ್ಸೆ ನೀಡಲಾಯಿತು. ಆಕಾಶ್ ಅವರ ಕೈಗೆ ಚೆಂಡು ತಗಲಿತು.

'ಈ ತರಹದ ಪೆಟ್ಟುಗಳು ಅಭ್ಯಾಸ ಮಾಡುವಾಗ ಸಹಜ. ಚೆಂಡು ಕೆಳಹಂತದಲ್ಲಿ ಪುಟಿದು ಬರುವಾಗ ಈ ರೀತಿಯಾಗುತ್ತದೆ. ತರಬೇತಿಯಲ್ಲಿ ಇವೆಲ್ಲ ಸಹಜ' ಎಂದು ಆಕಾಶ್ ದೀಪ್ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ನಿರ್ದೇಶಕ ಸ್ಥಾನಕ್ಕೆ ರಾಜೀನಾಮೆ ನೀಡಿರುವೆ: ಉತ್ತಪ್ಪ

ಬೆಂಗಳೂರು: 'ಉದ್ಯೋಗಿಗಳ ಭವಿಷ್ಯ ನಿಧಿ (ಇಪಿಎಫ್) ಹಣ ವಂಚನೆ ಆರೋಪ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ನನಗೆ ಕಂಪೆನಿಗಳ ಜತೆ ಯಾವುದೇ ಸಂಬಂಧವಿಲ್ಲ' ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ರಾಬಿನ್ ಉತ್ತಪ್ಪ ಸ್ಪಷ್ಟನೆ ನೀಡಿದ್ದಾರೆ.

ರಾಬಿನ್ ಉತ್ತಪ್ಪ

'ಕಂಪೆನಿಯ ನಿರ್ದೇಶಕ ಸ್ಥಾನಕ್ಕೆ ಹಲವು ವರ್ಷಗಳ ಹಿಂದೆಯೇ ರಾಜೀನಾಮೆ ನೀಡಿದ್ದೇನೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'2018 -19ರಲ್ಲಿ ಸ್ಟ್ರಾಬೆರಿ ಲೆನ್ಸರಿಯಾ ಪ್ರೈವೇಟ್ ಲಿಮಿಟೆಡ್, ಸೆಂಟಾರಸ್ ಲೈಫ್ ಸ್ಟೈಲ್ ಬ್ರ್ಯಾಂಡ್ಸ್ ಪ್ರೈವೇಟ್ ಲಿಮಿಟೆಡ್, ಬೆರ್ರೀಸ್ ಫ್ಯಾಷನ್ ಹೌಸ್ ಕಂಪೆನಿಗಳಿಗೆ ಸಾಲದ ರೂಪದಲ್ಲಿ ಹಣಕಾಸು ತೊಡಗಿಸಿದ್ದೆ. ಹಾಗಾಗಿ ಆ ಕಂಪೆನಿಗಳಿಗೆ ನಿರ್ದೇಶಕನಾಗಿ ನೇಮಕಗೊಂಡಿದ್ದೆ. ಆದರೆ, ಸಕ್ರಿಯ ಕಾರ್ಯನಿರ್ವಾಹಕ ಪಾತ್ರ ಹೊಂದಿರಲಿಲ್ಲ ಹಾಗೂ ಕಂಪೆನಿಗಳ ದೈನಂದಿನ ವ್ಯವಹಾರಗಳಲ್ಲಿ ನಾನು ಭಾಗಿಯಾಗಿರಲಿಲ್ಲ' ಎಂದು ತಿಳಿಸಿದ್ದಾರೆ.

'ನಾನು ಸಾಲದ ರೂಪದಲ್ಲಿ ನೀಡಿದ್ದ ಹಣವನ್ನು ಮರುಪಾವತಿಸಲು ಈ ಕಂಪೆನಿಗಳು ವಿಫಲವಾಗಿವೆ. ಈ ವಿಚಾರ ನ್ಯಾಯಾಲಯದಲ್ಲಿದೆ' ಎಂದಿದ್ದಾರೆ.

'ವೃತ್ತಿಪರ ಕ್ರಿಕೆಟಿಗನಾಗಿ, ನಿರೂಪಕನಾಗಿ, ವೀಕ್ಷಕ ವಿವರಣೆಗಾರನಾಗಿ ನನಗೆ ಆ ಕಂಪೆನಿಗಳ ಕಾರ್ಯಾಚರಣೆಗಳಲ್ಲಿ ಭಾಗವಹಿಸಲು ಸಮಯವಿರಲಿಲ್ಲ ಹಾಗೂ ಅಷ್ಟು ಪರಿಣತಿಯೂ ಇರಲಿಲ್ಲ. ವಾಸ್ತವವಾಗಿ ನಾನು ಇದುವರೆಗೂ ಹಣ ಹೂಡಿಕೆ ಮಾಡಿರುವ ಇತರೆ ಕಂಪೆನಿಗಳಲ್ಲಿಯೂ ಕಾರ್ಯನಿರ್ವಾಹಕ ಪಾತ್ರವನ್ನು ವಹಿಸಿರುವುದಿಲ್ಲ' ಎಂದಿದ್ದಾರೆ.